ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳು : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕರು

ಖಾಸಿಂಅಲಿ ಗುಲಾಮಹುಸೇನ

ಮಾರ್ಗದರ್ಶಕರು

ಡಾ. ಕಲ್ಯಾಣರಾವ ಜಿ. ಪಾಟೀಲ

ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು

ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ

ಸರಕಾರಿ ಮಹಾವಿದ್ಯಾಲಯ, ಕಲಬುರಗಿ.

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಾಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಮಾನ್ಯತಾ ಕೇಂದ್ರ : ಡಾ. ಬಿ.ಡಿ ಜತ್ತಿ ವಚನ ಮತ್ತು ಸಂಶೋಧನಾ ಕೇಂದ್ರ, ಕಲಬುರಗಿ

೨೦೧೭-೧೮

ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳು : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕರು

ಖಾಸಿಂಅಲಿ ಗುಲಾಮಹುಸೇನ

ಮಾರ್ಗದರ್ಶಕರು

ಡಾ. ಕಲ್ಯಾಣರಾವ ಜಿ.ಪಾಟೀಲ

ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು

ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ

ಸರಕಾರಿ ಮಾಹಾವಿದ್ಯಾಲಯ, ಕಲಬುರಗಿ

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಮಾನ್ಯತಾ ಕೇಂದ್ರ ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನ ಕೇಂದ್ರ

ಕಲಬುರಗಿ

೨೦೧೭-೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳು : ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಶ್ರೀ ಖಾಸಿಂಅಲಿ ತಂದೆ ಗುಲಾಮಹುಸೇನ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಕಲಬುರಗಿ
ದಿನಾಂಕ : 31-08-18

ಡಾ. ಕಲ್ಯಾಣರಾವ ಜಿ.ಪಾಟೀಲ
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ
ಸರಕಾರಿ ಮಾಹಾವಿದ್ಯಾಲಯ, ಕಲಬುರಗಿ

ಸಂಶೋಧಕನ ಪ್ರಮಾಣ ಪತ್ರ

ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳು : ಒಂದು ಅಧ್ಯಯನ ಎಂಬ ನಿಬಂಧವನ್ನು **ಡಾ. ಕಲ್ಯಾಣರಾವ ಜಿ.ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮಾನ್ಯತಾ ಕೇಂದ್ರ, ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕಲಬುರಗಿಯಿಂದ ಭಾಷಾನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಕಲಬುರಗಿ

ದಿನಾಂಕ : 31-08-18

ಖಾಸಿಂಅಲಿ ಗುಲಾಮಹುಸೇನ

ಸಂಶೋಧಕ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಮತ್ತು

ಸಂಶೋಧನ ಕೇಂದ್ರ, ಕಲಬುರಗಿ

ಪರಿವಿಡಿ

ಅಧ್ಯಾಯ ಆರು

ಅಧ್ಯಾಯ : ಒಂದು
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧ ಹಿನ್ನೆಲೆ :

ಕರ್ನಾಟಕವು ಹಲವು ಭಾಷೆ, ಸಂಸ್ಕೃತಿ ವಿವಿಧ ಧರ್ಮಗಳು, ಹಬ್ಬ-ಹರಿದಿನದ ಆಚರಣೆಗಳು ಹಾಗೂ ಜನಾಂಗೀಕ ಸಂಪ್ರದಾಯಗಳನ್ನು. ಒಳಗೊಂಡು ತನ್ನದೆಯಾದ ಬಹುರೂಪಿತವನ್ನು ನಿರ್ಮಿಸಿಕೊಂಡು ನಿರ್ವಚಿಸಿದೆ. ಈ ಬಹುರೂಪಿತನವೇ, ಸಾಂಸ್ಕೃತಿಕ ವಿಶ್ವವೇ, ಇಂತಹ ಚಾರಿತ್ರಿಕ ಭೌಗೋಳಿಕ ಪ್ರದೇಶದ ವಿಸ್ತಾರತೆಯನ್ನು ಶ್ರೀವಿಜಯನು ತನ್ನ ಕವಿರಾಜಮಾರ್ಗ ಕೃತಿಯಲ್ಲಿ "ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್" ಎಂದು ಕರ್ನಾಟಕ ಗಡಿರೇಖೆಯನ್ನು ಗುರುತಿಸಿದನು. ಇಲ್ಲಿಯ ಜನರ ಭಾಷೆ, ಭಾವನೆ, ನಡತೆ ಮತ್ತು ವಿವೇಕದ ಬಗ್ಗೆ "ಕುರಿತವರಲ್ಲದೆ ಮತ್ತಂ ಪೆರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್" ಎನ್ನುವುದು. ಒಪ್ಪಿದ ಪ್ರಭುತ್ವ ಚರಿತ್ರೆಯೊಂದಿಗೆ ಇಲ್ಲಿ ದುಡಿಯುವ ಕನ್ನಡಿಗರ ಚತುರತೆ ನಿರ್ದಿಷ್ಟವಾಗಿ ಅಥವಾ ಶಾಸ್ತ್ರಿಯವಾಗಿ ಅಭ್ಯಾಸ ಮಾಡಿರದಿದ್ದರೂ, ಕಾವ್ಯ ಕಟ್ಟುವ ಶಕ್ತಿಯುಳ್ಳ ಜನಪದ ದ್ವನಿಯಾಗಿದ್ದರ ಬಗ್ಗೆ ಬಣ್ಣಿಸಿರುವುದು ಕಂಡುಬರುತ್ತದೆ.

ಹಾಗೇ ಈ ಕರ್ನಾಟಕವು ಆಡಳಿತ ದೃಷ್ಟಿಯಿಂದ ಮದ್ರಾಸ ಕರ್ನಾಟಕ, ಮುಂಬೈ ಕರ್ನಾಟಕ, ಮೈಸೂರ ಕರ್ನಾಟಕ ಹಾಗೂ ಹೈದರಾಬಾದ ಕರ್ನಾಟಕ ಎಂಬ ಹಲವು ಪ್ರಾಂತ್ಯಗಳಾಗಿ ವಿಂಗಡಿಸಿಕೊಂಡು ಆಳ್ವಿಕೆಯನ್ನು ಮಾಡಿರುವುದನ್ನು ಕಾಣುತ್ತೇವೆ. ಆದರೆ ಹಂಚಿ ಹೋಗಿದ್ದ ಕರ್ನಾಟಕವು ನಂತರ ಸ್ವಾತಂತ್ರ್ಯ ಭಾರತದ ಒಕ್ಕೂಟ ವ್ಯವಸ್ಥೆಗೆ ಹೈದರಾಬಾದ ಕರ್ನಾಟಕ ವಿಲೀನಗೊಂಡಿತ್ತು.

ಈ ಪ್ರದೇಶ ಅಥವಾ ಪ್ರಾಂತ್ಯ ವಿಲೀನಗೊಳ್ಳುವುದಕ್ಕಿಂತ ಮುಂಚೆ ಆ ಕಾಲ ಘಟ್ಟದಲ್ಲಿ ಇದೊಂದು ಸ್ವತಂತ್ರ ರಾಜ್ಯ. ಈ ಹೈದರಬಾದ ಕರ್ನಾಟಕ ಅನ್ನೋದು ಒಂದು ನಿರ್ದಿಷ್ಟ ಪ್ರದೇಶದ ಹೆಸರು. "ರಾಜಕೀಯ ಕಾರಣಗಳಿಂದ ಈ ಹೆಸರು ಈ ಪ್ರದೇಶಕ್ಕೆ ಅಥವಾ ಪ್ರಾಂತ್ಯಕ್ಕೆ ಬಂದಿದೆ. ಹಾಗೇ ನೋಡಿದರೆ ಪ್ರಾಚೀನ ಕಾಲದಿಂದಲೆ ಸಾಂಸ್ಕೃತಿಕವಾಗಿ ಈ ಪ್ರಾಂತ್ಯ ಅನೇಕ ಕಾರಣಗಳಿಗಾಗಿ ಅನ್ಯನ್ಯತೆ ಪಡೆಯುತ್ತ ಬಂದಿದೆ. ಈ ಪ್ರಾಂತ್ಯದ ಒಳಗಡೆಯೇ 'ಎಡೆದೊರೆ ನಾಡು', 'ಸಗರನಾಡು' ಹೆಸರುಳ್ಳ ಕೇಲವು ಪ್ರದೇಶಗಳು ಇವೆ".[೧] ಇದೊಂದು ರಾಜಕೀಯ ಭಾಗವಾಗಿ ರೂಪಗೊಂಡರು, ಇದಕ್ಕೆ ತನ್ನದೆಯಾದ ಜನ ಸಂಸ್ಕೃತಿ ಸಂಬಂಧಗಳು, ಅವುಗಳಲ್ಲಿಯ ತಾಕಲಾಟದ ತಕರಾರುಗಳು ಒಳಗೊಂಡಿರುತ್ತವೆ. ಅದೇರೀತಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ಆದ್ದರಿಂದ ಈ ಭಾಗ ಸಗರನಾಡು ಎಂಬುದನ್ನು :

"ಸಮ ಭೂಮಧ್ಯರೇಖಾಯಂ ಶ್ರೀಶೈಲಸ್ಯ ಪಶ್ಚಿಮೇ
ಕೃಷ್ಣವೇಣಿ ಭೀಮರತ್ಯ : ಮಧ್ಯೆ ಜಗತಿ ಪಾವನೆ॥

ಸೂರ್ಯವಂಶ ಕುಲೋತ್ಪನ್ನ ಸಗರೇಣ ವಿನಿರ್ಮಿತಂ
ಸಗರಂ ನಗರಂ ನಾಮ ಜಯತ್ಯದ್ಯಾಪಿ ವಿಶ್ರುತಂ ॥
ಭೀಮ ದಕ್ಷಿಣ ದಿಗ್ಭಾಗೆ ಪರ್ವತೋಸ್ತಿ ಮನೋರಮಃ
ಸಗರಾದ್ರಿರಿತಿ ಖ್ಯಾತ : ಹೇಮಕೂಟಸ್ಯ ಸೋದರ"[೨]

ಎನ್ನುವಂತಾ ಪುರಾಣ ಪ್ರಸಿದ್ಧನಾದ ಸಗರಚಕ್ರವರ್ತಿಯ ಹೆಸರನ್ನು ಹೊಂದಿದೆ. ಯಾದಗಿರಿ ಜಿಲ್ಲೆಯ ಶಹಾಪುರ ಸುರಪುರು ಹಾಗೂ ಕಲಬುರಗಿ ಜಿಲ್ಲೆಯ ಜೇವರ್ಗಿ ಈ ಮೂರು ತಾಲೂಕುಗಳ ಗಡಿಯ ಗೆರೆಯಂತಿರುವ ಕೃಷ್ಣ–ಭೀಮೆಯರ ನಡುವಿನ ಹರಹಿನೊಂದಿಗೆ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಹಾಗೂ ಸಿಂದಗಿ ತಾಲೂಕುಗಳ ವರೆಗಿನ ವ್ಯಾಪ್ತಿಯನ್ನು ಈ ಸಗರನಾಡು ಅತ್ಯಂತ ಪ್ರಾಚೀನವಾದದ್ದು, ಅಲ್ಲದೇ ತನ್ನ ಘನ ಐತಿಹ್ಯವನ್ನು ಮೆರೆದ ನಾಡಾಗಿದೆ.

"ಸಗರನಾಡಿನ ಪೂರ್ವಕ್ಕೆ ಎಡದೊರೆ ಎರಡು ಸಾಸಿರ, ಪಶ್ಚಿಮಕ್ಕೆ ತರ್ದವಾಡಿ ಸಾಸಿರ ಮತ್ತು ಉತ್ತರಕ್ಕೆ ಅಲಂದೆ ಸಾಸಿರ ಹಾಗೂ ದಕ್ಷಿಣಕ್ಕೆ ಕರಡುಕಲ್ಲು ಮುನ್ನೂರನ್ನು ಹೊಂದಿತ್ತು".[೩]

ಇಂತಹ ಚಾರಿತ್ರಿಕತೆಯನ್ನು ಒಳಗೊಂಡ ಪ್ರದೇಶ ಶಹಾಪುರವು ಸಗರನಾಡಿನ ಕೇಂದ್ರ ಸ್ಥಾನವಾಗಿತ್ತು. ಇದು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಸಗರನಾಡು ಎಂಬ ಹೆಸರು ಬಳಕೆಗೆ ಬಂದಿದ್ದು ಇತಿಹಾಸ ಕಾಲದಿಂದ ಆದರೆ ಸಗರ, ಸಾಗರಪುರಿ, ಸಗರಪುರ ಎಂಬ ಹೆಸರು ಪ್ರಖ್ಯಾತಿ ಪಡೆದಿದ್ದು ಪುರಾಣ ಕಾಲದಿಂದ ಈ ಭಾಗಕ್ಕೆ ಜಂಬೂದ್ವೀಪ ದಂಡಕಾರಣ್ಯ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ದಂಡಕನೆಂಬ ಅರಸು ಈ ಭಾಗವನ್ನು ಆಳಿದ್ದರಿಂದ ಇದಕ್ಕೆ ದಂಡಕಾರಣ್ಯ ಎಂಬ ಹೆಸರು ಬಂದಿದೆ. ತದನಂತರ ಸಗರ ಚಕ್ರವರ್ತಿ ಸಗರಪುರವನ್ನು ತನ್ನ ರಾಜದಾನಿಯನ್ನಾಗಿ ಮಾಡಿಕೊಂಡಿದ್ದನು ಎಂಬುದಕ್ಕೆ 'ಮಂದಾಕಿನಿ ಮಹಾತ್ಮೆ'(ಜನಪದ ಪೌರಾಣಿಕ ಐತಿಹ್ಯ ಕಥೆ)ಯಿಂದ ತಿಳಿಯುತ್ತದೆ.

ಇತಿಹಾಸ ದೃಷ್ಟಿಯಿಂದ ಈ ಭಾಗವನ್ನು ಆಳಿದ ರಾಜ ಮನೆತನಗಳಾದ ಶಾತವಾಹನರು, ರಾಷ್ಟ್ರಕೂಟರು, ಬಾದಾಮಿ ಚಾಳುಕ್ಯರು, ಕಲ್ಯಾಣದ ಚಾಳುಕ್ಯರು, ಹೈಹಯರು, ಕಳಚೂರ್ಯರು, ಶಿಲಹಾರರು, ಮಾಸವಾಡಿಯ ಸೇವುಣರು, ಮಗರ ವಂಶದವರು, ಬಹಮನಿ ಅರಸರು, ಬಿಜಾಪುರದ ಆದಿಲ್ ಶಾಹಿಗಳು ಹಾಗೂ ಸುರಪುರ ಗೋಸಲವಂಶದ ನಾಯಕರು, ಈ ಎಲ್ಲಾ ಅರಸು ಮನೆತನಗಳು ಈ ಪ್ರದೇಶವನ್ನು ಆಳಿವೆ. ಅಲ್ಲದೇ ಕಂಪನಿ ಸರ್ಕಾರ ಮತ್ತು ನಿಜಾಮ ಸರ್ಕಾರಗಳು ಇಲ್ಲಿ ತಮ್ಮ ಪ್ರಾಬಲ್ಯವನ್ನು ಬೀರಿವೆ. ಅದರಲ್ಲೂ ಶಹಾಪುರ ಪ್ರದೇಶವು ಅಂದಿನ ಸಂದರ್ಭದಲ್ಲಿ ಹೈದರಾಬಾದ ನಿಜಾಮನ ಆಡಳಿತ ವ್ಯವಸ್ಥೆಗೆ ಒಳಗೊಂಡಿತ್ತು. ಆ ಕಾರಣದಿಂದ ಉರ್ದು ರಾಜ್ಯಾಡಳಿತ ಭಾಷೆಯಾದರೆ ಪರ್ಶಿಯನ್ ಪಂಡಿತರ ಪರಿಭಾಷೆಯಾಗಿತ್ತು.

ಇಂತಹ ಪ್ರಭುತ್ವ ಆಳ್ವಿಕೆಯಲ್ಲಿ ಜನಕೇಂದ್ರಿತ ಭಾಷೆ, ಸಾಂಸ್ಕೃತಿಕ ಸಾಮರಸ್ಯ ವಿವಿಧ ಧರ್ಮದ ಜನರ ಸಂಪ್ರದಾಯಗಳು ಆಚರಣೆಗಳು, ನಂಬಿಕೆಗಳಿಗೆ ದಕ್ಕೆಯಾಗದಂತೆ ಇಲ್ಲಿಯವರೆಗೆ ಉಳಿಸಿಕೊಂಡು ಬರಲು ಬಹುಮುಖ್ಯ ಕಾರಣವಾಗಿದೆ. ಈ ನೆಲದಲ್ಲಿ ಸೂಫಿಗಳು, ಸಂತರು,

ಆರೂಢರು, ನಾಥರು ಹಾಗೂ ಶರಣರು ಇವರೆಲ್ಲರ ಸಾಂಸ್ಕೃತಿಕ ರಾಯಭಾರತ್ವದಿಂದ ಈ ಪ್ರದೇಶ ಅನ್ಯನ್ಯತೆಯಿಂದ ಸೌಹಾರ್ದತೆಯನ್ನು ಕಟ್ಟಿಕೊಂಡಿದೆ. ಅದರಲ್ಲೂ ಶಹಾಪುರ ಪ್ರಾದೇಶೀಕ ಪರಿಸರವು ಪ್ರಭುತ್ವ ಆರಳಸರ ತೆಕ್ಕೆಯಲ್ಲಿ ಘರ್ಷಣೆ ಆಗಿರುವಂತೆ ಧರ್ಮ ಸಂಘರ್ಷಣೆ ನಡೆದಿರುವ ಇತಿಹಾಸವನ್ನು ಒಳಗೊಂಡಿದೆ. ಇವೆರಡರ ತಕರಾರುಗಳ ಮಧ್ಯ ಈ ಪರಿಸರವು ಜನಸಂಸ್ಕೃತಿ ಜನ ಪಂಥವನ್ನು ಕಟ್ಟಿಕೊಂಡಿರಲು ಸೂಫಿ-ಸಂತರು ಕಾರಣವಿರಬೇಕು. ಇಲ್ಲಿನ ಪರಿಸರ ಸಂಪತ್ತು ಪೂರಕ ಸಾಮಗ್ರಿಯಾಗಿ ಅವರಿಗೆ ದೊರಕಿದ ಅಂಶಗಳು ಇರಬಹುದು. ಈ ಕಾರಣದಿಂದ ಶಹಾಪುರ ತಾಲೂಕುವು ಸೂಫಿ-ಸಂತರ ಒಂದು ಸಾಂಸ್ಕೃತಿಕ ಪರಂಪರೆಯನ್ನು ಒಳಗೊಂಡಿರುವ ಭಾಗವೆಂದು ಕರೆಯಬಹುದು.

ಈ ಪ್ರದೇಶವನ್ನು ಚಾರಿತ್ರಿಕವಾಗಿ ಪ್ರಭುತ್ವ ಚರಿತ್ರೆಯನ್ನು ಅಧ್ಯಯನಿಸಿದ ಹಾಗೆ, ಇಲ್ಲಿಯ ಜನರ ಕೂಡುಕೊಳ್ಳುವಿಕೆಯ ಬದುಕಿನ ಸಂಬಂಧಗಳನ್ನು ಸೂಫಿ-ಸಂತರ ಹಿನ್ನೆಲೆಯಲ್ಲಿ ಅಧ್ಯಯನ ಗೊಂಡಿದ್ದು ತುಂಬಾ ತೀರ ವಿರಳ. ಈ ಆಲೋಚನೆಯಿಂದ ಇಲ್ಲಿಯ ಮೂಲ ಆಕರಗಳು ಮತ್ತು ಮೌಖಿಕ ಆಕರಗಳೊಂದಿಗೆ ಚಾರಿತ್ರಿಕವಾಗಿ ಬಿಡಿಸಿಕೊಳ್ಳುತ್ತಾ ; ವಾಸ್ತವ ಅನುಸಂಧಾನಗೊಳಿಸಿ ನಿಜ ನೆಲೆಗಳನ್ನು ಪರಿಶೀಲಿಸಿ ದಾಖಲಿಸುವುದಾಗಿದೆ.

೧.೨ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಸ್ಥಳೀಯ ಚರಿತ್ರೆಯ ಅಧ್ಯಯನದ ಹಿನ್ನೆಲೆಯಲ್ಲಿ ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳು ಅಧ್ಯಯನಕ್ಕಾಗಿ ಈ ಹಿಂದೆ ನಡೆದ ಸಂಶೋಧನ ಅಧ್ಯಯನಗಳು, ಅಪ್ರಕಟಿತ ಮಹಾಪ್ರಬಂಧ, ಪ್ರಕಟಿತ ಕೃತಿಗಳಿಂದಲೂ ಮಾಹಿತಿ ಅಲ್ಲದೆ ಕ್ಷೇತ್ರ ಪರಿವೀಕ್ಷಣೆಯ ಕಾರ್ಯವನ್ನು ಪ್ರತಿ ಗ್ರಾಮದಲ್ಲಿ ನಡೆಸುವುದರ ಜೊತೆಗೆ ಶಾಸನಗಳು, ಕಾವ್ಯಗಳು, ಸ್ಮಾರಕಗಳಲ್ಲಿ ಸಿಗುವ ಮಾಹಿತಿಯನ್ನು ವಿಶ್ಲೇಷಿಸುವುದು, ಜನಸಾಮಾನ್ಯರು ಹೊಂದಿರುವ ಮೌಖಿಕ ಚರಿತ್ರೆಯ ನಂಬಿಕೆ ಮತ್ತು ಅವರಿಂದ ವಿವರಗಳನ್ನು ಸಂಗ್ರಹಿಸಲು ಈ ಅಧ್ಯಯನದಲ್ಲಿ ಉದ್ದೇಶಿಸಲಾಗಿದೆ. ಸ್ಥಳೀಯ ಚರಿತ್ರೆ, ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಒಟ್ಟುಗೂಡಿಸಿ ಸೂಫಿಸಂತರ ಚರಿತ್ರೆಯನ್ನು ನಿರ್ಮಿಸಲು ಗಮನಹರಿಸಲಾಗುವುದು.

ಪ್ರಸ್ತುತ ಅಧ್ಯಯನದಲ್ಲಿ ಸೂಫಿ-ಸಂತರು ಅಂದರೆ ಯಾರು ? ನಾವು ಯಾರನ್ನು ಸೂಫಿ-ಸಂತರು ಎನ್ನಬೇಕು. ಅವರಲ್ಲಿ ನಂಬಿಕೆಯನ್ನಿಟ್ಟ ಜನ ಸಮುದಾಯಗಳು ತಮ್ಮ ಆಚರಣೆಯೊಂದಿಗೆ ಹೇಗೆ ಬದುಕನ್ನು ಕಟ್ಟಿಕೊಂಡರು ಹಾಗೂ ಒಬ್ಬರನ್ನೊಬ್ಬರು ಜೊತೆಯಲ್ಲಿ ಕೂಡಿಕೊಂಡ ಬಗೆ ಸೌಹಾರ್ದತೆಯ ಹಿನ್ನೆಲೆಯಲ್ಲಿ ಚರ್ಚಿಸುವುದು. ಹಾಗೂ ಧರ್ಮದಲ್ಲೇ ಇದ್ದುಕೊಂಡು, ಧರ್ಮದ ಕಟುನಿಯಮಗಳನ್ನು ವಿರೋಧಿಸುತ್ತ ಜಾತಿಯ ಸಂಕೋಲೆಯಲ್ಲಿಯೂ ಜನಿಸಿ, ಜಾತಿಯನ್ನು ಮೀರಿ ಜನರ ಮಧ್ಯ ಬದುಕಿದ್ದು, ಲೋಕ ವಿರೋದಿ ನಾಡಿನಲ್ಲಿ ತಕರಾರುಗಳಾಗಿ ನಂತರ ಜನರ ಸಮುದಾಯಗಳಿಗೆ ಯೋಗಿಗಳಾಗಿ ಸೂಫಿ-ಸಂತರಾಗಿ ಬದುಕಿ ಅಸುನೀಗಿದ್ದನ್ನು ಅದೇ ಸಮುದಾಯಗಳಿಗೆ ದೈವೀಸ್ವರೂಪಿಯಾಗಿ ಸಂಬಿಕೆಯ ಪ್ರಧಾನ ವಸ್ತುವಾಗಿ ಹೇಗೆ ಕಂಡುಕೊಂಡರು

ಎಂಬ ತಾತ್ವಿಕತೆಯನ್ನು ಅವಲೋಕಿಸಿ ಚರ್ಚಿಸುವುದು ಆಗಿದೆ. ಇಂದಿನ ಸಂದರ್ಭದಲ್ಲಿ ಈ ನಾಡಿನಲ್ಲಿ ಜಾತಿ, ಮತ, ಧರ್ಮ, ಪಂಥ, ಪಂಗಡಗಳ ಹೆಸರಿನಲ್ಲಿ ಆಗಾಗ ಘರ್ಷಣೆಗಳು ನಡೆಯುತ್ತಲೇ ಇವೆ. ಬೌದ್ಧ, ಜೈನ, ವೀರಶೈವ, ವೈಷ್ಣವ, ಲಿಂಗಾಯತ, ಹಿಂದೂ, ಕ್ರೈಸ್ತ ಹಾಗೂ ಮುಸ್ಲಿಂ ಮತಗಳ(ಧರ್ಮ) ನಡುವೆ ಘರ್ಷಣೆಗಳು ನಾಂದಿಯಾಗಿ ವಾತಾವರಣವನ್ನೇ ಕಲುಷಿತಗೊಂಡಾಗ ; ಸೂಫಿ–ಸಂತರು ನಮ್ಮ ನಾಡಿನಲ್ಲಿ ಕಾಣಿಸಿಕೊಳ್ಳುವಲ್ಲಿ ಹೇಗೆ ಅರ್ಥಪೂರ್ಣವಾಗಿದ್ದರು ಎಂಬ ಪರಿಕಲ್ಪನೆಯೊಂದಿಗೆ ಸೂಕ್ಷ್ಮ ನೋಟದಿಂದ ಕಾಣುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸೌಹಾರ್ದತೆಯ ಹಿನ್ನೆಲೆಯಲ್ಲಿ ಸೂಫಿ–ಸಂತರ ತತ್ವ, ನಂಬಿಕೆಗಳನ್ನು ಸಾರ್ವತ್ರಿಕಗೊಳಿಸುವಲ್ಲಿ ಅನೇಕ ಪ್ರಶ್ನೆಗಳು ಕಂಡು ಬಂದಿವೆ. "ನಾವುಗಳು ಹಿಂದೂ ಜನರು ದರ್ಗಾಗಳಿಗೆ ಹೋಗುತ್ತಿರುತ್ತಾರೆ ಆದರೆ ತುರ್ಕರು(ಮುಸ್ಲಿಮರು) ಗುಡಿ–ಗುಂಡಾರಕ್ಕೆ ಯಾಕೆ ಬರಲ್ಲ ? ಅವರು ಬಂದರೂ ಬೆರಳೆಣಿಕೆ ಅಷ್ಟೇ, ಇಂತಹ ವಿಷಯಗಳನ್ನು ಹೇಗೆ 'ಸೌಹಾರ್ದತೆ'ಯಲ್ಲಿ ಕಂಡುಕೊಂಡು ನಿಮ್ಮ ಅಧ್ಯಯನದಲ್ಲಿ ನೋಡುತ್ತೀರಿ" ಎನ್ನುವ ಪ್ರಶ್ನೆಗಳು ಸಹ ರೀತಿಯಲ್ಲಿ ಇದಿರುಗೊಂಡಿವೆ. ಇನ್ನೂ ಕೆಲವರು ಇದನ್ನು 'ಸಂಕರಣತೆ' ಎಂದು ನಿಮ್ಮ ಅಧ್ಯಯನದಲ್ಲಿ ಕರೆದುಕೊಂಡರೆ ಸೂಕ್ತ ಅನಿಸುತ್ತದೆಂದು ಸಲಹೆಗಳನ್ನು ನೀಡಿದ್ದುಂಟು. ಇಂತವುಗಳನ್ನು ಸೂಕ್ಷ್ಮತೆಯಿಂದ ಚರ್ಚಿಸಿದೆ. ಹಾಗೂ ಸಾಮರಸ್ಯ ಕಾಣುವ ಬೇಗೆಯಲ್ಲಿ 'ಅತ್ತಣಿಂದ ಹಿಂದೂ ನೆಲ, ಇತ್ತಣಿಂದ ಮುಸಲ್ಮಾನ ನೀರು, ಪರಸ್ಪರ ಎರಗಿ ಬರುವಾಗ ನಡುವೆ ನಿಂತು ನಿಭಾಯಿಸುತ್ತದೆ. ಪ್ರೀತಿಯ ನೆಲೆಗಳಾಗಿರುತ್ತವೆ. ಇವು ಸೂಫಿ ನೆಲೆಗಳು ರೂಪಿತವಾದದ್ದು, ಮುಸಲ್ಮಾನ ದೊರೆಗಳ ಕಾಲದಲ್ಲಿ ಆದರೆ ಮುಸಲ್ಮಾನ ದೊರೆಗಳಿಂದಾಗಿ ಅಲ್ಲ ಅಥವಾ ಮುಲ್ಲಾಗಳಿಂದಾಗಿಯೂ ಅಲ್ಲ. ಪ್ರತಿರೋಧದ ನೆಲೆಗಳಾಗಿ ರೂಪಿತವಾದವು ಹಿಂದೂ–ಮುಸಲ್ಮಾನ ಎರಡು ಧರ್ಮಗಳ ಬಡಜನರ ಅಧ್ಯಾತ್ಮಿಕತೆಯಾಗಿ ರೂಪಿತವಾದವು'[4] ಎಂಬ ದೃಷ್ಠಿಯಲ್ಲಿ ಸೂಫಿ–ಸಂತರನ್ನು ಮತ್ತು ಜನರ ನಂಬಿಕೆಯನ್ನು ನೋಡುವ ಇರಾದೆ ಇಲ್ಲಿದೆ.

ಹಾಗೇ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ಒಳಗಿರುವ ಸೂಕ್ಷ್ಮತೆಗಳನ್ನು. ಪ್ರಭುತ್ವ ಚಿಂತನೆಗಳನ್ನು ಪರಿಶೀಲಿಸಿ, ಮತೀಯ ಚಿಂತನೆಗಳಿಂದ ಬಿಡುಗಡೆಗೊಳೊಸುತ್ತಾ. ಪ್ರತಿರೋಧನ ಹಿನ್ನೆಲೆಯಲ್ಲಿ ಚರ್ಚಿಸಿಕೊಂಡು ಹೋಗುವುದು. ಅಲ್ಲಿಯ ಅಂತಃರಕರಣದ ಸಂಬಂಧಗಳನ್ನು ಹುಡುಕಾಡುವುದು. ಜನರ ನಂಬಿಕೆ, ಪರಂಪರೆ, ಚರಿತ್ರೆಕಾರರ ಗುದ್ದಾಟಗಳು, ಕದಡುವ ಸಾಂಸ್ಕೃತಿಕ ಚಿಂತನೆಗಳು ಹಾಗೂ ಅನುಸಂಧಾನಗಳು ಇವುಗಳನ್ನು ನೋಡುವ ಪರಿಯೂ ಹೌದು.

ಸಾಂಸ್ಕೃತಿಕ ಚಿಂತಕರಾದ ಪ್ರಸನ್ನ ಅವರು ಹೇಳುವ ಹಾಗೇ : "ನೆರೆ ಬಂದಾಗ ನೀರು ಈ ಮರಗಳನ್ನು ಬುಡಮೇಲು ಮಾಡಲಾರದು. ಹಲವು ಕಾಂಡಗಳ ಹಿಡಿತವಿರುತ್ತದೆ. ಮರಕ್ಕೆ ಹಾಗೂ ಮರದ ಅಡಿಯಲ್ಲಿ ನೀರು ಸರಾಗವಾಗಿ ಆಚೀಚೆ ಹರಿದು ಹೋಗಬಲ್ಲುದಾಗಿರುತ್ತದೆ. ಹೀಗೆ ನೀರು ಹಾಗೂ ನೆಲ ಎರಡನ್ನು ಸಮರ್ಥವಾಗಿ ನಿಭಾಯಿಸಬಲ್ಲ ಸಸ್ಯಗಳು ಸೂಫಿಗಳು

ಹಾಗೂ ಸಂತರು ಕೂಡ ಅಳವೆ ಕಾಡುಗಳಂತೆ ಎರಡು ಜಗತ್ತುಗಳನ್ನು ಏಕಕಾಲದಲ್ಲಿ ನಿಭಾಯಿಸುತ್ತಾರೆ. ಆಧುನಿಕ ಯುಗವು ಆಳವೆ ಕಾಡುಗಳನ್ನು ಅಪ್ರಯೋಜಕ ಅರಣ್ಯಗಳೆಂದು ತಿಳಿದು ಸವರತೊಡಗಿತು ಆದರೆ ನಿಧಾನವಾಗಿ ಇವುಗಳ ಉಪಯುಕ್ತತೆ ಅರಿವಾಯಿತು. ಇತ್ತಣಿಂದ ಭೂಮಿ ಕೊಚ್ಚಿಕೊಂಡು ಹೋಗದಂತೆ, ಅತ್ತಣಿಂದ ನೆರೆಯ ನೀರು ಒಳನುಗ್ಗದಂತೆ ಜೈವಿಕ ತಡೆಗೋಡೆಗಳಂತೆ ಕಾರ್ಯನಿರ್ವಹಿಸುತ್ತವೆ ಎಂದು ಅರಿವಾಯಿತು. ಅನೇಕ ಜೀವ ಪ್ರಭೇದಗಳಗೆ ಆಶ್ರಯ ನೀಡುತ್ತವೆ ಎಂದು ಅರಿವಾಯಿತು, ಸೂಫಿ ಪಂಥ ಸಹ ಹೀಗೆಯೇ ಸರಿ"[೫] ಎಂದು ಗುರುತಿಸುತ್ತಾರೆ.

ಹಾಗೆಯೇ ಸಂತರ ಬಗ್ಗೆ ಎಲ್.ಬಿ.ಕೆ ಆಲ್ದಾಳ ಅವರು ತಮ್ಮ 'ಚಕ್ರತೀರ್ಥ' ನಾಟಕದಲ್ಲಿ "ಮಾನವ–ಮಹಾಮಾನವನಾಗಲು' 'ಪುರುಷ–ಮಹಾಪುರುಷನಾಗಲು' ಆತನ ಶ್ರಮ, ಪರಿಶ್ರಮ, ಆಸಕ್ತಿ, ಅಭಿರುಚಿಗಳೇ ಸಾಕು ಎಂಬುದಕ್ಕೆ ಈ ಚಕ್ರತೀರ್ಥ ನಾಟಕದ ನಾಯಕ 'ಶ್ರೀರಾಮದಾಸರ' ಬದುಕೇ ಮಾದರಿಯಾಗಿದೆ. ಧರ್ಮ, ಜಾತಿ, ಮತ, ಪಂಥ, ಪಂಗಡಗಳು ಹೂದೋಟಕ್ಕೆ ಹಾಕಿದ ಬೇಲಿಯಂತೆ ; ಹೂದೋಟದ ರಕ್ಷಣೆಗಾಗಿ, ಹೊಲದ ಮಾಲಿಕ ಅದಕ್ಕೆ ಬೇಲಿ ಹಾಕಿದರೂ. ಅಲ್ಲಿರುವ ಹೂಗಳ ಸುವಾಸನೆ 'ಬೇಲಿ', ಮಿತಿ, ಬಂಧನವನ್ನು ಮೀರಿ, ದಾರಿಹೋಕರಿಗೆ ತಲುಪುವಂತಯೇ, 'ಶ್ರೀರಾಮದಾಸರ' ಬದುಕಿನ ಸಾಧನೆಯೂ ಅದೇ ರೀತಿಯಲ್ಲಿ ಸಮಾಜಕ್ಕೊಂದು ಧಾರ್ಮಿಕ ಸಾಮರಸ್ಯದ ಸಂದೇಶವಾಹಕವಾಗಿದೆ."[೬] ಎಂದು ಪ್ರತಿಪಾದಿಸುತ್ತಾರೆ ಇಂತಹ ಸೂಕ್ಷ್ಮತೆಗಳನ್ನು ನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಆದ್ದರಿಂದ ಈ ಅಧ್ಯಯನವು **ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳು : ಒಂದು ಅಧ್ಯಯನ** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ನಾಗನಟಗಿ, ಸಗರ, ದಿಗ್ಗಿ, ಶಹಾಪುರ ಹಾಗೂ ಗೋಗಿ ಈ ಗ್ರಾಮಗಳನ್ನು ಅನುಲಕ್ಷಿಸಿ ನೋಡಲಾಗಿದೆ. ಇಲ್ಲಿ ಸೂಫಿ–ಸಂತರ ನಂಬಿಕೆಯ ಪರಂಪರೆಯೊಂದಿಗೆ ಬದುಕಿದ ಜನ ಸಮುದಾಯಗಳು ಧಾರ್ಮಿಕ ಆಚರಣೆಗಳು ಹೇಗೆ ತಮ್ಮ ಅಸ್ತಿತ್ವದ ಬದುಕನ್ನು ಸೌಹಾರ್ದತೆಯೊಂದಿಗೆ ಬಾಳಿದರೆಂಬ ಮಹತ್ವದ ಸಂಗತಿಗಳನ್ನು ದಾಖಲಿಸುವುದು ಹಾಗೂ ಸಾಂಸ್ಕೃತಿಕ ಕೊಡುಗೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವಾಗಿದೆ. ಇಂದಿನ ಜಾಗತಿಕ ಮತ್ತು ಧಾರ್ಮಿಕ ಪೈಪೋಟಿಯನ್ನು(ಹೈಜಾಕ್ ಸಂಸ್ಕೃತಿ–ಕಾರ್ಪೋರೆಟರ್ ಧರ್ಮ) ಸಂಕ್ಷಿಪ್ತ ರೀತಿಯಲ್ಲಿ ವಿಶ್ಲೇಷಿಸುವುದಾಗಿದೆ.

ಈ ಸಂಶೋಧನೆಯು ಬಹು ಮುಖ್ಯವಾಗಿ ಸೂಫಿ–ಸಂತರಾದ ಶಹಾಪುರದ ಅಮರ ಕಲ್ಯಾಣ, ನಾಗನಟಗಿ ಪರಮಾನಂದ, ಸಗರದ ಸೂಫಿ ಸರಮಸ್ತ, ದಿಗ್ಗಿ ಸಂಗಮನಾಥ ಹಾಗೂ ಗೋಗಿ(ಗೂಗಿ) ಚಂದಾಹುಸೇನಿ ಇವರ ಚಾರಿತ್ರಿಕ ದಾಖಲೆಗಳ ಬಗ್ಗೆ ಚರ್ಚಿಸಿ ಪರಂಪರೆಯನ್ನು ಗುರುತಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ.

೧.೩. ಅಧ್ಯಯನದ ವಿಧಿ, ವಿಧಾನ

ಸಂಶೋಧನೆಯು ಹಲವಾರು ವಿಧಾನಗಳಲ್ಲಿ ನಡೆಯುವಂತದ್ದು, ಇದು ಭಾಷಾ ನಿಕಾಯದ

ಸಾಹಿತ್ಯಯಲ್ಲಿ ಅಡಗಿರುವ ಸ್ಥಳೀಯ ಚರಿತ್ರೆ ರಚನೆಯ ಮೇಲೆ ಬೆಳಕು ಚೆಲ್ಲುವಂತದ್ದು, ಇಲ್ಲಿ ಕ್ಷೇತ್ರ ಕಾರ್ಯವು ಅನಿವಾರ್ಯವಾಗಿರುತ್ತದೆ. ಅಲ್ಲಿ ದೊರೆಯುವ ಲಿಖಿತ ಮತ್ತು ಮೌಖಿಕ ಆಕರಗಳನ್ನು ಪರಾಮರ್ಶಿಸುವ, ವಿಮರ್ಶಾತ್ಮಕ, ವಿವರಣಾತ್ಮಕ ವಿಧಾನಗಳ ಮೂಲಕ ಮಾಹಿತಿ ಸಂಗ್ರಹಿಸಿ, ವಿದ್ವಾಂಸರ ಬೇಟಿಯಿಂದ ಸೂಫಿಸಂತರಿಗೆ ಸಂಬಂಧಿಸಿದ ಮಾಹಿತಿ ಮತ್ತು ಘಟನೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವದು, ಸಂಗ್ರಹಿಸಿದ ಮಾಹಿತಿಯನ್ನು ತೌಲನಿಕ ವಿಧಾನದಿಂದ ಪರಿಶೀಲಿಸುವುದರಿಂದ ಈ ಸಂಶೋಧನೆಯು ಬಹುಶಿಸ್ತೀಯ ಅಧ್ಯಯನಗಳಲ್ಲಿ ನಡೆಯುತ್ತದೆ.

ಇಲ್ಲಿ ಲಿಖಿತ ಮತ್ತು ಮೌಖಿಕ ಆಕರಗಳ ಜೊತೆಗೆ ವಕ್ತೃಗಳ ಸಂದರ್ಶನದಿಂದ ದೊರೆಯುವ ಮಾಹಿತಿಗಳನ್ನು ತೌಲನಿಕವಾಗಿ ಪರಿಶೀಲಿಸುವುದು. ಇವುಗಳ ಸಾಂಸ್ಕೃತಿಕ ಅಧ್ಯಯನಕ್ಕಾಗಿ ಹಿಂದೆ ನಡೆದ ಸಂಶೋಧನಾ ಅಧ್ಯಯನಗಳು ; ಅಪ್ರಕಟಿತ ಮಹಾಪ್ರಬಂಧ, ಪ್ರಕಟಿತ ಕೃತಿಗಳಿಂದ ಮಾಹಿತಿ ಪಡೆಯುವುದು. ಅಲ್ಲದೇ ಕ್ಷೇತ್ರ ಪರಿವೀಕ್ಷಣೆಯ ಕಾರ್ಯವನ್ನು ವಿಷಯಕ್ಕೆ ಸಂಬಂಧಿಸಿದ ಆಯ್ಕೆ ಗ್ರಾಮ, ಊರುಗಳಲ್ಲಿಯ ಶಾಸನಗಳು, ಕಾವ್ಯಗಳು, ಸ್ಮಾರಕಗಳಲ್ಲಿ ದೊರಕುವ ಮಾಹಿತಿಗಳು. ಅಲ್ಲಿಯ ಜನರ ನಂಬಿಕೆಯ ಮಿತ್‌ಸಂಕಥನಗಳು ವ್ಯಾಪ್ತಿಗೆ ಒಳಪಡಿಸಿ ನೋಡುವ ಚಿಕ್ಕ ಪ್ರಯತ್ನ ಇಲ್ಲಿದೆ.

ಕೊನೆಯ ಟಿಪ್ಪಣಿಗಳು :

೧ ತತ್ವಪದ ಸಾಹಿತ್ಯ ಅಧ್ಯಯನ, ಅಮರೇಶ ನುಗಡೋಣಿ, ಪು.ಸಂ-೦೧

೨ ಸಗರನಾಡ ದರ್ಶನ(ಸಂ), ಕೃಷ್ಣ.ಎ.ಸುರಪುರ, ಪು.ಸಂ-೧೦

೩ ಅದೇ ಪುಟ

೪ ಸಂತರು ಸೂಫಿಗಳು ಹಾಗೂ ಅಳವೆ ಕಾಡುಗಳು. ಪ್ರಜಾವಾಣಿ ಅಭಿಮತ, ಏಪ್ರಿಲ್ ೨೦೧೮ರ ಪ್ರಕಟಗೊಂಡ ಲೇಖನ, ಪ್ರಸನ್ನ.

೫ ಅದೇ ಪುಟ

೬ ಚಕ್ರತೀರ್ಥ(ನಾಟಕ), ಎಲ್.ಬಿ.ಕೆ.ಆಲ್ದಾಳ, ಪುಟ-೧

ಅಧ್ಯಾಯ : ಎರಡು

೨.೧ ಚರಿತ್ರೆ ಮತ್ತು ಸಂಕಥನಗಳ : ಮುಖಾಮುಖಿ

ಹೈದರಾಬಾದ ಕರ್ನಾಟಕ ಅನೇಕ ಭಾಗಗಳಲ್ಲಿ, ಅದರಲ್ಲೂ ಶಹಾಪುರ ತಾಲೂಕಿನ ಪರಿಸರದಲ್ಲಿ ಸೂಫಿ-ಸಂತರ ಜಾತ್ರೆಗಳು, ಮೊಹರಂ ಆಚರಣೆಗಳು, ಪಲ್ಲಕ್ಕಿ ಉತ್ಸವಗಳು ಹಾಗೂ ರಥೋತ್ಸವ ಸಂಭ್ರಮಾಚರಣೆಗಳು ನಡೆಯುತ್ತಿರುತ್ತವೆ. ಅಲ್ಲಿಯ ಜನರ ಘೋಷಣೆಗಳು ಈಗ ನೆನಪಿಗೆ ಬರುತ್ತಿವೆ ಅವು ಹೀಗಿವೆ :

"ಸೂಫಿ ಶರಮಸ್ತ್ ಕೀ ದೋಸ್ತರಾ ಓವುದೀನ್"

"ಹಸನ್ ಹುಸೇನ್ ಕೀ ದೋಸ್ತರಾದೀನ್"

"ಸೈದ್ ಕಾಶೀಮ ಕೀ ದೋಸ್ತರಾದೀನ್" ಅನ್ನುವುದಾಗಲಿ

"ಏಕಲಾಕ ಪೈಗಂಬರ ಚಂದಾಹುಸೇನಿ ಪಾಂಚ ಹಜಾರೆ ರಹೇ : ಡಿಗ್ಗಿ ಸಂಗಮನಾಥ ಮಹಾರಾಜ ಕೀ ಜೈ"

"ಓಂ ಪರಾಕ ; ಚಂದಾಹುಸೇನಿ ಡಿಗ್ಗಿ ಸಂಗಮನಾಥ ಬಹುಪರಾಕ"

ಇಂತಹ ಏರಿಳಿತ ಘೋಷಣೆಗಳು ನನ್ನನ್ನು ಆಕರ್ಷಿಸಿ ಸಂತೋಷ ನೀಡಿದ್ದು ಇದೆ. ಅದರೊಳಗಿನ ಒಳಾರ್ಥಗಳು ಗೊತ್ತಿರಲಿಲ್ಲ. ಯಾವಾಗ ಇಲ್ಲಿಯ ಜನಸಂಪ್ರದಾಯಗಳು, ಆಚರಣೆಗಳನ್ನು ಎದಿರಿಗಿಟ್ಟುಕೊಂಡು ಸೌಹಾರ್ದತೆಯ ದೃಷ್ಟಿಯಲ್ಲಿ ನೋಡಲು, ಹುಡುಕಾಟದಲ್ಲಿ ಪರದಾಡಿದೆನೋ ಆಗ ಈ 'ದೋಸ್ತರದೀನ್' ಎಂಬುದು ಸೂಫಿ-ಸಂತರ ಹೆಸರಿನೊಂದಿಗೆ ಕೊನೆಗೊಳುತ್ತದೆ ಎಂದು ತಿಳಿಯಿತು. ಇದು ಮತೀಯತೆಯನ್ನು ಮೀರಿದ ಗೆಳೆತನ. ಇದರಲ್ಲಿ ಗುರುವಿನ ಹೆಸರನ್ನು ಒಳಗೊಂಡಿರುತ್ತದೆ. ಅವರಲ್ಲಿನ ಗೆಳೆತನ ಗುದ್ದಾಟಗಳು ಹಾಗೂ ಗುರು-ಶಿಷ್ಯರ ಒಳಸಂಘರ್ಷಗಳು ತೋರಿದವು. "ಈ ಗೆಳೆತನ ಮತ್ತು ಗುದ್ದಾಟಗಳ ಪರಿಯನ್ನು ಅರಿಯುವುದು ತುಂಬಾ ಸ್ವಾರಸ್ಯಕರ. ಕರ್ನಾಟಕದ ಸೂಫಿಸಂತರ ಬಗ್ಗೆ ತಿಳಿಯುವುದು ಅಂದರೆ ಅದು ಗತಕಾಲದ ಕಥನವಲ್ಲ, ಈ ಹೊತ್ತಿನ ಈ ನಾಡಿನ ಜನಸಮುದಾಯಗಳ ಕಥನ ಕೂಡ. ಯಾಕೆಂದರೆ ಒಂದು ಕಾಲದಲ್ಲಿ ಜೀವಂತ ವ್ಯಕ್ತಿಗಳಾಗಿ ಬದುಕಿದ್ದ ಸೂಫಿಗಳು ಈಗ ದೈವಗಳಾಗಿ ಬೇರೊಂದು ರೀತಿಯಲ್ಲಿ ಬದುಕಿದ್ದಾರೆ. ಇದೊಂದು ಬಗೆಯ ರೂಪ, ಈ ರೂಪಾಂತರ ಬೆನ್ನು ಹತ್ತಿ ಹೋದರೆ ಸೂಫಿಸಂತರ ಚರಿತ್ರೆಯ ಜತೆಜತೆಗೇ ಅವರನ್ನು ತಮ್ಮ ಮನದ ನನೆಕೊನೆಯಲ್ಲಿ ಬದುಕಗೊಟ್ಟಿರುವ ಸಮುದಾಯಗಳ ದರ್ಶನ ಮಾಡಿದಂತಾಗುತ್ತದೆ".[೧] ಆದ್ದರಿಂದ ನನ್ನ ಬಾಲ್ಯದಲ್ಲಿ ಕೇಳಿದ ಕಥೆ ನೆನಪಿಗೆ ಬರುತ್ತದೆ. ಅದನ್ನು ನಮೂದಿಸುವುದು ಅಧ್ಯಯನದ ದೃಷ್ಟಿಯಿಂದ ಅನಿವಾರ್ಯ ಅನಿಸುತ್ತದೆ. ಚಿಕ್ಕಂದಿನಲ್ಲಿ ನಮ್ಮ ಮನೆಯಲ್ಲಿ ಉಸಿರು ನಿಲ್ಲದಷ್ಟು ಬಿಕ್ಕಿಬಿಕ್ಕಿ ಅಳುತ್ತಿದ್ದೆ. ನನ್ನನ್ನು ಸಮಾಧಾನ ಪಡಿಸಲು ನಮ್ಮಮ್ಮ ಫೀರಮ್ಮಳು ತನ್ನ ಮಗ್ಗುಲಲ್ಲಿ ಎತ್ತಿಕೊಂಡು ಮ್ಯಾಳಿಗಮ್ಯಾಲ ಕರೆದುಕೊಂಡು ಹೋಗುತಿದ್ದಳು, ಹೋಗಿ ನಾನೊಂದು ಕಥೆ ಹೇಳುತ್ತೇನೆ 'ಅಳಬಾರದು ಸುಮ್ಮನಿರು'

ಅಂತ ಚೊಕಾಸಿ. ಆ ಕಥೆ ನಿಮ್ಮ ಪಡದಾದನ ಶಿಷ್ಯನ ಬಗ್ಗೆ ಎಂದು ಸೂರ್ಯ ಮುಳುಗುವ ದಿಕ್ಕಿನಲ್ಲಿರುವ ಹಾಳೊಲ, ಅಂದರೆ ಊರು ಹಿರಿಕುರುಬರ ಹೊಲದಲ್ಲಿರುವ ಗೋರಿಯ ಕಡೆ ಬೆರಳು ತೋರಿಸಿ ಕಥೆಯನ್ನು ಹೇಳುತ್ತಿದ್ದಳು. ಆ ಕಥೆಯೂ ಹೀಗಿದೆ :

"ಬುಡ್ಡ ಈ ಕಡೆ ನೋಡು ಅಲ್ಲಿ ದೂರ ಕಾಣುತ್ತದಲ್ಲ ಅದು ಬೇವಿನಗಿಡ ಐತಲ್ಲ ಆ ಗಿಡದ ಬುಡಕ್ ಜೇಜಿ ಐತಲ್ಲ. ಆ ಜೇಜಿಯನ್ನು ಬೇಟಿಯಾಗಲು ಬಹುದೂರದಿಂದ ರಾಜರು ಬರುತಿದ್ದರು. ಅವರಲ್ಲಿ ಬಿಜಾಪುರದ ರಾಜ ಮೊಹಮ್ಮದ ಶಾಹ ಎಂಬ ಭಕ್ತ ನಿಮ್ಮ ಪಡದಾದ ಆನಲ್ಲ ಸಗರ ಸೂಫಿ ಶರಮಸ್ತನನ್ನು(ಸರಮಸ್ತ) ಬೇಟಿಯಾಗಲು ಹೋಗಬೇಕಾದ್ರೆ ಮೊದಲು ಈತನನ್ನು ಬೇಟಿಯಾಗಿ ಹೋಗಬೇಕಾಯಿತು. ಆ ಜೇಜಿ ಹೆಸರು ಏನು ಗೋತ್ತಾ ? ಆತನ ಹೆಸರು ದಾರುಶಿಕು ಅಂತ. ಆತ ನಿಮ್ಮ ಪಡದಾದನ ಶಿಷ್ಯ. ಈತನ ಪವಾಡ ಶಕ್ತಿ ಅಂತಿಂತಲ್ಲ. ಅದನ್ನು ಕೇಳಿದರೆ ಒಂದು ರೋಮಾಂಚನ. ಅದೇನಂದ್ರೆ ಒಮ್ಮೆ ನಮ್ಮೂರಿಗೆ ನಾಕಲೋಕಕ್ಕ ಹೆಸರಾದ ಸೂಫಿ ಬಂದಿದ್ದ. ಆತನು ಈ ಜೇಜಿಗಿಂತ ದೊಡ್ಡವನು. ಅವರು ಕುರಿ ಇರತಾವಲ್ಲ, ಆ ಕುರಿ ಉಣ್ಣಿಯ ನಿಲುವಂಗಿ ಹುಟ್ಟುಕೊಂಡು ಹುಲಿಯ ಮೇಲೆ ಸವಾರಿ ಮಾಡಿಕೊಂಡು ಬಂದು ನಿಂತುಕೊಂಡ. ನಮ್ಮೂರಿನ ಜನರಿಗೆ ನಿಮ್ಮ ಗುರುಗಳು ಎಲ್ಲಿ ಅವರೀಗ ಏನ್ ಮಾಡುತ್ತಿದ್ದಾರೆ. ಅವನ ಜೋತೆ ನೀವು ಜಪಾ ಮಾಡಿಕೊಂಡು ಇರುತ್ತಿರಿ, ಅದನು ಬಿಟ್ಟು ನಿಮ್ಮಿಂದಾಗಲಿ, ಅವರಿಂದಾಗಲಿ ಏನ್ ಮಾಡಕಾಗುತ್ತೆ. ನೋಡ್ರೀಗ ನನ್ನಂಗ ಪವಾಡ ಶಕ್ತಿವಂತನಾದ್ರೆ ಹುಲಿಯ ಮೇಲೆ ಕುಳಿತುಕೊಂಡು ಬಂದು ನನ್ನನ್ನು ಬೇಟಿಯಾಗು ಅಂತ ಹೋಗಿ ಹೇಳ್ರಿ. ಅವರು ಬರೊವರೆಗೂ ನಾನಿಲ್ಲೆ ಕಾಯುತ್ತಿನಿ ಅಂತ ಸವಾಲ್ ಒಡ್ಡಿದ. ಆಗ ನಮ್ಮೂರಿನ ಜನರು ಭಯದಿಂದ ಓಡಿ ಆತನಲ್ಲಿಗೆ ಬಂದು ಆತನೇಳಿದ ಎಲ್ಲ ಮಾತುಗಳನ್ನು ಯಥಾವತ್ತಾಗಿ ಬಿಚ್ಚಿ ಹೇಳಿದರು. ಅವಾಗ ಆ ಜೇಜಿ ತನ್ನ 'ಮಣಿ ಜಪ' ಕಾರ್ಯ ಮುಗಿಸಿಕೊಂಡು ಆಯಿತು, ಸರಿ ಎಂದು ತಾನು ಕುಳಿತಿರುವ ಕಟ್ಟೆಯನ್ನು ಕುದುರಿಯ ರೀತಿಯಲ್ಲಿ ಓಡಿಸಿಕೊಂಡು ಆತನಲ್ಲಿಗೆ ಹೊರಟನು. ಈತನ ಬರುವಿಕೆಯ ರೋಷವನ್ನು ಕಂಡು ಆ ಹುಲಿ ಸವಾರನು ತನ್ನ ಕೊರಳಲ್ಲಿರುವ 'ಮಣಿಹಾರ ಮತ್ತು ಶೈನಶಮಲ' ಇವುಗಳನ್ನು ಆ ಜೇಜಿಗೆ ಪಲಿ ನೀಡಿ ಶರಣಾದನು. ಅವರಿಬ್ಬರೂ ಮೊದಲು ದೊಸ್ತನಾಗಿದ್ದು, ನಂತರ ಆ ಜೇಜಿಗೆ ಶಿಷ್ಯನಾಗುತ್ತಾನೆ"

ಎಂದು ಹೇಳಿ ರಮಿಸುತ್ತಿದ್ದಳು. ಇದೊಂದು ಬಗೆಯ ಕಥೆ ನನಗೆ ರೋಮಾಂಚನಗೊಳಿಸಿದರೆ. ಇನ್ನೊಂದು ಕಥೆ ಕೇಳಿದ್ದು ತಿಳಿಯುವ ವಯಸ್ಸಿನಲ್ಲಿ ಸಾದು ನಿಂಗಯ್ಯ ಮುತ್ಯ ಹೇಳಿದ್ದು. ಆತ ತನ್ನ ಮೀಸೆ ಜಗ್ಗಬೇಕಾದ್ರೆ ಅವನ ಅಂಬಲಿ(ಗಾಂಜಾ ಇದನ್ನು ಆತ ಅಂಬಲಿ ಎಂದು ಕರೆಯುತ್ತಿದ್ದ) ತಿಕ್ಕಬೇಕಾಗಿತ್ತು. ಆತನಿಗೆ ಇಳಿವಯಸ್ಸು ಇರುವುದರಿಂದ ತನ್ನ

ಶಕ್ತಿಯಿಂದ ತಿಕ್ಕುವುದು ಆಗದ ಕಾರಣದಿಂದ. ನಾವು ಆಟವಾಡುವ ಅಂಗಳಕಟ್ಟೆ(ಊರಿನ ಹನುಮಂದಿರ ಮಗ್ಗುಲಲ್ಲಿರುವ ಕಟ್ಟೆಗೆ ನಮ್ಮೂರ ಜನ ಅಂಗಳಕಟ್ಟೆ ಎಂದು ಕರೆಯುತ್ತಾರೆ)ಯಲ್ಲಿ ಬಂದು ಕುಳಿತು ನಾ ಒಂದ ಕಥೆ ಹೇಳುತಿನಿ ಇಲ್ಲಿ ಬರ್ರಿ ಅಂತ ಕರಿತಿದ್ದ, ಕೆಲವರಂತೂ ಹೋಗಿ ಕುಳಿತಕೊಂಡು ಕಥೆ ಕೇಳ್ತಿದ್ವಿ, ಇನ್ನು ಕೇಲವರು ಬರುತ್ತಿರಲಿಲ್ಲ. ಅವರು ತನ್ನ ಆಚಾದ ಕರಾಕತ್ಯಾನ ಯಾಕೋಗಮ್ಮ ಅಂತ ಗುನುಗುತ್ತ ಆಟ ಆಡುತಿದ್ರು ನಾನಂತೂ ಆ ಮುತ್ಯಾನನ್ನು ಕಂಡ್ರೆ ತುಂಬಾ ಖುಷಿ ಏಕೆಂದರೆ ಆತನ ಕೆಲಸ ಕೇಳಿದ್ರೆ ಪೇಪರ ಮೀಠಾಯಿಕೊಟ್ಟು ಒಂದು ಕಥೆ ಹೇಳುತ್ತಿದ್ದ ಅದರಲ್ಲಿ ಒಂದು ಗುರು–ಶಿಷ್ಯರ ಬಗ್ಗೆ ಹೀಗಿದೆ :

> "ಹೀಂಗ ಒಂದ ದೊಡ್ಡ ಗುಡ್ಡವಿತ್ತು ಅಲ್ಲಿ ಆದಲ್ಲ ನಮ್ಮೂರು ಮಲ್ಲಯ್ಯನ ಗುಡ್ಡ ಅದನ್ನ ಅತ್ತಿಕೊಂಡು ಹೋಗಿ ಕೊಳ್ಳ ದಾಟಿ ಸ್ವಲ್ಪ ದೂರ ನಡೆದ್ರ ಅಲ್ಲೊಂದು ಸಾಧುವಿನ ಗುಡ್ಡ ಬರುತೇ ಅಲ್ಲಿ ಒಂದ ಸಣ್ಣ ಊರು ಉಮರದೊಡ್ಡಿ ಬರುತ್ತೆ ಆ ಊರಿಂದ ಮತ್ತೇ ಅಂಗೆ ಕೆಳಗ ಹೋಗಬೇಕು. ಅಲ್ಲೊಂದು ಇದರಕ್ಕಿಂತ ದೊಡ್ಡ ಗುಡ್ಡ ಬರ್ತದ ಅಂತವು ಎರಡು ಗುಡ್ಡ ಮೂರು ಕೊಳ್ಳಗಳು ದಾಟಿ ಹೋದರೆ ಅಲ್ಲಿ ದೊಡ್ಡ ಹಾಸುಬಂಡೆಯ ಕಲ್ಲು ಇದೆ. ಆ ಕಲ್ಲು ಬಂಡೆಯ ಮೇಲೆ ಚಿಕ್ಕದೊಂದು ಜಗಲಿಕಟ್ಟೆ ಇದೆ. ಆ ಕಟ್ಟೆಯಲ್ಲಿ ಯಾವ ಮೂರ್ತಿಯೂ ಇಲ್ಲ ಅಲ್ಲಿಗೆ ಹಗಲಲ್ಲಿ ಒಬ್ಬರಿಗೆ ಹೋಗಕ್ಕಾಗಲ, ಇನ್ನೂ ರಾತ್ರಿಯಂತು ಕೇಳಬಾರದು, ಅಂತಹ ಭಯನಾಕ ಜಾಗಕ್ಕ ಪರಪಯ್ಯ ಹೋಗಿ ಬರುತ್ತಿದ್ದ. ಈತನ್ನೊಬ್ಬ ಸಂಚಾರಿ. ಅದು ಈತನ ಗುರುವಿನ ಸ್ಥಳವಾಗಿತ್ತು, ಆ ಗುರುವಿನ ಹೆಸರು 'ಅಮರಕಲ್ಯಾಣ' ಅಲ್ಲಿಗೆ ಹೋಗಲು ಹಿಂದೂ–ಮುಸ್ಲಿಂ ಅಂತ ಬಿನ್ನಭೇದವಿಲ್ಲ, ಯಾರಾದ್ರು ಹೋಗಿ ಬರಬಹುದು. ಅದಕ್ಕೆ ಆ ಪರಪಯ್ಯನ ಶಿಷ್ಯ ಇಮ್ಮಣ್ಣನಾಗಿದ್ದ.
>
> ಒಂದು ದಿನ ಈತನಿಗೂ ತನ್ನ ಗುರು ಪರಪಯ್ಯನಿಗೂ ಸವಾಲು–ಜವಾಬ್ ಕವಾಯಿತ್ ನಡೆದಿತ್ತು. ಗುರು ನೆಲದಲ್ಲಿ ಹಾಕಿರುವ ಗುಲಗಂಜಿ ಕಂಬ ಕಿತ್ತಿ ತನ್ನ ಶಕ್ತಿಯನ್ನು ಪ್ರದರ್ಶಿಸಿದ. ಇದನ್ನು ಕಂಡ ಶಿಷ್ಯ ಇಮ್ಮಣ್ಣನ್ನು ಮುಳ್ಳುಗಳಿರುವ 'ದೆವ್ವಗಳ ಪಟ್ಟಿ ಗಿಡ'ವನ್ನು ನೆಲದಿಂದ ಬುಡಮೇಲ್ ಸಮೇತ ಕಿತ್ತು ತೋರಿಸಿದನು. ಇದು ನೋಡಿದ ಗುರು ಪರಪಯ್ಯನು ಶರಣಾಗಿ ದೀಕ್ಷೆ ವಸ್ತ್ರವನ್ನು ನೀಡಿದನು".

ಎಂಬ ಈ ಮಿತ್ ಸಂಕಥನಗಳಲ್ಲಿ ಒಬ್ಬರಿಗಿಂತ ಒಬ್ಬರೂ ಮಿಗಿಲಾಗುವ ಪರೀಕ್ಷೆಗಳನ್ನು ಸೂಚಿಸಿದ್ದು ಕಾಣುತ್ತೇವೆ. ಇವೆರಡರಲ್ಲಿ ವಿಭಿನ್ನ ಚಿಂತನೆ ಸಂಸ್ಕೃತಿ ಕಂಡುಬಂದರೂ. ಇವುಗಳಲ್ಲಿ ದ್ವೇಷ, ಅಪಮಾನ, ನೋವುಗಳಲ್ಲಿ ಮುಗಿಯುವುದಿಲ್ಲ. ಇದೊಂದು ರೀತಿ ಗುರು–ಶಿಷ್ಯತ್ವ ಹಾಗೂ ಗೆಳೆತನ ಸಂಬಂಧದಲ್ಲಿ ಕೂಡಿಕೊಳ್ಳುತ್ತದೆ. ಇದೊಂದು ಮಾರ್ಮಿಕ ಸಂಗತಿಯೂ ಹೌದು.

ಇವುಗಳಲ್ಲಿ ಯಾರು ಗೆದ್ರು ? ಯಾರನ್ನು ಯಾರಿಗೆ ಹೇಗೆ ಸೋಲಿಸಿದ್ರು ? ಅನ್ನುವುದು ಸಮುದಾಯಗಳಿಗೆ ಪ್ರಶ್ನೆಗಳಾಗಿ ಕಾಣುವುದಿಲ್ಲ. ಅವುಗಳ ನಂಬಿಕೆ, ಆಚರಣೆಯ ಸ್ವರೂಪಗಳಾಗಿ ಕಂಡು ಹೇಗೆ ಅವರಿಗೆ ಫಲಿತಗಳಾದವು ಅನ್ನುವುದರ ಹುಡುಕಾಟ. ಇಲ್ಲಿ ರಾಜಕಾರಣ ಹೇಗೆ ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮತೆಯಿಂದ ಗಮನ ಹರಿಸುವುದು ಆಗಿದೆ.

ಇಂತ ಮಿತ್‌ಗಳ ಆಕರ್ಷಣೆಯ ಚರಿತ್ರೆಯೊಳಗಿನ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲಾರದಷ್ಟು ಕಷ್ಟಕರ ಆಗುವ ಕಾರಣ ಇರಬಹುದು. ಆದ್ದರಿಂದಲೇ ರಹಮತ್ ತರಿಕೇರಿಯವರು "ಸೂಫಿ-ಸಂತರ ಚರಿತ್ರೆಯನ್ನು ಕಟ್ಟುವುದೆಂದರೆ ಹುಟ್ಟಿಲ್ಲದ ದೋಣಿಯಲ್ಲಿ ಕುಳಿತು ಹರಿಯುವ ನದಿಯಲ್ಲಿ ಪಯಣ ಹೊರಟಂತೆ, ಸೆಳವು ಬಂದತ್ತ ಹೋಗುವ ಆಕರ್ಷಣೆಯೂ ಇದೆ. ಬೇಕಾದಕಡೆ ಹೋಗಲಾಗದ ಸಮಸ್ಯೆಯೂ ಇದೆ. ಗ್ರಂಥ ಶಾಸನಗಳಂತಹ 'ಸ್ಥಾವರ' ದಾಖಲೆಗಳನ್ನು ನೆಚ್ಚಿ, ಚರಿತ್ರೆಯನ್ನು ಕಟ್ಟುವ ಪ್ರಸಿದ್ಧ ವಿಧಾನವೊಂದು ಇದೆಯಷ್ಟೆ. ಆದರೆ ಈ ವಿಧಾನವನ್ನು ಕಂಗೆಡಿಸುವ ಲೋಕ ಸೂಫಿಗಳದ್ದು. ವೇಷ ಮರೆಸಿಕೊಂಡು ಹಲವು ರೂಪಗಳಲ್ಲಿ ಸುಳಿದಾಡುವ 'ಚರಿತ್ರೆ' ಇಲ್ಲಿ ದೈವವಿದ್ದಂತೆ. ಇದೆ ಎಂದರೆ ಇದೆ. ಇಲ್ಲವೆಂದರೆ ಇಲ್ಲ ಚರಿತ್ರೆಯು ಇಲ್ಲಿ ಪುರಾಣವಾಗಿ ನಂಬಿಕೆಯಾಗಿ ಆಚರಣೆಯಾಗಿ ಹೋಗಿರುತ್ತದೆ. ಮತ್ತದು ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಸಮುದಾಯಗಳು ಬಾಳಿನ ಒತ್ತಡಗಳಿಗೆ ತಕ್ಕಂತೆ, ತಮ್ಮ ಅನುಭವಲೋಕದ ರಕ್ತಮಾಂಸಗಳಿಂದ ರೂಪಿಸಿದ ಕೂಸಿನಂತೆ, ಈ ಚರಿತ್ರೆ ಇರುತ್ತದೆ. ಗತದ ನೆನಪುಗಳನ್ನು ಸದ್ಯದ ಅನುಭವಗಳೊಂದಿಗೆ ಬೆರೆಸುವ ಸಮುದಾಯಗಳು, ತಮ್ಮ ಸೃಜನಶೀಲತೆಯನ್ನು ಪ್ರಕಟಿಸುವ ರೀತಿಯೇ ಆಕರ್ಷಕ"[೨] ಎಂದು ಕರೆದು. ನವಲಗುಂದದ ಬಳಿ ಇರುವ ಯಮನೂರಪ್ಪನನ್ನು ಉದಾಹರಣೆಗೆ ಗಮನಿಸುತ್ತಾರೆ. ಈ ಯಮನೂರಪ್ಪನ ಬಗ್ಗೆ ತಿಳಿದುಕೊಳ್ಳಲು ಉತ್ತರ ಕರ್ನಾಟಕ ಭಾಗಗಳಲ್ಲಿ ಈತನ ಹೆಸರಿನ ಮೇಲೆ ಮೊಹರಂ ಆಚರಣೆಯನ್ನೆ ಮಾಡುತ್ತಾರೆ. ಇತನಿಗೆ ಇನ್ನೊಂದು 'ರಾಜಾಬಾಗ್ ಸವಾರನೆಂಬ' ಹೆಸರಿದೆ. ಈ ಪರಂಪರೆಗೆ ಬಂದೇ ನವಾಜರು, ಸಿದ್ದಪ್ಪಾಜೀ. ಮಲೆಮಾದೇಶ್ವರು ಒಳಗೊಂಡಂತೆ ಕಂಡುಬರುತ್ತದೆ. ಇವರು ಜನರ ಬದುಕಿನ ಸಂಕಷ್ಟಗಳು ಸುಖಗಳಿಗೆ ದೈವಿಕರು ಅಷ್ಟೆ ಎಲ್ಲೋ ಹುಟ್ಟಿ ಬೆಳೆದ ಈ ಸಂತರನ್ನು ತಮ್ಮೂರಿವನನ್ನಾಗಿ ಮಾಡಿಕೊಂಡು ಬದುಕಿದ್ದ, ಜನಸಮುದಾಯಗಳು ಅವರ ಬಗ್ಗೆ ಜನ ಕಟ್ಟಿಕೊಟ್ಟ ಮಿತ್‌ಗಳನ್ನು ಸೂಕ್ಷ್ಮವಾಗಿ ನೋಡುವ ಕಣ್ಣುಗಳು ಒಳಗಾಗಬೇಕು, ಇಲ್ಲಂದ್ರೆ ಅದು ಮೌಢ್ಯಲೋಕ ಕಂತೆಯಾಗಿ ಕಂಡುಬರುತ್ತದೆ.

ಇದೊಂದು ರೀತಿಯೂ ಆಕಾಶದಲ್ಲಿ ಮೋಡಗಳು ಬಯಲುಗೊಂಡತೆ, ಸೂಫಿ-ಸಂತರ ಮಿತ್‌ಗಳು ಒಳಗೊಂಡಿರುತ್ತವೆ. ಇವುಗಳನ್ನು ಕುರಿತು ಅಧ್ಯಯನಿಸುವಾಗ ಚರಿತ್ರೆಕಾರರು ಖಚಿತತೆಯನ್ನು ಬೇಡುವ ಸಂದರ್ಭದಲ್ಲಿ. ಪಾಶ್ಚತ್ಯ ಮತ್ತು ದೇಶಿಯ ಅಧ್ಯಯನಕಾರರು ಪರಿಪಟ್ಲಿಗೆ ಒಳಗಾಗುತ್ತಾರೆ. ಅಂತವರಲ್ಲಿ ಪಾಶ್ಚಾತ್ಯ ಅಧ್ಯಯನಕಾರರಾದ ಬಹುಮುಖ್ಯವಾಗಿ. ಬ್ರಿಗ್ಸ್, ಅಲ್ಬರೋನಿ

ಕಂಡುಬಂದರೆ. ದೇಶಿಯ ನೆಲದಲ್ಲಿ ಕಪಟರಾಳ ಕೃಷ್ಣರಾಯರು, ಶಂಬಾ ಜೋಶಿ, ರಾನಡೆ, ಡಾ.ಅಬ್ದುಲ ಹಮೀದ್, ಫಕೀರ್ ಮಹಮ್ಮದ್ ಕಟ್ಪಾಡಿ, ಆರ್.ಸಿ.ಹಿರೇಮಠ, ಎಂ.ಎಂ.ಕಲಬುರಗಿ, ಪ್ರೊ. ಅಬ್ದುಲ್ ಬಸೀರ, ಡಾ.ವೀರಣ್ಣ ದಂಡೆ, ಡಾ.ಕೃಷ್ಣ ಕೋಲಾರ ಕುಲಕರ್ಣಿ, ರಹಮತ್ ತರೀಕೆರಿ ಹಾಗೂ ಬೋಡೆ ರಿಯಾಜ್ ಅಹ್ಮದ್ ಇತ್ಯಾದಿ ಚಿಂತಕರು ಸೂಫಿ–ಸಂತರ ಪರಂಪರೆಯನ್ನು ಕುರಿತು ಅಧ್ಯಯನಿಸುವಾಗ. ಸಮಸ್ಯೆಗಳಲ್ಲಿ ಸಿಲುಕಿದ ಬಗ್ಗೆ ಅವರ ಅನುಭವಗಳನ್ನು ಸಂಶೋಧನಾ ಕೃತಿಗಳಲ್ಲಿ ನೋಡಬಹುದು. ಆದ್ದರಿಂದ ಇದೊಂದು ಚರಿತ್ರೆಕಾರರಿಗೆ ಸವಾಲಿನಂತೆ ಕಾಣುತ್ತದೆ.

ಪಾಶ್ಚಾತ್ಯ ಚಿಂತಕರಾದ ಬ್ರಿಗ್ಸ್ ಅವರು ನಾಥಪಂಥದ "ಗೂಗಾಪೀರನ" ಬಗ್ಗೆ ಚರಿತ್ರೆಯನ್ನು ಬಿಡಿಸಿಕೊಂಡು ಕಾಲನಿರ್ಣಯಿಸಿಕೊಳ್ಳುವಾಗ. ಆತನು ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಾನೆ. ಅಲ್ಲಿಯ ಜನರು ಆ ಗೂಗಾಪೀರನ ಬಗ್ಗೆ ಕಟ್ಟಿರುವ ಕಥೆ–ಹಾಡುಗಳಲ್ಲಿ ಮುಸ್ಲಿಂ ಸುಲ್ತಾನರಾದ ಮಹ್ಮದ ಗಜನಿಯಿಂದ ಹಿಡಿದುಕೊಂಡು ಔರಂಗಜೇಬ ತನಕ ಅನೇಕ ದೊರೆಗಳ ಜೊತೆ ಹಲವಾರು ಬಾರಿ ಯುದ್ಧ ಮಾಡಿದ್ದನೆಂಬ ಸಂಗತಿಗಳು ಕೇಳಿದ್ದು, ಆತನನ್ನು ದಂಗು ಬಡಿಸಿದವು. ಈ ದೊರೆಗಳು ೧೧ರಿಂದ ೧೭ನೇ ಶತಮಾನ ಮಧ್ಯಕಾಲದ ವರೆಗೂ ಕಂಡುಬರುತ್ತಾರೆಂದು ಚರಿತ್ರೆಕಾರರು ಗುರುತಿಸುತ್ತಾರೆ. ಇವರ ವಿರುದ್ಧ ದಂಗೆ ಮಾಡಿದ ಆ ಗೂಗಾಪೀರನ ಕಾಲ ಯಾವುದು ? ಎಂದು ಕೇಳಿದರೆ ನಿಖರತೆ ಬೇಡುವ ಚರಿತ್ರೆಕಾರರಿಗೆ ತಲೆ ಬಿಸಿಯಂತೆ ಕಾಣುತ್ತದೆ. ಇದಕ್ಕೆ ಶಾಸ್ತ್ರವಿಧಾನತೆಯೂ ಗೊಂದಲಕ್ಕೆ ಸಿಲುಕುತ್ತದೆ. ಇದರಂತೆ ಗೋರಕನಾಥ ಬಗ್ಗೆಯೂ ಇದೆ ಗೊಂದಲ, ಆತನು ಪುರಾಣದಲ್ಲಿ ಶಿವನ ಜೊತೆಗಿದ್ದ ಎಂದು ಹೇಳುತ್ತಿವೆ. ಕನ್ನಡ ಕಾವ್ಯ ಪುರಾಣಗಳಲ್ಲಿ ಬರುವ ರೇವಣಸಿದ್ದನನ್ನು ಕೊಲ್ಲಾಪುರದಲ್ಲಿ ಬೇಟಿಯಾಗುವುದು. ಪಂಜಾಬಿನ ಬಾಬಪರೀದನ ಜೊತೆ ಮಾತನಾಡಿದ್ದು, ಕಬೀರನ ಜೊತೆ ತಿರುಗಾಡಿದ್ದು, ಇದೆಲ್ಲಾ ಒಬ್ಬ ವ್ಯಕ್ತಿ ತಾನೆ ? ಇದು ಜನರು ತಾವು ನಂಬಿದ ದೈವಗಳು ಬದುಕಿ ಎಲ್ಲಾದರು ತಿರುಗಾಡಬಹುದು ಎಂಬುದನ್ನೇ ತಿಳಿಸುವ ಪರಿ. ಇದರ ಒಳಗಿನ ಭಾವನೆಯನ್ನೆ ಅರ್ಥಮಾಡಿಕೊಳ್ಳದೇ ಹೋದರೆ ಒಂದು ಕಂತೆಯಾಗಿ ನೋಡುವ ದೃಷ್ಟಿಯಾಗಿ ಕಾಣುತ್ತದೆ.

ಇತ್ತೀಚಿನ ಕರ್ನಾಟಕದಲ್ಲಿ ಆಗಾಗ ತಲೆ ಬಿಸಿಯಾಗಿ ಧರ್ಮ ಸಂಘರ್ಷಣೆಗಳಿಗೆ ನಾಂದಿಯಾಗುತ್ತಿರುವ ಬಾಬಾಬುಡನಗಿರಿ ಒಂದು. ಯಂಕಂಚಿಯ ದಾವಲಮಲಿಕ ಇನ್ನೊಂದು. ಇವುಗಳ ಬಗ್ಗೆ ಚಾರಿತ್ರಿಕವಾಗಿ ಬಿಡಿಸಿಕೊಳ್ಳುವಾಗ ಇತಿಹಾಸಕಾರರಿಗೆ ಸವಾಲು ರೀತಿಯಲ್ಲಿ ಕಂಡು ಕಂದಕ ಸೃಷ್ಟಿ ಮಾಡುತ್ತಿರುತ್ತಿವೆ. ಕೆಲವರು ದಾದಾಹಯತನ ಶಿಷ್ಯ ಅಥವಾ ದತ್ತಪಂಥದ ಒಬ್ಬ ಸಂಗಡಿಗ ಎಂದು ಗುರುತಿಸುತ್ತಾರೆ. ಅದರಂತೆ ಯಂಕಂಚಿಯ ದವಲಮಲಿಕನ ದೃಷ್ಟಿಯಲ್ಲೂ ಸಹ ಒಬ್ಬರು ದವಲಮಲಿಕ ಎಂಬುದು ಬಾಗ್ದಾದಿನ ರಾಜಬಕ್ಷನ ಶಿಷ್ಯ ದವಲಮಲಿಕ ಅಂದರೆ ಇನ್ನೂ ಕೆಲವರು ಇಲ್ಲ ಈತ ಯಮನೂರಪ್ಪನೇ 'ದೌಲತ್' ಎಂದು ಗುರುತಿಸುತ್ತಾರೆ. ಇವೆರಡರಲ್ಲೂ ಜನರ ಭಾವನೆಗಳನ್ನು ಕೆರಳಿಸಿ ಕಂದಕ ಸೃಷ್ಟಿ ಮಾಡುವ ಸ್ವರೂಪ ಚರಿತ್ರೆಯಲ್ಲಿ ಸಾದ್ಯತೆ ಇದೆ.

ಏಕೆಂದರೆ ಸೂಫಿ-ಸಂತರು ಯಾವ ಕಾಲದಲ್ಲೇ ದೇಶದಲ್ಲಿ, ಧರ್ಮದಲ್ಲಿ ಜನಿಸಿರಲಿ. ಅವರನ್ನು ಸಮಕಾಲೀನ ಒಳಗೆ ಒಂದು ಮತೀಯ ದೃಷ್ಟಿಕೋನದಲ್ಲಿ ನೋಡುವುದಲ್ಲ. ಇದೊಂದು ರೀತಿ ಜನರ ನಂಬಿಕೆಯ ಜಗತ್ತನ್ನು ಹಾಯಲಾಗದ ಕಂದಕ ನಿರ್ಮಿಸಿಕೊಂಡ ಬಾಗಿಲು ತೆರೆದುಕೊಳ್ಳುತ್ತದೆ. ಹಾಗೆಯೇ ಕಲಬುರಗಿಯ ಬಂದೇ ನವಾಜರು ಕೇಶವ ಚೈತನ್ಯನಾಗುವುದು, ಆಳಂದದ ಲಾಡ್ಲಮಶಾಕನು ರಾಘವ ಚೈತನ್ಯನಾಗುವುದು, ಚಿಸ್ತಿ ನಾಸಿರುದ್ದಿನ್ ಚಿರಾಗರು ನಾಗನಾಥನಾಗುವುದು ಹಾಗೂ ಹೆಗ್ರಾಸ್ ಮರಿಸ್ವಾಮಿ ಕನಸಿನಲ್ಲಿ ಬಂದು ಹೇಳಿದ್ದು, ಕರೆದಿದ್ದು ವಿಚಿತ್ರ ಅನಿಸಬಹುದು. ಅನಿಸಿದರೂ ಇವುಗಳಲ್ಲಿ ಸುಳ್ಳು-ಸತ್ಯ ಪ್ರಶ್ನೆಗಳದ್ದಲ್ಲ.

"ಭಾರತದ ಸೂಫಿವಾದವು ಅನೇಕ ಅನುಭಾವಿ ಪಂಥಗಳ ಜತೆ ನಡೆಸಿದ ನಿರಂತರ ಕೊಳುಕೊಡೆಗಳ ಸಂಕರರೂಪಿ ಪರಿಣಾಮವುಳ್ಳದ್ದು. ಹುಲಿ ಮತ್ತು ಕಟ್ಟೆಗಳ ಮುಖಾಮುಖಿ ಈ ಬೆರೆತವನ್ನೇ ಸೂಚಿಸುತ್ತದೆ. ನಾಸಿರುದ್ದೀನ ನಾಗನಾಥನಾಗುವುದು, ಬಂದೇನವಾಜರು ಕೇಶವ ಚೈತನ್ಯನಾಗುವುದು, ಅಷ್ಪೂರಿನ ಅಲಿ ಆದಿಲಶಾ ಶಾ ಆಲಮಪ್ರಭು ಎನಿಸಿಕೊಳ್ಳುವುದು, ಚಾಂಗದೇವ ಚಾಂಗಫೀರನಾಗುವುದು, ಕಾಗಿನೆಲೆಯ ಸಂಗಮೇಶ್ವರ ಆದಂಪೀರನಾಗುವುದು ಯಾವುದು ಇಲ್ಲಿ ವಿಚಿತ್ರವಲ್ಲ. ಹಾಗೆಂದು ಇದು ಸರಳವಾದ ಕೋಮು ಸಾಮರಸ್ಯ ಅಲ್ಲ ಸೂಫಿ ಹಾಗೂ ಅನೇಕ ತಾತ್ವಿಕ ಪಂಥಗಳು ಅನನ್ಯವಾಗಿ ಬೆರೆತಿರುವುದರ ಫಲ. ಬಂದೇ ನವಾಜನಿಗೆ ಕುಸನೂರಿನ ಸಿದ್ದಪ್ಪನು, ನಾಸಿರುದ್ದೀನನಿಗೆ ಹೆಗ್ರಾಸಸ್ವಾಮಿಯು, ಗೋವಿಂದಭಟ್ಟನಿಗೆ ಶಿಶುನಾಳ ಶರೀಫನು ಶಿಷ್ಯನಾಗುವುದು ಇಲ್ಲಿ ಸಹಜ. ತಾತ್ವಿಕ ನೆಲೆಯಲ್ಲಿ ನಡೆದಿರಬಹುದಾದ ಈ ಕೊಡುಕೊಳೆ, ಜನ ಪರಂಪರೆಯ ಒಳಗೆ ಸಾಂಸ್ಕೃತಿಕ ಕೊಡುಕೊಳೆಯಾಗಿ ಗುಪ್ತವಾಗಿ ಮುಂದುವರೆಯುತ್ತದೆ. ಸೂಫಿಗಳ ಗಾಢಪ್ರಭಾವದಲ್ಲಿ ರೂಪಿತಳೆದಿರುವ ಕೊಡೆಕಲ್, ತಿಂಥಣಿ, ಸಾವಳಗಿ, ಶಿರಹಟ್ಟಿ, ಬಬಲಾದಿ ಮುಂತಾದವು ಕರ್ನಾಟಕದ ಪ್ರಮುಖ ಸಂಕರರೂಪಿ ಸಂಪ್ರದಾಯಗಳಾಗಿವೆ. ಇಂತಹವು ಇನ್ನೂ ಎಷ್ಟೋ ಇವೆ ಇವುಗಳ ಅಧ್ಯಯನವು ವಿಭಿನ್ನ ತಾತ್ವಿಕಧಾರೆಗಳು ಮುಖಾಮುಖಿಯಾಗಿರುವ ಕಥನ ಮಾತ್ರ ಅಲ್ಲ, ಹಿಂದೆ ಹೇಳಿದಂತೇ ಬೇರೊಂದು ಆಚರಣೆಯ ಲೋಕವಾಗಿಸಿರುವ ಸಮುದಾಯಗಳ ಸಾಂಸ್ಕೃತಿಕ ಸೃಜನಶೀಲತೆಯ ಕಥನ ಕೂಡ"[೩]

ಆದರೆ ಕೆಲವು ಸಾಂಪ್ರದಾಯಿಕ ಚರಿತ್ರೆಕಾರರು. ಜನರು ತಮ್ಮ ಕ್ರೀಯಾಶೀಲತೆಯಿಂದ ಕಟ್ಟಿಕೊಂಡಿರುವ ಚರಿತ್ರೆಯನ್ನು ಅರ್ಥಮಾಡಿಕೊಳ್ಳದೇ ಕರ್ನಾಟಕ ಸಾಂಸ್ಕೃತಿಕ ಪರಂಪರೆಯೊಳಗೆ 'ಮಧ್ಯಕಾಲಿನ ಚರಿತ್ರೆ'ಯನ್ನು ಅರಿಯಲು ಹೋಗಿ. ಕೇವಲ ಮುಸ್ಲಿಂ ಅರಸರ ಆಕ್ರಮಣಗಳ ಕೊರೆದಾಡಿ ಚಿತ್ರಗಳು ಎದ್ದು ತೋರುತ್ತವೆ. ಇದಕ್ಕೆ ರಾಷ್ಟ್ರೀಯತೆ, ದೇಶಿಯತೆ ಮೂಶೆ ಹಾಗೂ ಮತೀಯ ದೃಷ್ಟಿಕೋನ ಇರಬಹುದು. ಅದೇ ಕರ್ನಾಟಕ ಸಂಸ್ಕೃತಿ ಚರಿತ್ರೆ ಧರ್ಮದ ಒಳಗೆ ಜನರ ನಂಬಿಕೊಂಡು ಬರುವ ಶಹಾಪುರ ಅಮರಕಲ್ಯಾಣ ಪರಂಪರೆ, ತಿಂಥಣಿ ಮೋನಪ್ಪ ಪರಂಪರೆ, ದಿಗ್ಗಿಸಂಗಮನಾಥನ ಪರಂಪರೆ, ಗೋಗಿ ಚಂದಾಹುಸೈನಿ ಪರಂಪರೆ ಹಾಗೂ ಕೊಡೆಕಲ್

ಸಂಪ್ರದಾಯಗಳು ಹಾಗೂ ಪರಮಾನಂದರ ಸಂಪ್ರದಾಯಗಳು ಕರ್ನಾಟಕ ಬರೆಹ ಸಂಸ್ಕೃತಿಯೊಳಗೆ ಯಾಕೆ ಕಾಣಲಿಲ್ಲ ? ಕೇವಲ ಹಿಂದು-ಮುಸ್ಲಿಂ ಧರ್ಮ ನೆನೆಯುವ ಚರಿತ್ರೆಕಾರರು ಇಲ್ಲಿನ ಸೂಫಿ-ಸಂತರು ಈ ನಾಡಿನ ಭಾಷೆ, ಧರ್ಮ, ಸಂಸ್ಕೃತಿ, ಸಂಗೀತ, ತತ್ವದರ್ಶನ ಹಾಗೂ ಸಾಹಿತ್ಯದಲ್ಲಿ ಕೊಡಕೊಳ್ಳುವಿಕೆಯನ್ನು ಕುರಿತು ಚರ್ಚಿಸದೆ ಇರುವುದು ಒಂದು ದುರಂತವೂ ಆಗಿದೆ.

ಹತ್ತೊಂಬತ್ತನೆಯ ಶತಮಾನ ಸಂದರ್ಭದಲ್ಲಿ ಸಾಂಸ್ಕೃತಿಕ ಚಿಂತಕರು ಹಾಗೂ ಚರಿತ್ರೆಕಾರರು ರಾಷ್ಟ್ರೀಯತೆಯ ಭರಾಟೆಯಲ್ಲಿ ಧಾರ್ಮಿಕ ಚರಿತ್ರೆಯನ್ನು ನೋಡಲು ಪ್ರಯತ್ನಿಸಿದರು. ಒಂದು ಕಾಲದಲ್ಲಿ ಸಂಭವಿಸಿದ ಘಟನೆಗಳನ್ನು. ಸಮಕಾಲೀನದಲ್ಲಿ ನೋಡಿ. ಧರ್ಮ ಧ್ವಂಸಗೊಂಡಿತು ಎಂದು ದಾಖಲಿಸಿ ಇದು ಸತ್ಯ ಎನ್ನುವ ರೀತಿಯಲ್ಲಿ ಪ್ರತಿಪಾದಿಸಿದರು. ಕೇವಲ ಧರ್ಮ ಪ್ರಭುತ್ವಕ್ಕಾಗಿಯೇ ಯುದ್ಧ ಅಥವಾ ಸಂಘರ್ಷ ಮಾಡಿ ಒಂದು ಸಂಸ್ಕೃತಿಯನ್ನು ವಿನಾಶಗೊಳಿಸಿವೆ ಅನ್ನುವುದಾದರೆ ವಿಜಯನಗರ ಆಂತರಿಕ ಒಳಜಗಳ ಮತ್ತು ದಖನ್ನಿನ ಪಂಚ ಶಾಹಿ ರಾಜ್ಯಗಳ ನಾಶಕ್ಕೆ ಯಾರು ಕಾರಣ ? ಅವುಗಳ ನಾಶಕ್ಕೆ ತಮ್ಮ-ತಮ್ಮೊಳಗೆ ಮಾಡಿಕೊಂಡ ಸಂಘರ್ಷಗಳು ತಾನೆ ? ಇಂತಹವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ. ಅವರು ಅಧಿಕಾರಕ್ಕಾಗಿ ನಡೆದ ಸಂಗತಿ ಅಂತ. ಪ್ರಭುತ್ವ ಸಂಸ್ಕೃತಿಯ ವಾದಿಗಳ ಗಮನ ಹರಿಸಲಿಲ್ಲ ಎಂದು ಕಾಣುತ್ತದೆ. ಈ ದೃಷ್ಟಿಯಲ್ಲಿ ರಹಮತ ತರೀಕೆರೆಯವರು :

"ಒಂದು ನಿರ್ದಿಷ್ಟ ಧರ್ಮಕ್ಕೆ ಸೇರಿದ ದೊರೆ ಆಳುವಾಗ ಆ ಧರ್ಮ ಅನುಸರಿಸುವರೆಲ್ಲ ಸುಭಿಕ್ಷವಾಗಿ, ಉಳಿದವರೆಲ್ಲ ಕಷ್ಟದ ಬೇಗುದಿಯಲ್ಲಿ ಬಾಳುತ್ತಾರೆ ಎಂಬ ಕಲ್ಪನೆಯನ್ನು ಚರಿತ್ರೆಕಾರರು ಹೇಗೊ ನಮ್ಮ ತಲೆಯಲ್ಲಿ ತುಂಬಿಬಿಟ್ಟಿದ್ದಾರೆ. ಮುಸ್ಲಿಂ ರಾಜಕಾರಣಿಗಳು ಆಳುತ್ತಿರುವುದರಿಂದ ಪಾಕಿಸ್ತಾನದ ಜನರೆಲ್ಲ ಸುಖವಾಗಿದ್ದಾರೆ ಎಂಬುದು ಯಾವ ಮಟ್ಟದ ಸತ್ಯವೊ, ವಿಜಯನಗರ ಕಾಲದಲ್ಲಿ ಹಿಂದೂಗಳೆಲ್ಲ, ನವಾಬರ ಕಾಲದಲ್ಲಿ ಹೈದರಾಬಾದ ಸಂಸ್ಥಾನದ ಮುಸಲ್ಮಾನರೆಲ್ಲ ನೆಮ್ಮದಿಯಿಂದ ಇದ್ದರು ಎಂಬುದು ಅದೇ ಮಟ್ಟದ ಸತ್ಯ. ಯಾವತ್ತೂ ದುರ್ಬಲರು ದಮನಕ್ಕೆ ಒಳಗಾಗುತ್ತಲೆ ಇರುತ್ತಾರೆ. ಇದು ವರ್ತಮಾನದಲ್ಲಿರುವಂತೆ ಗತಕಾಲದಲ್ಲೂ ಇದ್ದ ಆರ್ಥಿಕ-ರಾಜಕೀಯವಾದ ಕಟುಸತ್ಯ. ಅದರಲ್ಲೂ ದರವೇಶಿ ಸೂಫಿಗಳ ಕ್ರೂರವಾದ ದಮನಗಳು ನಡೆದಿದ್ದೇ 'ಮುಸ್ಲಿಂ' ಪ್ರಭುತ್ವಗಳಲ್ಲಿ ಮನ್ಸೂರ್ ಹಲ್ಲಾಜ್. ಶೇಕ್ ಸರ್ಮದ್, ದಾರಾಶುಕು ಮುಂತಾದವರು ಈ ಹಲ್ಲೆಗಳಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು"೪

ಹಾಗೆಯೇ ಹಿಂದೂ ಸಂಸ್ಕೃತಿ ರಕ್ಷಣೆ ಹೊತ್ತಿರುವ ವಿಜಯನಗರ ಸಾಮ್ರಾಜ್ಯದ ವಿರುದ್ಧ ಆದಿಲ್ ಶಾಹಿಗಳ ಸೆಣಸಾಟವು ಅವರ ಒಳಜಗಳಗಳು ಅಷ್ಟೇ ಪ್ರಮುಖ ಕಾರಣವಾದವು. ಒಂದು ರಾಜಕೀಯ ಸ್ಥಿತಿಯನ್ನು ಆರ್ಥಿಕ ಸ್ಥಿತಿಯನ್ನು, ಸಾಮಾಜಿಕ ಸ್ಥಿತಿಯನ್ನು ನೋಡುವ ಕಾರಣವೇ ಬೇರೆ ಆಗುತ್ತದೆ. ಇದನ್ನು ನಮ್ಮ ಚರಿತ್ರೆಕಾರರು ಸಾಂಸ್ಕೃತಿಕ ಚಿಂತಕರು ನೋಡಲಿಲ್ಲ. ಆಳುವ

ಅರಸರೆ ನಮ್ಮ ಸಂಸ್ಕೃತಿ ಮತ್ತು ಚರಿತ್ರೆಯನ್ನು ನಿರ್ಮಿಸಿ ಬಿಟ್ಟಿದ್ದಾರೆ ಎನ್ನುವಷ್ಟರ ಮಟ್ಟಿಗೆ ಚಿಂತಿಸಿದವರನ್ನು ಕಾಣುತ್ತೇವೆ. ಅದರಲ್ಲಿ 'ಕರ್ನಾಟಕ ಸಂಸ್ಕೃತಿ : ನಮ್ಮ ಹೆಮ್ಮೆ' ಎಂಬ ಕೃತಿಯಲ್ಲಿ ಚಿತ್ರಿಸಿದ್ದನ್ನು ನೋಡಬಹುದು. ಪ್ರಭುತ್ವವಾದಿ ಚಿಂತಕರು ಇದಕ್ಕೆ ಹೊರತಾಗಿಲ್ಲ. ಅನುಭಾವಿಗಳು 'ಸೂಫಿ-ಸಂತರನ್ನು ಒಂದು ಮತಕ್ಕೆ ಸೇರಿಕೊಂಡು ನೋಡುವ ದೃಷ್ಟಿಕೋನ ಬದಲಾಗಬೇಕು. ಯಾಕೆಂದರೆ ? ಅವರು ಯಾವ ಮತ ರಕ್ಷಕರಲ್ಲ. ಇದೊಂದು ಸಮುದಾಯಗಳು ಕಟ್ಟಿಕೊಂಡ ಚರಿತ್ರೆಯ ಒಳರ್ಥದ ತಿಳಿಯನ್ನು ನಡೆದಿರುವ ಸಂಗತಿ ಅಷ್ಟೇ. ಸೂಫಿ ನಿಯಮವು ಮೂಲಭೂತ ಮುಸ್ಲಿಂಗಿಂತ ಭಿನ್ನವಾದ ತತ್ವ. ಆದಕಾರಣದಿಂದ ನೂರಾರು ಸೂಫಿಗಳ ಚರಿತ್ರೆಯಲ್ಲಿ ಮೂಲಭೂತವಾದಿ ಇಸ್ಲಾಮಿನ ಜೊತೆ ಸಂಘರ್ಷಕ್ಕೆ ಒಳಗಾಗಿ ನಲುಗಿದ ಕಥೆಗಳೇ ಸಾಕ್ಷಿ, ಇವರಂತೆ ಅನುಭಾವಿಗಳು ಅಥವಾ ಸಂತರು ಕೂಡ ಹಾಗೆಯೇ ಭಾರತದಲ್ಲಿ ಸಾಕಾರವಾದಿ ಭಕ್ತರ ಮತ್ತು ನಿರಾಕಾರವಾದಿ ಯೋಗಿಗಳ ನಡುವಣ ಸಂಘರ್ಷವೇ ಸಾಕ್ಷಿ.

ಸೂಫಿಗಳು -ಸಂತರು ಅಂದರೆ ಯಾರು ?

ಅನೇಕ ವಿದ್ವಾಂಸರು 'ಸೂಫಿ' ಶಬ್ದದ ಉತ್ಪತಿಯನ್ನು ಅನೇಕ ರೀತಿಯಲ್ಲಿ ಚರ್ಚಿಸಿದ್ದಾರೆ. ಅಲಿಹುಬ್ಬೆರಿಯವರು ತಮ್ಮ ಗ್ರಂಥದಲ್ಲಿ "ಸಫಾ"[೫] ಶಬ್ದದಿಂದ ಸೂಫಿ ಉತ್ಪತಿಯಾಗಿದೆ ಎನ್ನುತ್ತಾರೆ. ಸಫಾ ಅಂದರೆ ಪವಿತ್ರ(ಸ್ವಚ್ಛ[೬])ವಾದ ಜನರಿಂದ ಪ್ರಾರಂಭವಾದ ಮತ. ಇನ್ನೂ ಕೆಲವರ ಅಭಿಪ್ರಾಯದಲ್ಲಿ ಮದೀನಾನಗರದ ಮಸೀದಿಯ ಜಗುಲಿಯ ಮೇಲೆ ಕುಳ್ಳುವ ಫಕೀರರನ್ನು ಸೂಫಿಗಳೆಂದು ಕರೆಯುತ್ತಿದ್ದರು. ಅವರನ್ನು 'ಅಲ್ ಸುಫ್ಫಾಹ್'[೭] ಎಂದು ಕರೆಯುತ್ತಿದ್ದ ಕಾರಣದಿಂದ ಅದರಿಂದ ಉತ್ಪತ್ತಿ ಆಯಿತೆಂದು ಹೇಳುತ್ತಾರೆ. ಇದಕ್ಕೆ ಕೆಲವು ವಿದ್ವಾಂಸರ ಆಕ್ಷೇಪಣೆಯೂ ಇದೆ.

ಗಿಯಾಮುಲ್ ಲುಗಾತ್[೮] ಎಂಬ ಗ್ರಂಥದಲ್ಲಿ ಸೂಫಿ ಎನ್ನುವ ಶಬ್ದವು 'ಸೂಫ್' ಎನ್ನುವುದರಿಂದ ಆಗಿದೆ ಎಂದು ಗೊತ್ತಾಗುತ್ತದೆ. ಸೂಫ್ ಅಂದರೆ ಅರಬ್ಬಿ ಭಾಷೆಯಲ್ಲಿ ಉಣ್ಣೆ ಎಂದರ್ಥ. ಯಾವ ಫಕೀರರು ಉಣ್ಣೆ ರಗ್ಗುಗಳನ್ನು ಹೊದ್ದು, ಉಣ್ಣೆ ನಿಲುವಂಗಿಗಳನ್ನು ತೊಟ್ಟ ಭಗವದ್ ಭಕ್ತಿಯಲ್ಲಿ[೯] ತಲ್ಲೀನರಾಗಿರುತ್ತಿದ್ದರೊ ಅವರನ್ನು ಸೂಫಿಗಳೆಂದು ಅಂತ ಉಡಿಗೆ ತೊಡಿಗೆಯುಳ್ಳ ಜನರಿಂದ ಸೂಫಿ ಶಬ್ದ ಉತ್ಪತ್ತಿಯಾಗಿದೆ ಎಂಬ ಅಭಿಪ್ರಾಯವಿದೆ.

ಇನ್ನೂ ಕೆಲವು ವಿದ್ವಾಂಸರು 'ಸೋಪಿಸ್ಸಾ'[೧೦] ಎಂಬ ಗ್ರೀಕ್ ಶಬ್ದದಿಂದಲೂ 'ಥಿಯೋಸೋಫಿಯೋ ತಸವ್ವುಪ್' ಎಂಬ ಶಬ್ದಗಳಿಂದ ಸೂಫಿ ಎಂಬುದಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. "ಸೂಫಿಯೊ" ಅಂದರೆ ಜ್ಞಾನ ಎಂದರ್ಥ ಸೂಫಿಗಳು ರಹಸ್ಯ ಜ್ಞಾನಿಗಳಾಗಿದ್ದು ಅವರನ್ನು ಜ್ಞಾನ ಮೂರ್ತಿಗಳೆಂದು ಕರೆಯುತ್ತಾರೆ. ಅವರ ಸಾಧನಾನುಭವ ಸಿದ್ದ ಜ್ಞಾನದಿಂದಲೇ ಸೂಫಿತ್ವವು ಪ್ರದರ್ಶಿತವಾಗುತ್ತದೆ ಎಂದು ಅವರ ನಂಬಿಕೆಯಿದೆ.

ಅಲ್‌ಕಲಾಬಾದಿ ಮತ್ತು ಇಬ್ನಖಿಲ್ದೂನ್‌ರು ಸಹ ಸೂಫ್(ಉಣ್ಣೆ) ಎಂಬ ಶಬ್ದದಿಂದಲೇ ಸೂಫಿ ಶಬ್ದದ ಉತ್ಪತ್ತಿಯಾಗಿದೆ ಎಂದು ಹೇಳಿದ್ದಾರೆ. ಪಾಶ್ಚಿಮಾತ್ಯ ವಿದ್ವಾಂಸನಾದ ಲೂಯಿಮಾಸಿಯೋ

ಎಂಬುವನು ಇದನ್ನೇ ಪುಷ್ಟೀಕರಿಸಿದ್ದಾನೆ[೧೧] ಪ್ರಬುದ್ಧ ಪಾಶ್ಚಾತ್ಯ ವಿದ್ವಾಂಸರಾದ ಅರ್ ಜೇರ[೧೨] ನಿಕಲ್ಸನ್[೧೩] ಮಾರ್ಗೊಲಿಫ್[೧೪] ಮೀರ್ ವಲಿಯುದ್ದಿನ್[೧೫] ಇವರೆಲ್ಲರೂ ಸೂಫಿ ಶಬ್ದದ ಉತ್ಪತ್ತಿಯನ್ನು ಅರಬ್‌ನ ಸೂಫ್ ಶಬ್ದದಿಂದಲೇ ಆಗಿದೆ ಎಂದು ಉಲ್ಲೇಖಿಸಿದ್ದಾರೆ.

ಆದರೆ ಈ ಸೂಫಿ ಶಬ್ದವು ಯಾರಿಂದ ? ಯಾವಾಗ ? ಪ್ರಾರಂಭವಾಯಿತೆಂದು ಅನ್ನುವುದಕ್ಕೆ ನಿರ್ದಿಷ್ಟವಾಗಿ ವ್ಯಕ್ತಿಯಿಂದ ಅಥವಾ ಕಾಲದಿಂದ ಹೇಳಲಾಗದಿದ್ದರೂ ಆ ವಾರಿಫುಲ್ ಮಾರಿಫ್‌ನ ಲೇಖಕರಾದ[೧೬] ಶೇಖ್ ಫಹಾಬುದ್ದಿನ್ ಸುಹರ್‌ವರ್ದಿಯವರ ಅಭಿಪ್ರಾಯದಲ್ಲಿ 'ಮುಹಮ್ಮದ್ ಪೈಗಂಬರರ ಮೃತ್ಯುವಿನ ೨೦೦ ವರ್ಷಗಳ ನಂತರವೇ ಈ ಶಬ್ದವು ಹುಟ್ಟಿಕೊಂಡಿತ್ತೆನ್ನುತ್ತಾರೆ.

ಜಾಮಿ[೧೬A]ಯ ಪ್ರಕಾರ ಕೂಫಾನಗರದ ಅಲ್‌ಹಾಷಿಂ(೭೭೭ಇಸ್ವಿ) ಎಂಬುವನಿಂದ ಪ್ರಯೋಗಿಸಲ್ಪಟ್ಟಿತ್ತೆನ್ನುತ್ತಾನೆ. ಲೂಯಿ ಮಾಸಿಯೊಂನ ಪ್ರಕಾರ ಇದೇ ಕಾಲದಲ್ಲಿ ಒಬ್ಬ ರಾಸಾಯನಿಕ ಶಾಸ್ತ್ರಜ್ಞ ಜಾಬಿರ್ ಇಬ್ನಿಹೈಯೂನ್ ಎಂಬುವನೇ ಮೊಟ್ಟಮೊದಲು ಪ್ರಾರಂಭಿಸಿದನೆಂದು ಹೇಳುತ್ತಾರೆ[೧೭]. ಆ ಕಾಲದಲ್ಲಿ ಕೂಫಾನಗರದಲ್ಲಿ ಮುಸಲ್ಮಾನರ ರಹಸ್ಯ ಜ್ಞಾನವಾದಿಗಳ ಒಂದು ಸಂಪ್ರದಾಯವಿದ್ದು. ಅವರಲ್ಲಿನ ಅಂತಿಮ ಪ್ರಧಾನ ವ್ಯಕ್ತಿ ಅಲ್ ಸೂಫಿ(ಮೃತ್ಯು-೮೨೫ರಲ್ಲಿ) ಎಂಬುವನು ಪ್ರಾರಂಭಿಸಿದನೆಂದು ಹೇಳಲಾಗಿದೆ. ಹೀಗೆ ಅನೇಕ ಚಿಂತಕರು ಈ ಶಬ್ದದ ಬಗ್ಗೆ ಚರ್ಚಿಸಿದ್ದು ತಿಳಿಯುತ್ತದೆ. ಆದರೆ ರಹಮತ್ ತರೀಕೆರೆ ಅವರು "ಈ ಶಬ್ದದ ಮೂಲ ಶೋಧನೆ ಅಷ್ಟು ಮುಖ್ಯವಲ್ಲ ಸೂಫಿ ಎಂದರೆ ಅನುಭವಿ, ಯೋಗಿ, ಸಿದ್ಧ ಎಂದರ್ಥವಾದರೆ ಸಾಕು" ಎಂದು ಗುರುತಿಸುತ್ತಾರೆ.

ಹಾಗೆಯೇ 'ಸಂತಃಹ' ಎಂಬ ಪದವು "ಮಹಾಭಾರತದ" ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ "ಭಗವಂತನ" ಹೆಸರಾಗಿ ಬಂದಿದೆ. ಸನ್ಮಾರ್ಗದಲ್ಲಿ ಇರುವವರು ಸಂತರು, ಸಜ್ಜನರು ಅವರ ರೂಪದಲ್ಲಿ ಪರಮಾತ್ಮನಿದ್ದು ವಿದ್ಯೆ ಮತ್ತು ವಿನಯವನ್ನು ಲೋಕದಲ್ಲಿ ವೃದ್ಧಿ ಪಡಿಸುವವನು. ಇದು ಸಮ್-ತನುತಿ ಅಂದರೆ ಎಲ್ಲವನ್ನೂ ಸಜ್ಜನ ಆಗಿದ್ದು, ವಿಸ್ತರಿಸುವನು ಎಂಬ ಅರ್ಥದಲ್ಲಿ ಸಂತಃಹ ಎಂಬ ಪದವು ವ್ಯಾಕರಣದಿಂದ ಶುದ್ಧವಾಗಿದ್ದೆಂದು ಹೇಳಿದರೆ ಇನ್ನು ಕೆಲವರು "ಸಂತ್" ಅನ್ನುವುದು ನಾಗರ ಭಾಷೆಯಿಂದ ಬಂದಿದೆ, ಆದ್ದರಿಮದ ಸಂತ್ ಅಂದರೆ ಸ್ವಚ್ಛ, ಜ್ಞಾನ ಇತ್ಯಾದಿ ಅರ್ಥಗಳನ್ನು ಒಳಗೊಂಡಿದೆ ಎಂದು ಹೇಳುತ್ತಾರೆ. ಹೀಗೆ ಅನೇಕ ಚರ್ಚೆಗಳು ನಡೆದಿರುವ ಸಂಗತಿಗಳು ತಿಳಿದು ಬರುತ್ತದೆ. ಒಟ್ಟಿನಲ್ಲಿ ಅದೇನಿರಲಿ ನಾನು ತಿರುಗಾಟದಲ್ಲಿ ಕಂಡುಕೊಂಡ ಹಿರಿಕರಿಂದ ಕೇಳಿಸಿಕೊಂಡದ್ದನ್ನು ತಿಳಿಸುತ್ತೇನೆ. "ಸಂತರು" ಅಂದರೆ ಸಂಸಾರದ ಜೋತೆ "ಪರಮಾರ್ಥ" ಜೀವನ ಕಟ್ಟಿಕೊಳ್ಳುವುದು, ಅವರಿಗೆ ಆಶೆಗಳಿರುತ್ತವೆ ದುರಾಶೆ-ದುರಾಲೋಚನೆಗಳು ಇರುವುದಿಲ್ಲ. ಅವರ ಹೆಗಲ ಮೇಲೆ ಕರಿಕಂಬಳಿ, ಕೈಯಲ್ಲಿ ಲಾಕುಳ, ಮಡಿಕೆ ಧರಿಸಿಕೊಂಡು, ತಿರುಗಾಡುವ ಸಂಚಾರಿಗಳನ್ನು ಸಂತರು ಅನ್ನಬಹುದು.

ಹಾಗಾದರೆ ಸೂಫಿಗಳು ಅಂದರೆ ಯಾರು ? ಯಾರನ್ನು ನಾವು ಸಂತರು ಅನ್ನಬೇಕು ? ಎಂಬುದನ್ನು ಗಮನ ಹರಿಸುವಾಗ ನಮಗೆ ಜಲಾಲುದ್ದೀನ ರೂಮಿಯ ಮಾತು ನೆನಪಿಗೆ ತರುತ್ತದೆ.

"ಸೂಫಿ ಎಂದರೆ ದ್ರಾಕ್ಷಾರಸವನ್ನು ಕುಡಿಯದೆ ಅಮಲಿನಲ್ಲಿರುವವನಾಗಿ, ಊಟ ಮಾಡದೆ ತೃಪ್ತನಾಗಿ, ತಳಮಳಗೊಂಡವನಾಗಿ, ಉಪವಾಸವಿದ್ದು, ನಿದ್ದೆಯಿಲ್ಲದೆ, ವಿನಯದ ವಸ್ತ್ರವನ್ನು ಹೊದ್ದ ಒಬ್ಬ ರಾಜ ; ಅವಶೇಷಗಳಡಿಯಲ್ಲಿರುವ ಖಜಾನೆ, ಗಾಳಿಯಲ್ಲಿಲ್ಲ, ಭೂಮಿಯಲಿಲ್ಲ. ಬೆಂಕಿಯವನೂ ಅಲ್ಲ, ನೀರಿನವನೂ ಅಲ್ಲ, ಅವನು ದಡವಿಲ್ಲದ ಸಮುದ್ರ. ಅವನಿಗೆ ನೂರು ಚಂದ್ರರು, ನೂರು ಆಕಾಶಗಳು, ನೂರು ಸೂರ್ಯರಿದ್ದಾರೆ. ಸಾರ್ವತ್ರಿಕ ಸತ್ಯದ ಮೂಲಕ ಜ್ಞಾನಿಯಾದವನು. ಒಂದು ಪುಸ್ತಕದಿಂದಾದ ವಿದ್ವಾಂಸನಲ್ಲ' ಎಂಬ ಈ ಮಾತನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ಇವರು ಅನುಭಾವಿಗಳು, ಸಂಚಾರಿಗಳೆಂದು ಅರ್ಥವಾಗುತ್ತಾರೆ.

ಯಾವ ಸಾಧಕನು ತನ್ನ ಹೃದಯವನ್ನು ಸ್ವಚ್ಛವಾಗಿಟ್ಟುಕೊಂಡು ಬಂದ ಮೂಲಕ್ಕೆ ಹೋಗಿ ಸೇರಲು ತವಕಿಸುತ್ತಾನೋ ಆತನನನ್ನು ಸೂಫಿ–ಸಂತರು ಎಂದು ಕರೆಯಬಹುದು ಎಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಫಕೀರ್ ಮುಹಮ್ಮದ್ ಕಟ್ಪಾಡಿ ಹಾಗೂ ರಹಮತ ತರಿಕೇರಿ ಇವರ ಘಟನೆಗಳನ್ನು ತಮ್ಮ ಕೃತಿಯಲ್ಲಿ ನೆನೆಪಿಸಿಕೊಂಡಿದ್ದನ್ನು ನೋಡಬಹುದು. ಒಮ್ಮೆ ಫಕೀರ್ ಮುಹಮ್ಮದ್ ಕಟ್ಪಾಡಿಯವರು ಕಲಬುರಗಿಯ ಬಂದೇನವಾಜ್ ದರ್ಗಾಕ್ಕೆ ಬೇಟಿಕೊಟ್ಟಿದರಂತೆ. ಅಲ್ಲಿ ಒಬ್ಬ ಸೂಫಿ ವ್ಯಕ್ತಿಯ ಜೊತೆ ಮಾತನಾಡುತ್ತಿರುವ ಸಮಯದಲ್ಲಿ 'ನೀವು ಸುನ್ನಿ ಅಥವಾ ಷಿಯಾ ಯಾವ ಪಂಗಡಕ್ಕೆ ಸೇರಿದವರು' ಅಂತ ಪ್ರಶ್ನೆ ಕೇಳಿದರಂತೆ. ಆಗ ಅವನು 'ನಾವು ಹಿಂದೂಗಳು ಅಲ್ಲ ಮುಸ್ಲಿಮರು ಅಲ್ಲ ಸೂಫಿಗಳು, ಹೀಗಿರುವಾಗ ಸುನ್ನಿ–ಷಿಯಾ ಆಗುವುದು ಹೇಗೆ ಸಾದ್ಯ'[೧೮] ಎಂದು ಮಾರ್ಮಿಕವಾಗಿ ಉತ್ತರ ನೀಡಿದರಂತೆ. ಹಾಗೇ ರಹಮತ್ ತರೀಕೆರೆಯವರು ಒಮ್ಮೆ ಕಾವೇರಿ ತೀರದಲ್ಲಿರುವ ಎಡತೊರೆಯ ಖಾದರಲಿಂಗನ ದರ್ಗಾದಲ್ಲಿ ಉತ್ತರ ಭಾರತದ ಸೂಫಿ ಲಿಯಾಕತ್ ಹುಸೇನ್ ಶಾ ಅವರಿಗೆ ಬೇಟಿಯಾಗಿದ್ದನಂತೆ. ಅವರು 'ಮೈ ಮುಸಲ್ಮಾನ್ ನಹಿ, ಸೂಫಿ ಹ್ಞೂ' ಎಂದೇ ಬಣ್ಣಿಸಿಕೊಂಡರು ಎಂದು ದಾಖಲಿಸುತ್ತಾರೆ. ಇವೆರಡರ ಸಂಗತಿಗಳಲ್ಲಿ ಸಾಂಪ್ರದಾಯಿಕ ಇಸ್ಲಾಂ ಧರ್ಮ ಹೊರತಾದದ್ದು, ಸೂಫಿಸಂ ಎಂದರ್ಥ. ಹಾಗಂಥ ಇಸ್ಲಾಂ ಧರ್ಮಕ್ಕೂ ಸೂಫಿಸಂ ಪಂಥಕ್ಕೂ ಸಂಬಂಧವಿಲ್ಲ ಎಂದರ್ಥವಲ್ಲ, ಅದೊಂದು ವಿಚಿತ್ರ ಸಂಬಂಧವಿದೆ ಅದು ತತ್ವ, ದರ್ಶನ ಹಾಗೂ ಅನುಭಾವ ಪಂಥವಾಗಿದೆ.

ಭಾರತೀಯ ನೆಲದಲ್ಲಿ ಉದಯಿಸಿದ "ಸಂತ ಪಂಥವು" ಸಹ ಹಾಗೆ ಇದು ಒಂದು ಸಾಂಪ್ರದಾಯಿಕ ಸಂಸ್ಕೃತಿಯ ಜಾಡನ್ನು ಹಿಡಿದುಕೊಂಡು ಹೋಗುವುದು. ಒಂದು ನಿರ್ದಿಷ್ಟ ನಿಯಮದಲ್ಲಿ ಸೇರಿಕೊಂಡು ಬದುಕುವುದನ್ನು ಕಾಣುವುದಿಲ್ಲ. ಹಾಗಂತ ಅವರು ಹಿಂದೂ ಧರ್ಮ ಅಥವಾ ಯಾವ ಧರ್ಮದ ವಿರೋಧಿಯೂ ಅಲ್ಲ ಹಾಗೂ ಧರ್ಮ ರಕ್ಷಕರೂ ಅಲ್ಲ. ಅವರು ಅದರೊಳಗಿನ ಪ್ರತಿರೋಧನದವರು. ಇದನ್ನು ನಮ್ಮ ಚಿಂತಕರು, ಚರಿತ್ರೆಕಾರರು ಏಕೆ

ಅರ್ಥಮಾಡಿಕೊಳ್ಳಲಿಲ್ಲ. ಇವರನ್ನು ಕೇವಲ ಒಂದು ಮತೀಯ ದೃಷ್ಟಿಕೋನದಲ್ಲಿ ನೋಡಿದಷ್ಟು ಒಂದು ಅನುಭವ ತತ್ವ, ದಾರ್ಶನಿಕ ದೃಷ್ಟಿಯಲ್ಲಿ ನೋಡಲಿಲ್ಲ ಅನ್ನುವುದೇ ನೋವು.

ಯಾಕೆಂದರೆ ಅನೇಕ ಬಾರಿ ಸೂಫಿ-ಸಂತರು ಆಳರಸರ ವಿರುದ್ಧ ಧ್ವನಿ ಕೂಗಿದಷ್ಟೆ ಅವರ ಧರ್ಮದ ಒಳಗಿನ ಕಟುನಿಯಮಗಳ ವಿರುದ್ಧವೂ ಕೂಗಿದ್ದು ಅಷ್ಟೇ ಸತ್ಯ ಇದೆ. ಇವರು 'ಧರ್ಮ ವಿರೋಧಿ' ಪಟ್ಟವನ್ನು ಕಟ್ಟಿಕೊಂಡು ತಿರುಗಾಡಿದವರು ಇದ್ದಾರೆ. ದೇಹಲಿ ಸುಲ್ತಾನರು ದಾರಶುಕುನನ್ನು ಶಿಕ್ಷೆಗೆ ಒಳಪಡಿಸಿದಾಗ ಅದರ ವಿರುದ್ಧ ಸರ್ಮದನು "ಕಲ್ಮಸೂರು" ವ್ಯಂಗ್ಯಾತ್ಮಕವಾಗಿ ಹೇಳಿಕೆ ಕೊಟ್ಟು ವಿರೋಧಿಸಿದ್ದು. ಶಿವಕಂಚಿಯ ಪರಪಯ್ಯ(ಪರಮಾನಂದರು) ವಿಜಯನಗರ ರಾಜರ ಧರ್ಮ ಆಜ್ಞಾಪಾಲನೆಯನ್ನು ಮೀರಿದ್ದು. ಗೋಗಿಯ ಮಹಮ್ಮದ್ ಬಹ್ರಿ, ಬಿಜಾಪುರದ ಅಮಿನುದ್ದೀನ : ಸಂತ ಗೋವಿಂದ ಭಟ್ಟರು, ಸಂತ ಶಿಶುವಿನಾಳ ಶರೀಫರು, ದಿಗ್ಗಿ ಸಂಗಮನಾಥರು ನಿಯಮ ಮೀರಿದ್ದು. ಡಕ್ಕಲಿಗ ಕೆಂಚಯ್ಯನ ಕಗ್ಗೊಲೆ, ಗುತ್ತಿ ಬಸವಣ್ಣ, ವಚನಕಾರ ಬಸವೇಶ್ವರ, ಜೇಡರದಾಸಿಮಯ್ಯ, ಸಗರ ಬೋಮ್ಮಯ್ಯ, ಕೊಡೆಕಲ್ಲ ಬಸವಣ್ಣ ಹಾಗೂ ತಿಂಥಣಿ ಮೋನಪ್ಪ ಹೀಗೆ ಅನೇಕರು ಧಾರ್ಮಿಕ ವಿಚಾರಣೆಗಳಿಗೆ ಒಳಗಾದದ್ದು ಕಾಣುತ್ತದೆ. ಇದು ಹಿಂದಿನ ಕಾಲದಿಂದಲೂ ಸೂಫಿ-ಸಂತರ "ಅನುಭವ" ಸಂಪ್ರದಾಯಸ್ಥರು ಇಂದಿಗೂ ಮುಲಾಜಿಲ್ಲದೆ ವಿರೋಧಿಸುತ್ತಾರೆ. ಹೀಗೆ ಸೂಫಿ-ಸಂತರ ತತ್ವಗಳು ಸಂಘರ್ಷಕ್ಕೆ ಒಳಗಾಗಿ ಒಂದು ಕ್ರಿಯಾತ್ಮಕವಾಗಿ ದರ್ಶನ ಪಡೆದುಕೊಳ್ಳುತ್ತವೆ ಎಂದು ಹೇಳಬಹುದು.

ಸೂಫಿ ವಾದದ ಚರಿತ್ರೆಯಲ್ಲಿ ಮೂರು ಅವಸ್ಥಾಂತರಗಳನ್ನು ವಿದ್ವಾಂಸರು ಗುರುತಿಸುತ್ತಾರೆ. ಮೊದಲ ಘಟ್ಟದಲ್ಲಿ ಖಾನಖಾ-ಅಂದರೆ ಆದಿಮ ಸೂಫಿಗಳು, ಅಲೆಮಾರಿಗಳು, ಎರಡನೇ ಘಟ್ಟದಲ್ಲಿ ತಾರಿಖಾ-ಅಂದರೆ ಗುರುಶಿಷ್ಯ ಪರಂಪರೆಯೊಂದಿಗೆ ತಿರುಗಾಟ, ಬೋಧನೆ, ತತ್ವಪ್ರಸಾರ ಆರಂಭಿಸುವುದು. ಮೂರನೇ ಘಟ್ಟದಲ್ಲಿ ತಾಯಿಫಾ-ಅಂದರೆ ಸೂಫಿಗಳ ದರ್ಗಾ ಆರಾಧನೆ ಇದನ್ನು ವಿದ್ವಾಂಸರು ಸೂಫಿಸಂನ ಅವನತಿಯೆಂದು ಗುರುತಿಸುತ್ತಾರೆ. ಹಾಗೆಯೇ ಸಂತರ ಅವಸ್ಥಾಂತರ ಬಗ್ಗೆ ನಾಟಕ ರಂಗಕರ್ಮಿ ಎಲ್.ಬಿ.ಕೆ ಆಲ್ದಾಳ ಅವರು 'ಮೊದಲನೆಯದು ಆರೂಢ-ಅಂದರೆ ಪ್ರಜ್ಞೆಯಲ್ಲಿದ್ದುಕೊಂಡು ಜಾತಿ-ಮತ-ಪಂಥಗಳನ್ನು ಮೀರಿ ಹೊರ ನೋಡುವುದು. ಎರಡನೆಯದ್ದು ಅವಧೂತರು-ಅಂದರೆ ತನ್ನನ್ನು ತಾನಾಗಿ ಅವಲೋಕಿಸಿಕೊಂಡು ಬದುಕುವುದು ಹಾಗೂ ಮೂರನೇಯದು ಅವರೂಕ್ಷ-ಅಂದರೆ ಮರದಂತೆ ಸ್ತಬ್ಧವಾಗಿ ನಿಂತುಕೊಳ್ಳುವುದು ಅಥವಾ ಮೌನವಹಿಸುವುದು. ಇದು ಬಹುಮುಖ್ಯವಾಗಿ ಗುರು-ಶಿಷ್ಯತ್ವವನ್ನು ಹೊಂದಿರುತ್ತದೆ' ಎಂದು ತಿಳಿಸುತ್ತಾರೆ.

ಕೊನೆಯ ಟಿಪ್ಪಣಿಗಳು :

೧ ಕರ್ನಾಟಕ ಸೂಫಿಗಳು, ರಹಮತ ತರೀಕೆರೆ, ಪುಟ-೧೧

೨ ಅದೇ ಪುಟ-೨
೩ ಅದೇ ಪುಟ-೪-೫
೪ ಅದೇ ಪುಟ-೭-೮
೫ ಕಶ್ಪುಲ್ ಮಹಜೂಬ್, ಅಲಿಹುಜ್ವೇರಿ, ಪುಟ-೯೦
೬ ಹಿಂದಿ ಸೂಫೀ, ಕಾವ್ಯದ ಸಮಗ್ರ ಅನುಶೀಲನ, ಶಿವಸಹಾಯ ಪಾಠಕ್, ಪುಟ-೨೧
೭ ಸುಫ್ಫಾಹ ಎಂದರೆ ಜಗುಲಿ
೮ ಹಿಂದಿ ಸೂಫೀ, ಕಾವ್ಯದ ಸಮಗ್ರ ಅನುಶೀಲನ, ಶಿವಸಹಾಯ ಪಾಠಕ್, ಪುಟ-೨೧
೯ ಸೂಫೀ ಮತ್ತು ಶರಣರ ಅನುಭಾವ ಪಥ, ಷಣ್ಮುಖಯ್ಯ ಅಕ್ಕೂರಮಠ, ಪುಟ-೩
೧೦ ಹಿಂದಿ ಸೂಫೀ, ಕಾವ್ಯದ ಸಮಗ್ರ ಅನುಶೀಲನ, ಶಿವಸಹಾಯ ಪಾಠಕ್, ಪುಟ-೨೨
೧೧ ಜಾಟ್‌ಲೈನ್ಸ್ ಆಫ್ ಇಸ್ಲಾಮಿಕ್ ಕಲ್ಚರ್, ಎಂ.ಎಂ.ಶುಸ್ತರಿ, ವಾಲ್ಯೂಮ್-೨, ಪುಟ-೪
೧೨ ಸೂಫಿಸಂ, ಅರ್ ಬೇರಿ, ಪುಟ-೧೨, ೨೦
೧೩ ಮಹಮ್ಮಡನಿಂ, ನಿಕಲ್ಸನ್, ಪುಟ-೫
೧೪ ಮೈಸ್ಟಿಕ್ಸ್ ಆಫ್ ಇಸ್ಲಾಂ, ಎ ಲಿಟರೆರಿ ಹಿಸ್ಟರಿ ಆಫ್ ಅರಬ್ಬ್, ಮಾರ್ಗೋಲಿಥ್, ಪುಟ-೨೨
೧೫ ಎನ್‌ಸಾಯ್ ಕ್ಲೋಪೀಡಿಯಾ ಆಫ್ ರಿಲಿಜನ್ ಅಂಡ್ ಎಥಿಕ್ಸ್, ಬ್ರೌನ್, ವಾಲ್ಯೂಮ್-೪ ಪುಟ-೩೭೪
೧೬ ಹಿಂದಿ ಸೂಫೀ, ಕಾವ್ಯದ ಸಮಗ್ರ ಅನುಶೀಲನ, ಶಿವಸಹಾಯ ಪಾಠಕ್. ಪುಟ-೨೯
೧೬A ನಫಾಹತುಲ್ ಉನ್ಸ್, ಜಾಮಿ, ಪುಟ-೧೪
೧೭ ಹಿಂದಿ ಸೂಫೀ, ಕಾವ್ಯದ ಸಮಗ್ರ ಅನುಶೀಲನ, ಶಿವಸಹಾಯ ಪಾಠಕ್, ಪುಟ-೨೯
೧೮ ಕರ್ನಾಟಕ ಸೂಫಿಗಳು, ರಹಮತ ತರೀಕೆರೆ, ಪುಟ-೨೪

ಅಧ್ಯಾಯ : ಮೂರು

ಸೂಫಿಗಳ ಆಗಮನ : ಸಂತರೊಂದಿಗೆ ಸಂಬಂಧ

ಅಧ್ಯಯನದ ದೃಷ್ಟಿಯಿಂದ ಈ ವಿಷಯವನ್ನು ಕುರಿತು ಚರ್ಚಿಸಿಕೊಂಡು ಹೋಗುವುದು ಒಳಿತು ಅನಿಸುತ್ತದೆ. ಯಾಕೆಂದರೆ? ಮುಸ್ಲಿಂ ಅರಸರು ಭಾರತಕ್ಕೆ ದಂಡಯಾತ್ರೆಯೊಂದಿಗೆ ಬಂದಿರುವ ಸಮಯದಲ್ಲಿ ಈ ಸೂಫಿಗಳ ಆಗಮನವು ಆಗುತ್ತದೆ. ಇದನ್ನು ಏಶಿಯಾದ ಪ್ರಭುತ್ರ ಚರಿತ್ರೆಯನ್ನು ಜತೆಗಿಟ್ಟುಕೊಂಡು ನೋಡಬೇಕು. ಇದು ಅನಿವಾರ್ಯ ಬಗೆಯನ್ನು ತೋರುತ್ತದೆ. ಅನುಭಾವಿಗಳಾದ ಸೂಫಿಗಳು ಇಲ್ಲಿಗೆ ಬರಲು ಕಾರಣವೇನು. ? ಎಂಬ ಕುತೂಹಲದ ಪ್ರಶ್ನೆಗಳು ಎದಿರುಗೊಳ್ಳುತ್ತದೆ. ಇದು ಬಹುಮುಖ್ಯ ಮುಸ್ಲಿಂ ಅರಸರ ದಂಡಯಾತ್ರೆಯ ರಾಜಕಾರಣದೊಂದಿಗೆ ಸೇರಿಕೊಂಡು ಬಳ್ಳಿಯಂತೆ ಸುತ್ತಿಕೊಂಡಿದೆ. ಇಂತಹುಗಳನ್ನು ಸೂಕ್ಷ್ಮತೆಯಿಂದ ಗಮನಿಸಿದಾಗ "ಯಾವ ರೀತಿಯಲ್ಲಿ ಭಾರತೀಯ ಧಾರ್ಮಿಕ ಪ್ರಭುತ್ವವು ಅರಬ್ಬರ ಮೇಲೂ ಬೀಳುತ್ತಿದ್ದಿತೋ ಇಂತಹ ವಿನಿಮಯ ಕಾರ್ಯದಿಂದ ಎರಡು ದೇಶಗಳಲ್ಲಿನ ಸಾಹಿತ್ಯದಲ್ಲಿ ಅನೇಕ ಸಾಂಸ್ಕೃತಿಕ ಸಾಮರಸ್ಯಗಳನ್ನು ಕಾಣಬಹುದಾಗಿದೆ".[೧] ಉದಾಹರಣೆಗೆ "ಮಾನವನ ಶರೀರವು ಜ್ಯೋತಿಯಿಂದ ಆಗಿದೆಯೆಂದೂ ಕೆಲವು ಸಾರಿ ಮಣ್ಣಿನಿಂದಲೂ ಜಲಬಿಂದುವಿನಿಂದಲೂ"[೨] ಆಗಿದೆಯೆಂದು ಕಬೀರರು ಹೇಳುವರು, "ಭಾರತೀಯ ದರ್ಶನಗಳಲ್ಲೂ ಇಂತಹ ಉದಾಹರಣೆಗಳನ್ನು ನೋಡಲು ಸಿಗುತ್ತವೆ ಮತ್ತು ಖುರಾನ್‌ಲ್ಲಿಯೂ ಅಲ್ಲಲ್ಲಿ ಸಿಗುತ್ತವೆ".[೩]

"ಇಸ್ಲಾಂ ಧರ್ಮವು ಉದಯಗೊಂಡ ಕೆಲವೇ ವರ್ಷಗಳಲ್ಲಿ ಅಂದರೆ ಕ್ರಿ.ಶ ೬೩೬ರಲ್ಲಿ ಅರಬರು ಧಾರ್ಮಿಕ ಪ್ರಸಾರದೊಂದಿಗೆ ಭಾರತದ ಒಂದು ಬಂದರನ್ನು ಪ್ರವೇಶಿಸಿ ನೆಲೆಸಿದರು."[೪]

"ಯಾವ ಕಾಲದಲ್ಲಿ ಸೂಫಿ ಮತವು ಒಂದು ಸ್ವರೂಪವನ್ನು ತಾಳಲಾರಂಭಿಸಿತೊ ಆ ಕಾಲಕ್ಕಾಗಲೇ ಭಾರತ ಅರಬ ದೇಶಗಳ ಸಂಬಂಧಗಳ ಅತ್ಯಧಿಕ ಪ್ರಮಾಣದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳ ವಿನಿಮಯಗಳು ಆಗಿದ್ದವು. ಅರಬ್ಬರೂ ಕೂಡ ಭಾರತೀಯ ಧಾರ್ಮಿಕ ಸಾಂಸ್ಕೃತಿಕ ವಿಚಾರಗಳ ಸಾಧನಾ ಪದ್ಧತಿಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ತಳೆದಿದ್ದರು. ಹಾಗೂ ತಮ್ಮ ದೇಶದ ಧರ್ಮ ಮತ್ತು ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನವನ್ನು ಕೈಗೊಂಡಿದ್ದರು. ಎಂಟನೇ ಶತಮಾನದಲ್ಲಿ 'ಬುದ್ಧಪುರ' ಎಂಬ ಒಂದು ಬೌದ್ಧ ವಿಹಾರದ ಹೆಸರು ಇತಿಹಾಸದಲ್ಲಿ ಕಂಡುಬರುತ್ತದೆ. ಇದು ಬೌದ್ಧರ ಉಪಾಸನಾ ಮಂದಿರವಾಗಿತ್ತು. ಇದಕ್ಕೆ 'ನವಬಹಾರ' 'ನೌಬಹಾರ್' ಎಂದು ಕರೆಯುತ್ತಿದ್ದರು. ಅರಬರೊಂದಿಗೆ ಬೌದ್ಧ ಸನ್ಯಾಸಿಗಳ ಸಂಪರ್ಕವು ಬಹಳ ಮೊದಲೇ ಆಗಿದ್ದಿತ್ತು"[೫] ಅದೇ ರೀತಿ ಭಾರತಕ್ಕೆ ಅನೇಕ ಜನಾಂಗಗಳು ಬಹಳ ಹಳೆಯ ಕಾಲದಿಂದಲೂ ಬಂದು ನೆಲೆಸಿದವು.

ಅವು ತಮ್ಮ ತಮ್ಮ ಸಾಂಸ್ಕೃತಿಕ ವಿಚಾರಧಾರೆಗಳನ್ನು ಇಲ್ಲಿನ ಮೂಲ ನಿವಾಸಿಗಳೊಂದಿಗೆ ಸೇರಿಸಿ ಒಂದು ಮಿಶ್ರ ಸಂಸ್ಕೃತಿಯನ್ನು ಬೆಳೆಸಿರುವುದು ಕಂಡುಬರುತ್ತದೆ.

ಭಾರತಕ್ಕೆ ಮುಸಲ್ಮಾನ ಅರಸರು ರಾಜಕೀಯ ದೃಷ್ಟಿಯಿಂದ ಬಂದರೆ, ದರವೇಶರು, ಫಕೀರರುಗಳು ಇಸ್ಲಾಂ ಧರ್ಮ ಪ್ರಚಾರಕ್ಕೆಂದು ಇಸ್ಲಾಂನ ಆರಂಭಿಕ ವರ್ಷಗಳಲ್ಲೇ ಬರತೊಡಗಿದ್ದರು. "ಸೂಫಿಗಳು ಭಾರತದಲ್ಲಿ ಕೇವಲ ಅಲ್ಲಾಹನ ಹೆಸರಿನಲ್ಲಿ ಮಾತ್ರ ತಮ್ಮ ಧರ್ಮಪ್ರಚಾರವನ್ನು ಕೈಗೊಂಡಿದ್ದರೇ ಹೊರತು ಯಾವ ಬಾದಶಹಾನ ಆಜ್ಞಾನುಸಾರವೂ ನಡೆಯುತ್ತಿರಲಿಲ್ಲ. ಈ ರೀತಿಯಲ್ಲಿ ಸೂಫಿಗಳ ಪ್ರಭಾವವು ಭಾರತದ ಜನರ ಮೇಲೆ ಖಿಲ್ಜಿ ವಂಶಸ್ಥ ಸುಲ್ತಾನರುಗಳ ಕಾಲಕ್ಕಾಗಲೆ ಚೆನ್ನಾಗಿ ಬೀಳಲಾರಂಭಿಸಿತ್ತು, ಸುಲ್ತಾನರಿಗಿಂತ ಸೂಫಿಸಂತರೆ ಅತ್ಯಧಿಕವಾದ ಆತ್ಮೀಯ ಭಾವವನ್ನು ಜನರಲ್ಲಿ ಬೆಳೆಸಿಕೊಂಡಿದ್ದರು. ಈ ಕಾರಣಗಳಿಂದ ಹಾಗೂ ಬಾದಶಹರುಗಳು ಸೂಫಿಸಂತರುಗಳನ್ನು ದ್ವೇಷಿಸಲು, ಹಿಂಸಿಸಲು ತೊಡಗಿದರು"[೬] "ಔರಂಗಜೇಬನು ಸರಮದ್(ಸರ್ಮಸ್ಥ) ಎಂಬ ಸೂಫಿ-ಸಂತನನ್ನು ಕೊಲೆಮಾಡಿಸಿದನು. ಸೂಫಿಸಂತರು ಒಂದು ರೀತಿಯಲ್ಲಿ ಮುಸಲ್ಮಾನ ಬಾದಶಹರುಗಳಿಗೆ ಅವಿಧೆಯರಾಗಿ ಹಾಗೂ ವಿದ್ರೋಹಿಗಳಾಗಿದ್ದಿಂದಲೇ ಭಾರತೀಯ ಜನತೆ ಅವರನ್ನು ಹೆಚ್ಚು ಪ್ರೀತಿಸುತ್ತಿದ್ದರು ಹಾಗೂ ಪ್ರೋತ್ಸಾಹಿಸುತ್ತಲೂ ಇದ್ದರು"[೭] ಮತ್ತು ಇಸ್ಲಾಂ ಧರ್ಮವನ್ನು ಪ್ರೇಮದಿಂದ ಸ್ವೀಕರಿಸುತ್ತಿದ್ದರು. ಇಲ್ಲಿನ ಸಾಂಸ್ಕೃತಿಕ ವಿಚಾರಗಳನ್ನು ಹೊರತುಪಡಿಸದೆ ಹಿಂದೂ-ಮುಸಲ್ಮಾನ ಸಂಸ್ಕೃತಿಗಳನ್ನು ಒಂದುಗೂಡಿಸಿ ಬೆಸೆಯತೊಡಗಿದರು, ಪ್ರಭುತ್ವ ಯಜಮಾನಿಕೆಯನ್ನು ವಿರೋಧಿಸತ್ತಲೇ ಜನರ ಮಧ್ಯ ಬದುಕಿದರು.

ಹಾಗೆಯೇ ಈ ಸೂಫಿಗಳು ಭಾರತಕ್ಕೆ ಮತ್ತು ಕರ್ನಾಟಕಗಳಲ್ಲಿ ಆಗಮಿಸಿದ ಕುರಿತು ರಹಮತ್ ತರಿಕೇರಿ ಅವರು ನಾಲ್ಕು ವಿಧಗಳಲ್ಲಿ ಗುರುತಿಸುತ್ತಾರೆ.

"೧ ಕಡಲ ವ್ಯಾಪಾರಿಗಳ ಜತೆಯಲ್ಲಿ ಮಿಶನರಿಗಳ ರೂಪದಲ್ಲಿ ಆಗಮನ

೨ ಸೈನಿಕ ದಂಡಯಾತ್ರೆಗಳ ಜತೆ ಧರ್ಮಯೋಧರ ರೂಪದಲ್ಲಿ ಆಗಮನ

೩ ರಾಜಕೀಯ ಆಹ್ವಾನ ಅಥವಾ ಒತ್ತಡದಿಂದ ರಾಜಗುರುಗಳ ರೂಪದಲ್ಲಿ ಆಗಮನ

೪ ಜ್ಞಾನವನ್ನು ಗುರುವನ್ನು ಹುಡುಕೊಕೊಂಡು ತತ್ವಾರ್ಥಿಗಳಾಗಿ ಆಗಮನ"[೮]

ಭಾರತದ ಆಗ್ನೇಯ ದಿಕ್ಕಿನಿಂದ ಬಂದ ಎರಡನೇ ಬಗೆಯ ಸೂಫಿಗಳ ಬಗ್ಗೆ ರಹಮತ್ ತರಿಕೇರಿ ಅವರ ಅಭಿಪ್ರಾಯ ಖಡ್ಗ ಮತ್ತು ಕುದುರೆಗೊರಸುಗಳ ಜತೆಯಲ್ಲಿ ಸೂಫಿಗಳ ಕಂಬಳಿಯೂ ಭಿಕ್ಷಾಪಾತ್ರೆಯೂ ಜತೆಗೂಡಿ ಬಂದವು ಎಂಬ ಸಂಗತಿ ವಿಚಿತ್ರವಾದರೂ ನಿಜವಾಗಿದೆ ಅಫಘಾನಿಸ್ತಾನದ ಘಜನಾದಿಂದ ಬಂದ ಶೇಕ್ ಅಬ್ದುಲ್ ಹಸನ್ ಹುಜವೇರಿಯು ಭಾರತಕ್ಕಾಗಮಿಸಿದ(೧೦೭೦) ಮೊದಲ ಸೂಫಿ ಎನ್ನಬಹುದು. ಹೀಗೆ ಬಂದವರ ಪೈಕಿ ದೆಹಲಿಯಲ್ಲಿ ಚಿಸ್ತಿಯಾ ಸಿಲ್‌ಸಿಲಾಕ್ಕೆ ಸೇರಿದ ನಿಜಾಮುದ್ದೀನ್

ಜೌಲಿಯಾನು ಅಲ್ಲುವುದ್ದೀನ್ ಖಿಲ್ಜಿಯು ದಕ್ಷಿಣದ ಕಡೆಗೆ ದಂಡಯಾತ್ರೆ ಮಾಡುವ ಮುನ್ನವೇ ೭೦೦ಜನ ಸೂಫಿ-ಸಂತರನ್ನು ದಖನ್ ಕಡೆಗೆ ಕಳುಹಿಸಿದ್ದ. "ಸೂಫಿಗಳು ತಂಡೋಪತಂಡವಾಗಿ ದಖನ್ನಲ್ಲಿ ಬಂದು ನೆಲೆಸಲು ಕಾರಣವಾಗಿದ್ದು, ೧೩೧೭ರಲ್ಲಿ ದೆಹಲಿಯ ದೊರೆ ಮಹ್ಮದ್ ಬಿನ್ ತುಘಲಕ್‌ನು ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿ ಅಥವಾ ದೌಲತಬಾದಿಗೆ ಸ್ಥಳಾಂತರಿಸುವ ನಿರ್ಧಾರ. ಈ ನಿರ್ಧಾರದಿಂದ ದೆಹಲಿಯ ಸಮಸ್ತ ಮಂತ್ರಿಗಳು, ಅಧಿಕಾರಿಗಳು, ಸೈನ್ಯ, ವರ್ತಕ, ಸಮೂಹ ಹಾಗೂ ಜನಸಾಮಾನ್ಯರ ಜತೆ ಹಲವು ಸೂಫಿಗಳು, ದಾರ್ಶನಿಕರು, ಸಂತರು ದಕ್ಷಿಣಾಭಿಮುಖವಾಗಿ ಪ್ರಯಾಣ ಬೆಳೆಸಿ ದೌಲತಬಾದಿನ ಸುತ್ತಮುತ್ತ ನೆಲೆಸಿದರು. ಆದರೆ ನಂತರ ರಾಜಧಾನಿಯು ಮತ್ತೆ ದೆಹಲಿಗೆ ಮರು ಸ್ಥಳಾಂತರಗೊಂಡಾಗ ಹಲವು ಸೂಫಿಗಳು ದೆಹಲಿಗೆ ಮರಳದೆ ದೌಲತಬಾದ್‌ನಲ್ಲಿಯೇ ನೆಲೆ ನಿಂತರು. ೧೩೪೭ರಲ್ಲಿ ಬಹಮನಿ ಸಾಮ್ರಾಜ್ಯದ ಸಂಸ್ಥಾಪಕ ದೊರೆ ಅಲ್ಲಾವುದ್ದಿನ ಹಸನ್ ಗಂಗೂ ಬಹಮನಿ. ಗುಲಬರ್ಗಾ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಾಗ. ಸಹಜವಾಗಿಯೇ ಹಲವು ಸೂಫಿಗಳು ಇನ್ನೂ ದಕ್ಷಿಣಾಭಿಮುಖವಾಗಿ ಸಂಚರಿಸಿ ಗುಲಬರ್ಗಾ ಹಾಗೂ ಅದರ ಸುತ್ತಮತ್ತ ನೆಲೆಸತೊಡಗಿದರು. ಸಗರ ಕೋಟೆಯು ಬಹಮನಿ ಪೂರ್ವದಿಂದಲೂ ಐತಿಹಾಸಿಕ ಹಾಗೂ ಸೈನಿಕ ಮಹತ್ವದ ಕೋಟೆಯಾಗಿದ್ದು. ಬಹಮನಿ ಆಳ್ವಿಕೆಯಲ್ಲಿ ಅದರ ಮಹತ್ವ ಇನ್ನೂ ವೃದ್ಧಿಯಾಯಿತು. ಹೀಗಾಗಿ ಹದಿನಾಲ್ಕನೆಯ ಶತಮಾನದಲ್ಲಿ ಸಗರ ಗ್ರಾಮವು ಹಲವು ಸೂಫಿಗಳ ಕೇಂದ್ರವಾಗಿತ್ತು."[೯] ಅವುಗಳಲ್ಲಿ ಪ್ರಮುಖವಾಗಿ ದಖನ್‌ಗೆ ಪ್ರಪ್ರಥವಾಗಿ ಆಗಮಿಸಿದ ಹಜ್ರತ್ ಸೂಫಿಸರಮಸ್ತ, ಶೇಖ್ ಇಬ್ರಾಹಿಂ ಸಂಗಾನಿ(ಕ್ರಿ.ಶ ೧೨೬೩-೧೩೩೨)ಮಿನ್ಹಾಜುದ್ದಿನ್ ತಮೀಮ್ ಅನ್ಸಾರಿ(೧೨೮೩-೧೩೬೦) ಐನುದ್ಧಿನ್ ಗಂಜುಲ್ ಇಲ್ಮ್(೧೩೦೬) ಸಾಂತಪೀರ ಪಾಶಾ ಹಾಗೂ ಮುನ್ನಾವರ ಭಾಷಾ.

ಅದೇ ರೀತಿ ಗೋಗಿಯ ಸೂಫಿಗಳಲ್ಲಿ ಪ್ರಮುಖರಾದ ಸೂಫಿ-ಸಂತನಾದ ಚಂದಾಹುಸೇನ ಹಾಗೂ ದಖನಿ ಭಾಷೇಯ ರಚಿಸಿದ 'ಮನ್‌ಲಗನ್' ಕೃತಿಯ ಕವಿಗಳಾದ ಸೂಫಿ ಹಜ್ರತ್ ಮಹಮುದ್ ಬಹರಿಯವರು, ನಾಗನಟಗಿಯ ಸಂತ ದಾರುಶುಕು, ಕಲಬುರಗಿ ಸೂಫಿ ಬಂದೇ ನವಾಜ್ ಮುಂತಾದ ಸೂಫಿಗಳು ಆಗಮಿಸಿ ಬಹಮನಿ ಹಾಗೂ ಬಿಜಾಪುರ ಆದಿಲ್ ಷಾಹಿಗಳ ಕಾಲದಲ್ಲಿ ಬದುಕಿದ್ದರು. ಹಾಗೇ ಔರಂಗಜೇಬನ ದಂಡಯಾತ್ರೆಗಳು, ಬಿಜಾಪುರದ ಆದಿಲ್ ಷಾಹಿ ಮನೆತನವೂ ಮತ್ತು ವಿಜಯ ನಗರ ಸಾಮ್ರಾಜ್ಯಗಳ ನಡುವೆ ನಡೆದ ತಿಕ್ಕಾಟಗಳ ಸಂದರ್ಭದಲ್ಲಿ ಬದುಕಿದ್ದು ಇನ್ನೂ ಸೋಜಿಗವಾದದ್ದು. ಇವುಗಳನ್ನು ಕೊರೆದ ಘಟನೆಗಳ ಚಿತ್ರಗಳನ್ನು ನೋಡಿದ ಕಣ್ಣುಗಳಿಂದ ಸೂಫಿಗಳು ಪರನೆಲದವರಂತೆ ಕಂಡವು. ಆದರೆ ಈ ಭಾಗದಲ್ಲಿ ಸಂತರೊಂದಿಗೆ ಇಟ್ಟುಕೊಂಡ

ಸಾಂಸ್ಕೃತಿಕ ಸಂಬಂಧಗಳು ಮರೆತುಕೊಂಡು ಭಿತ್ತಿಸಿದವು. ಇದೊಂದು ರೀತಿ ಚರಿತ್ರೆಯೂ ದುಃಸ್ವಪ್ನಕಾರಿಯಾದದ್ದು.

"ಅನೇಕ ತತ್ವಚಿಂತನೆಗಳೂ ಬಹುದೇವತೆಗಳ ಆರಾಧನೆಯೂ ಬಹುಭಾಷೆ ಬಹುಸಂಸ್ಕೃತಿಗಳೂ ನೆಲೆಸಿದ್ದ ನಾಡಿಗೆ ಬಂದ ಇಸ್ಲಾಮ್ ಯಾವಯಾವ ಬದಲಾವಣೆ ಪಡೆಯಿತು ಎಂಬುದು ಬೇರೆ ಚರ್ಚೆಯ ಸಂಗತಿ. ಸೂಫಿಗಳಿಗೆ ಮಾತ್ರ ಇಲ್ಲಿನ ಅದ್ವೈತ ಚಿಂತನೆ, ನಿರ್ಗುಣಬ್ರಹ್ಮ ಉಪಾಸನೆ, ಯೌಗಿಕ ಪಂಥಗಳು ಗುರುಮಾರ್ಗಗಳು 'ದೋಸ್ತಾರ'ಕ್ಕೆ ಅನುಕೂಲಕರ ಸಂಗತಿಗಳಾದವು. ಅರಬಸ್ಥಾನದಲ್ಲಿ ಜ್ಞಾನಮಾರ್ಗಿಯೂ ಪರ್ಶಿಯಾದಲ್ಲಿ ಪ್ರೇಮಮಾರ್ಗಿಯೂ ಆಗಿದ್ದ ಸೂಫಿ ಅನುಭಾವಕ್ಕೆ ಭಾರತದ ಭಕ್ತಿಪಂಥಗಳ ಒಡನಾಟ ಧ್ಯಾನಮಾರ್ಗಿಯಾಗುವ ಒತ್ತಾಸೆ ನೀಡಿತು. ವಿಭಿನ್ನ ಪ್ರಾಂತ್ಯಗಳಲ್ಲಿ ಹಲವು ರೂಪಗಳಲ್ಲಿದ್ದ ಅನುಭಾವಿ ಪಂಥಗಳ ಜತೆ ಅದು ಬೆರೆಯಬೇಕಾಯಿತು. ಮಹಾನುಭಾವರು(ಮಹಾರಾಷ್ಟ್ರ) ಚೈತನ್ಯ ಪಂಥಗಳು(ಬಂಗಾಲ) ಸತ್ನಾಮಿಗಳು(ಒರಿಸ್ಸಾ) ಕಬೀರ ಪಂಥಗಳು(ಪೂರ್ವಭಾರತ) ಆಗ ಇದ್ದರೂ. ಕಾಶ್ಮೀರಿ ಪರಂಪರೆಯಲ್ಲಿ ಸೂಫಿಗಳನ್ನು 'ಋಷಿ'ಗಳೆಂದು ಅವರ ಚಾರಿತ್ರೆಗಳನ್ನು 'ಋಷಿನಾಮಾ' ಎಂದು ಕರೆಯಲಾಗುತ್ತದೆ. ಶೇಕ್ ನೂರುದ್ದೀನ್(೧೪೪೩) ನಂದಋಷಿ ಆಗುತ್ತಾನೆ. ಕರ್ನಾಟಕದಲ್ಲಿ ಅಲ್ಲಮಪ್ರಭು ಪ್ರಣೀತ ಆರೂಢ ಪರಂಪರೆಗಳ ಜತೆ ಸೂಫಿಗಳು ಬೆರೆತರು. ದತ್ತ ಮತ್ತು ನಾಥಪಂಥಗಳ ಭಾರತದ ಸೂಫಿಗಳನ್ನು ತಾತ್ವಿಕವಾಗಿ ಬೆಳೆಸಿದ ಆತ್ಮೀಯ ಸಂಗಾತಿಗಳು."[೧೦]

ಆದ್ದರಿಂದ ಕರ್ನಾಟಕದಲ್ಲಿ ನಾಥ-ಸಿದ್ಧ ಪರಂಪರೆಯೊಂದಿಗೆ ಸೂಫಿಗಳು ಕೂಡಿಕೊಂಡಿದ್ದರು ಇವರು ಶರಣ ಪಂಥಗಳಗಿಂತ ಭಿನ್ನಸ್ವರೂಪವಾಗಿದ್ದು. ಯಾಕೆಂದರೆ, ಇವರು ೧೪ನೇ ಶತಮಾನದಲ್ಲಿ ಬಂದಿರುವುದರಿಂದ ನಾಥಸಿದ್ದರ ಸಂಪರ್ಕ ಆರೂಢರೊಂದಿಗೆ ಕೂಡಿಕೊಂಡರು. ಮುಖ್ಯಕೇಂದ್ರಗಳಾದ ಕೊಡೆಕಲ್, ತಿಂಥಣಿ ಬಂದು ಮಾಡ್ಯಾಳ, ಡಿಗ್ಗಿ, ನಾಗನಟಗಿ, ಶಹಾಪುರ, ಸಗರ, ಕುಳಗೇರಿ, ಗೋಗಿ ಇತ್ಯಾದಿ ಊರುಗಳಲ್ಲಿಯ ಸಂತರೊಂದಿಗೆ ಬೆರೆತುಕೊಂಡಿರುವುದು ಕಾಣುತ್ತದೆ. ಇವರು ಬಹಮುಖ್ಯವಾಗಿ ಗುರುಶಿಷ್ಯ ಹಾಗೂ ಗೆಳೆಯರೊಂದಿಗೆ ಸಂಬಂಧ ರೂಪಿಸಿಕೊಂಡ ಬಗೆಯನ್ನು ತೋರುತ್ತದೆ. ಇದನ್ನು ಆರೂಢ ಸಂಗಮನಾಥ-ಗೋಗಿ ಚಂದಾಹುಸೇನಿ. ಕುಳಗೇರಿ ಖಾದರಲಿಂಗ-ನಾಗನಟಗಿ ಪರಮಾನಂದರು, ಕೊಡೆಕಲ್ ಬಸವಣ್ಣ-ಆಲಂ ಹಾಗೂ ತಿಂಥಣಿ ಮೋನಪ್ಪಯ್ಯ-ಪೈಗಂಬರ ಇವುಗಳ ಆಚರಣೆಗಳಲ್ಲಿ ಸೂಫಿಗಳು ಕೂಡಿಕೊಂಡ ಬಗೆಯನ್ನು ತಿಳಿಯುತ್ತದೆ. ಹೀಗೆ ಸೂಫಿಗಳ ಆಗಮನ ಸಂತರೊಂದಿಗೆ ಸಂಬಂಧಗಳು ಕಂಡುಬರುತ್ತವೆ.

ಕೊನೆಯ ಟಿಪ್ಪಣಿಗಳು :

೧ ಕಬೀರವಾಣಿ, ಪಾರಸನಾಥ ತೀವಾರಿ, ಪುಟ-೩೧

೨ ಸೂರ್ ಅಲ್ ನೂರ, ಕುರಾನ್, ಆಯತ್ ನಂ ೪೬

೩ ಕಬೀರವಾಣಿ, ಪಾರಸನಾಥ ತೀವಾರಿ, ಪುಟ-೩೧

೪ ಹಿಸ್ಟರಿ ಆಫ್ ದಿ ಅರಬ್ಸ್, ಫಿಲಿಫ್ ಕೆ. ಹಿಟ್ ಪುಟ-೨೧೦

೫ ಸೂಫೀಮತ ಸಾಧನಾ ಔರ ಸಾಹಿತ್ಯ, ರಾಂಪೂಜನ್ ತೀವಾರಿ, ಪುಟ-೧೮೯

೬ ಸಾಂಸ್ಕೃತಿಕೆ ಚಾರ ಅಧ್ಯಾಯ್, ರಾಂಧಾರಿಸಿಂಹ ದಿನಕರ, ಪುಟ-೩೨೩

೭ ಅದೇ ಪುಟ

೮ ಕರ್ನಾಟಕದ ಸೂಫಿಗಳು, ರಹಮತ್ ತರೀಕೆರೆ, ಪುಟ-೩೮

೯ ಮಂದಾಕಿನಿ(ಸಂ), ಚಂದ್ರಕಾಂತ ಕರದಳ್ಳಿ, ಪುಟ-೨೧೦

೧೦ ಕರ್ನಾಟಕದ ಸೂಫಿಗಳು, ರಹಮತ್ ತರೀಕೆರೆ, ಪುಟ-೪೮

ಅಧ್ಯಾಯ : ನಾಲ್ಕು

ಶಹಾಪುರ ತಾಲೂಕಿನ ಸೌಹಾರ್ದತೆಯ : ಸೂಫಿ-ಸಂತರು

ಯಾದಗಿರಿ ಜಿಲ್ಲೆಯಲ್ಲಿ ಶಹಾಪುರ ತಾಲೂಕವು ಒಂದು. ಇದು ಕೃಷ್ಣ ಮತ್ತು ಭೀಮಾ ನದಿಗಳನ್ನು ಹೊಂದಿಕೊಂಡು ಬರುವ ಭೂ ಪ್ರದೇಶ. ಇಲ್ಲಿಯ ನೆಲ-ಜಲ ಬೆಟ್ಟ-ಗುಡ್ಡ ಗವಿಗಳು ತುಂಬಾ ವಿಶಿಷ್ಟ ರೀತಿಯಲ್ಲಿ ಇದೆ. ಇದಕ್ಕೆ ಇತಿಹಾಸದಿಂದ ಹಾಗೂ ಪುರಾಣ ಕಾಲದಿಂದಲೂ ಸಗರ, ಸಾಗರಪುರಿ, ಸಗರಪುರ, ಸಗರಗಡ. ಸಗರಾದ್ರಿ ಹಾಗೂ ಸಗರನಾಡು ಎಂದು ಪ್ರಚಲಿತವಿದೆ. ಹಾಗೆಯೇ ಇತಿಹಾಸಕಾರ ಕ್ರಿ.ಶ ೧೮೮೪ರಲ್ಲಿ ಎನ್.ಮುಜುಮದಾರವರು ಇಲ್ಲಿ ಭೂ ಉತ್ಖನನ ಮಾಡುವಾಗ ರಾಷ್ಟ್ರಕೂಟರ ಕಾಲದ (ಕ್ರಿ.ಶ ೮ನೇ ಶತಮಾನದ್ದು) ಚಾಮುಂಡಿ ವಿಗ್ರಹವನ್ನು ಪತ್ತೆ ಹಚ್ಚಿ ಈ ಪ್ರದೇಶ 'ಬಹಾವುದ್ದೀನ್, ಬವಾಸಖಾನ್ ಹಾಗೂ ಶಹಿದ್ ಫಕೀರ್ ಸರಕಾರರ ಅಧೀನಕ್ಕೆ ಒಳಪಟ್ಟಿದ್ದರಿಂದ ಇದಕ್ಕೆ ಶಾದಿಲ್‌ಪುರ ಎಂದು ಕರೆಯುತ್ತಿದ್ದರು. ನಂತರ ಜನರ ನುಡಿಯಿಂದ 'ಶಹಾಪುರ' ಅಂತ ಬದಲಾವಣೆ ಆಗಿದೆ ಎಂದು ಹೇಳಿ, ಆ ಕಾಲದಲ್ಲಿ ಶಾಕ್ತಪಂಥ ನೆಲೆಗೊಂಡಿತ್ತೆಂದು ಊಹಿಸುತ್ತಾರೆ.

ಹಾಗೇ ಈ ಪ್ರದೇಶವು ಪ್ರಭುತ್ವವು ಆಳರಸರ ತೆಕ್ಕೆಯಲ್ಲಿ ಸಿಲುಕಿ ಘರ್ಷಣೆಗಳು ಒಳಗೊಂಡಂತೆ. ಧರ್ಮ ಸಂಘರ್ಷಗಳು ನಡೆದಿರುವ ಸಂಗತಿಗಳು ಕಂಡುಬರುತ್ತವೆ. ಇವುಗಳ ತುತ್ತಿಗೆ ನಲುಗಿದ ಈ ನೆಲವು ನಾವೆಲ್ಲರೂ ಒಂದು ಎಂಬ ಭಾವನೆಯಿಂದ ಕೂಡಿಕೊಂಡ ಸಂಬಂಧಗಳಿಗೆ ಇಲ್ಲಿಯ ಸೂಫಿ-ಸಂತರ ಪರಂಪರೆ ಕಾರಣವಿದೆ. ಇಲ್ಲಿ ತುಂಬಿ ಹರಿಯುವ ನದಿಗಳು ಬೆಟ್ಟದ ಸಾಲುಗಳು ಫಲವತ್ತತ್ತೆಯ ಭೂಮಿ ಹಾಗೂ ಸೊಬಗನ್ನು ಉಂಟು ಮಾಡುವ ತಾಣ ಇವುಗಳು ಜೀವನಕ್ಕೆ ಸಾಕಾರಗೊಳಿಸಲು ಸೂಕ್ತ ನೆಲೆಯನ್ನು ಹೊಂದಿದೆ.

ಇಂತಹ ನೆಲದಲ್ಲಿ ಅನೇಕ ಸೂಫಿ-ಸಂತರು, ಶರಣ ವಚನಕಾರರು. ಅವಧೂತರು ಆರೂಢಿಗಳು, ಅವರೂಕ್ಷರು, ನಾಥಿಕರು, ಕಪಾಲಿಗಳು, ಯತಿಗಳು ಹಾಗೂ ಶಾಕ್ತರು ಇವರೆಲ್ಲರು ಈ ಮಣ್ಣಿನ ವಾಸನೆ ಅನುಭವಿಸಿ ಹೋಗಿದ್ದಾರೆ. ಅವರು ಗುರು-ಶಿಷ್ಯ ಪರಂಪರಯನ್ನು ಕಟ್ಟಿ ಸಾಂಸ್ಕೃತಿಕ ಕಾರ್ಯಸ್ಥಾನವನ್ನು ಮಾಡಿಕೊಂಡು ಅಸುನೀಗಿದ್ದು, ನಂತರ ದಿನಮಾನದಲ್ಲಿ ಜನರ ನಂಬಿಕೆಯಲ್ಲಿ ದೈವೀಸ್ವರೂಪಿಯಾಗಿ ಬದುಕಿದ ಕುರುಹುಗಳಿವೆ. ಅವುಗಳು ಬಹುಮುಖ್ಯವಾಗಿ ಸಗರದ ಐನುದ್ದೀನ್ ಮಹಮ್ಮದ್ ಜುನ್ಯಾದಿ, ಸಾಂತಪೀರ, ಮುನವರ ಭಾಷಾ, ಸೂಫಿಸರ್ಮಸ್ತ, ಕುರಕುಂದದ ಗೈಬುಸಾಹೇಬ. ಗೋಗಿಯ ಚಂದಾಹುಸೇನಿ, ಗುರಸಣಿಗಿಯ ಜಲಾಲ್ ಡೊಂಗ್ರಿ, ನಾಗನಟಗಿಯ ದಾರುಶುಕು ಹಾಗೂ ಪರಮಾನಂದ, ಡಿಗ್ಗಿ ಸಂಗಮನಾಥ, ಗುಲ್‌ಸುರುಮದ ಸಿದ್ದಲಿಂಗ ಹಾಗೂ ಅಮರಕಲ್ಯಾಣ, ಸಂತ ರಸ್ತಾಪುರದ ತಿಪ್ಪಣ್ಣಪ್ಪ, ಅನವಾರದ ಚರಬಸವೇಶ್ವರ ತಾತ, ಸಗರದ ಗುರು ಪರಪ್ಪಯ್ಯ, ಡಕ್ಕಲಿಗ ಕೆಂಚಯ್ಯ, ಬೊಮ್ಮಯ್ಯ, ಕೂಡಲೂರ ಬಸವಲಿಂಗಪ್ಪ, ಕನಗನಳ್ಳಿ ಸಿದ್ಧರಾಮೇಶ್ವರ, ರಾಚೋಟಿ ಮುತ್ಯ, ಸಾವೂರು ದೊಡ್ಡಪ್ಪ ಅಪ್ಪರು. ಹಳಿಗೇರಿ ತಾತನವರು.

ಕುಳಗೇರಿ ಖಾದರಲಿಂಗ ಹಾಗೂ ಮೂಡಬೂಳ ರಂಗಲಿಂಗೇಶ್ವರರು, ಮೊಟ್ಪಳ್ಳಿ ಹಸನಸಾಬರ ಚೆನ್ನೂರು ಜಲಾಲ ಸಾಬರು, ಕೊಡೇಕಲ್ ಬಸವಣ್ಣ ಹಾಗೂ ತಿಂಥಣಿ ಮೋನಪ್ಪಯ್ಯ ಹೀಗೆ ಅನೇಕ ಶರಣರು ತತ್ವಪದಕಾರರು ಸೂಫಿ–ಸಂತರು ಈ ನೆಲದಲ್ಲಿ ಬಾಳಿ ಬದುಕಿದ್ದು ಕಂಡುಬರುತ್ತದೆ.

ಆದ್ದರಿಂದ ನನ್ನ ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಶಹಾಪುರದ ಅಮರಕಲ್ಯಾಣ, ಡಿಗ್ಗಿ ಸಂಗಮನಾಥ, ಗೋಗಿ ಚಂದಾಹುಸೇನಿ, ಸಗರದ ಸೂಫಿ ಸರ್ಮಸ್ಥ ಹಾಗೂ ನಾಗನಟಗಿಯ ಪರಮಾನಂದರು ಇವುಗಳ ಬಗ್ಗೆ ಜನರ ನಂಬಿಕೆ ಮತ್ತು ಪರಂಪರೆಯನ್ನು ಕುರಿತು ಕರ್ನಾಟಕದ ಬಹು ಸಂಸ್ಕೃತಿಯ ಒಳಗೆ ಅಧ್ಯಯನಿಸಲು ಆಕಸ್ಮಿಕವಾದವು, ಅಂತಹ ಸಂಶೋಧನೆಗಳು "ಚರಿತ್ರೆಗೆ ಇಂದು ತನ್ನ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತ ಹೊಸ ಬಗೆಯಲ್ಲಿ ನಿರ್ವಚನೆಗೊಳ್ಳುತ್ತದೆ. ಚರಿತ್ರೆ ನಮ್ಮದು ನಮ್ಮ ವರ್ತಮಾನಕ್ಕೆ ಅಥವಾ ಬದುಕಿಗೆ ಸಂಬಂಧಿಸಿದ್ದು, ಎನ್ನುವ ಅಸ್ಮಿತೆಯ ಹಿನ್ನೆಲೆಯ ಭಾವನೆ ಅಥವಾ ಜಾಗೃತಿ ಜನರಲ್ಲಿ ಮಾಡುತ್ತಿದ್ದು, ಇದು ಜನಕೇಂದ್ರಿತ ಚರಿತ್ರೆ ರಚನೆಗೆ ಎಡೆ ಮಾಡಿಕೊಟ್ಟರೆ"[೧] ಈ ರಚನೆಗೆ ಜನಕೇಂದ್ರಿತವಾದ ಅಧ್ಯಯನ, ಅಂದರೆ ಮಾನವ ಬದುಕುವ ನೆಲೆಯ ಮೂಲಕ ಚರಿತ್ರೆಯನ್ನು ನೋಡುವ ವಿಧಾನ. ಈ ಚಾರಿತ್ರಿಕ ಬರವಣಿಗೆಯಲ್ಲಿ ಅಷ್ಟಾಗಿ ಪ್ರಾಮುಖ್ಯತೆ ಪಡೆಯದ ಕ್ಷೇತ್ರಗಳು ಕರ್ನಾಟಕದಲ್ಲಿ ಬಹಳಷ್ಟಿವೆ. ಅವುಗಳಲ್ಲಿ ಮುಖ್ಯವಾದದ್ದು ಕತೆಯಾಗಿಸಿಕೊಂಡು ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳ ಸೂಫಿ–ಸಂತರ ಚರಿತ್ರೆಯನ್ನು ಮೌಖಿಕ ಮತ್ತು ಪುರಾಣ ಇವುಗಳ ಸಂಕಥನದ ವಿಷಯವನ್ನಾಗಿ ಸಂಗ್ರಹಿಸಿ ವಿಶ್ಲೇಷಿಸಿಲಾಗಿದೆ.

೪.೧ ಶಹಾಪುರದ 'ಅಮರ ಕಲ್ಯಾಣ'

'ಕಲ್ಯಾಣ'ದ ಬಗ್ಗೆ ಬಹಳಷ್ಟು ಚರ್ಚೆಗಳು, ಅಧ್ಯಯನಗಳು ನಡೆದಿರುವಂತೆ ಈ ಅಮರ ಕಲ್ಯಾಣ ಸ್ಥಳದ ಬಗ್ಗೆ ಗುರುತಿಸಲು ಸಂಶೋಧನೆಯಲ್ಲಿ ಜೀಕಾಡುತ್ತಿರುವುದನ್ನು ಕಂಡು ಬರುತ್ತದೆ. ಇದಕ್ಕೆ ಬಹುಮುಖ್ಯವಾಗಿ ಕಲ್ಯಾಣ ಎಂದ ಕೂಡಲೆ ಬೀದರ ಜಿಲ್ಲೆಯ 'ಬಸವಕಲ್ಯಾಣ'ವನ್ನು ನೆನಪಿಸಿಕೊಂಡು ಇದರ ಮೂಲ ಹುಡುಕಲು ಪ್ರಯತ್ನಿಸಿರಬಹುದು. ಬಸವಕಲ್ಯಾಣವು ೧೨ನೇ ಶತಮಾನದ ವಚನ ಚಳುವಳಿ ನಾಯಕನಾದ ಬಸವಣ್ಣನವರ ಕಾರ್ಯಕ್ಷೇತ್ರ ಆಗುವುದಕ್ಕಿಂತ. ಹಿಂದೆ ದಕ್ಷಿಣ ಭಾರತದಲ್ಲಿ ಇದು ಅತ್ಯಂತ ಗಮನಾರ್ಹ ಪಟ್ಟಣವಾಗಿತ್ತು. ಕಲ್ಯಾಣ ಚಾಳುಕ್ಯರ ಅರಸನಾದ ವಿಕ್ರಮಾದಿತ್ಯನ ಕಾಲದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯ ಕೇಂದ್ರ ರಾಜಧಾನಿಯಾಗಿತ್ತು. ನಂತರ ಈ ಕಲ್ಯಾಣ ಬಸವಾದಿ ಶರಣರ ಕಾಲದಲ್ಲಿ ಚಳುವಳಿ ಆಂದೋಲನದ ಕೇಂದ್ರ ಸ್ಥಾನವಾಗಿ ಹೆಸರುವಾಸಿ ಆಗಿತ್ತು. ಭಾರತ ಹಾಗೂ ಕರ್ನಾಟಕದ ವಿವಿಧ ಭಾಗದಿಂದ ಸಮಾಜದ ವಿವಿಧ ಸ್ತರಗಳಿಗೆ ಸೇರಿದ ಜನರನ್ನು ಇದು ಆಕರ್ಷಿಸಿತು. ಇಲ್ಲಿ ಸತ್ಯರು, ಸಾತ್ವಿಕರು ತುಂಬಿಕೊಂಡಿದ್ದರಿಂದ ಪಾಪಿಗಳು, ಕೋಪಿಗಳು, ಅಸತ್ಯರು, ಅನಾಚಾರಿಗಳು ಹೋಗಬಾರದೆಂಬ ಪ್ರತೀಕವು ಇತ್ತು. ಈ ಕಲ್ಯಾಣದಲ್ಲಿ ವಚನ ಚಳುವಳಿಯ ಶರಣರ ಚಿಂತನೆಗಳು ಜನಸಾಮಾನ್ಯರ

[illegible]

ಮೇಲೆ ಪ್ರಭಾವ ಮತ್ತು ವಾತಾವರಣ ಬೀರಿ ಸಮಾಜದ ಮುಖ್ಯವಾಹಿನಿಗೆ ಬರಲು ಕಾರಣವಾಯ್ತು. ಇದು ಪ್ರಭುತ್ವ ಮತ್ತು ಜನಸಮುದಾಯಗಳ ಮಧ್ಯ ನಡೆದಿರುವ 'ಸಂಘರ್ಷಣೆಯ ಕಾಲ' ಎಂದು ಕರೆಯಬಹುದು. ಯಾಕೆಂದರೆ ಇಲ್ಲಿ ಕ್ರಾಂತಿ ಸಂಭವಿಸಿ ಶರಣರ ಸಮೂಹ ಚಿದ್ರಗೊಂಡು ಕಂಗಾಲಾದರು. ಹಾಗೂ ಕಗ್ಗೊಲೆಯೂ ಆದರು. ಆದರೆ ಇವರು ಪಲಾಯನಗೈದು ಆತ್ಮಹತ್ಯೆ ಮಾಡಿಕೊಂಡಿಲ್ಲವೆಂದು ಪ್ರತಿಪಾದಿಸುತ್ತೇನೆ. ಈ ಕಲ್ಯಾಣವನ್ನು ಕೆಲವು ವಿದ್ವಾಂಸರು 'ಸಮಯ ಕಲ್ಯಾಣ'ವೆಂದು ಗುರುತಿಸುತ್ತಾರೆ. ಅದೇ ರೀತಿ ವಿಜಯನಗರದ ರಾಜಸತ್ತೆ ಮತ್ತು ಧರ್ಮಸತ್ತೆ ಇವು ಆಕಾರಗಳನ್ನು ಇಟ್ಟುಕೊಂಡು ಇದನ್ನು 'ವಿಜಯಕಲ್ಯಾಣ' ಎಂದು ಕರೆದುಕೊಂಡು ಇವೆರಡು ಒಂದೇ ಎಂದು ಗುರುತಿಸುತ್ತಾರೆ. ಇವೆರೆಡರಲ್ಲಿಯ ಭಿನ್ನ ಸ್ವರೂಪಗಳ ಬಗ್ಗೆ ಚರ್ಚಿಸಿಕೊಳ್ಳದ ಕಾರಣವೂ ಇರಬಹುದು. ಈ ಕಾರಣದಿಂದಲೇ ಮುಂದಿನ ಕಾಲಘಟ್ಟದ ಚಳುವಳಿ ಸ್ವರೂಪದ ಬಗ್ಗೆ ಒಳ ಅರಿವು ತಿಳಿಯದೆ ಹೋಗಿರಬಹುದುದೇನೊ. ಇಲ್ಲಿ ಅದರ ಬಗ್ಗೆ ಚರ್ಚಿಸಿದೆ ಕೇವಲ 'ಅಮರ ಕಲ್ಯಾಣ' ಸ್ಥಳವನ್ನು ಪರಿಚಯಿಸುತ್ತೇನೆ.

ಈ ಅಮರ ಕಲ್ಯಾಣದ ಪರಂಪರೆ ಡಕ್ಕಲಿಗ ಕೆಂಚಯ್ಯನಿಂದ ಹಿಡಿದು ಪರಮಾನಂದರು ಡಿಗ್ಗಿ ಸಂಗಯ್ಯ, ರಸ್ತಾಪುರದ ಬಾಡ ತಿಪ್ಪಣ್ಣ, ಶರಭಲಿಂಗ, ದೇವಯ್ಯ, ಕೊಡೆಕಲ್ಲ ಬಸವಣ್ಣ, ಗುತ್ತಿಬಸವಣ್ಣ, ಸಗರ ಪರಪಯ್ಯ, ಕುಳಗೇರಿ ಖಾದರಲಿಂಗ ಹಾಗೂ ನಾಗಾವಿ ಪರಂಪರೆಯ ಒಳಗೂ ಸಂಧಿಸಿಕೊಂಡು ಬರುತ್ತದೆ. ಇಂತಹ ಚಾರಿತ್ರಿಕಕತೆಯನ್ನು ಹೊಂದಿರುವ 'ಅಮರಕಲ್ಯಾಣ' ಯಾರಿಂದ ಪ್ರಾರಂಭವಾಯ್ತು ? ಇದರ ಮೂಲ ಎಲ್ಲಿದೆ ? ಎಂಬುದನ್ನು ಹುಡುಕಾಡಿದ್ದು ಸಂಶೋಧನೆಯಲ್ಲಿ ಕಂಡುಬರುತ್ತದೆ.

ಇದು ಶಹಾಪುರದಿಂದ ೧೫ಕಿ.ಮಿ ದಕ್ಷಿಣಾಭಿಮುಖದಲ್ಲಿ ಬರುತ್ತದೆ. ಎರಡು ಗುಡ್ಡಗಳು ಒಂದು ಡಿರಕಿ ಬಸವನಕೊಳ್ಳ ದಾಟಿ ಹೋದರೆ ಅಲ್ಲಿಯೊಂದು ಹಾಸು ಬಂಡಿಯ ಮೇಲೆ ಸಣ್ಣದೊಂದು ಗುಡಿಯಿದೆ. ಇದು ಸುಮಾರು ೪X೬ ಅಡಿ ಉದ್ದಗಲದ ೩ಅಡಿ ಎತ್ತರ ಯಾವುದೇ ಗೋಪುರ ಅಲಂಕಾರವಿಲ್ಲದ ರೀತಿಯಲ್ಲಿ ಕಂಡುಬರುತ್ತದೆ. ಇದು ಬಹುಮುಖ್ಯವಾಗಿ ಈ ಸಣ್ಣಗುಡಿ ರೂಪಕವಾಗಿ ನಿರ್ಮಿಸಿಕೊಂಡದ್ದು ನಂತರ ದಿನಗಳಲ್ಲಿ. ಯಾಕೆ ಈ ಮಾತನ್ನು ಹೇಳಲು ಬಯಸುತ್ತೇನೆ ಅಂದರೆ ನನ್ನ ಮೂಲ ಹೆಸರು ನಮ್ಮ ಕುಟುಂಬದವರು 'ಅಮೃತ್' ಅಂತನೇ ಇದ್ದು ಅದು ಆ ಅಮರಕಲ್ಯಾಣದ ಹೆಸರು ಇವತ್ತಿಗೂ ನನ್ನ ಮೂರನೇ ಸಹೋದರನ ಹೆಸರು ಅಮೃತ್‌ಅಲಿ ಇದೆ. ಆದರೆ ನನ್ನ ಕುಟುಂಬದವರು ಒಂದು ದಿನನೂ ಗುಡಿ-ಗುಂಡಾರ, ಮಸೀದಿಗಳಿಗೆ ಕಳುಹಿಸಿರಲಿಲ್ಲ. ಆಕಸ್ಮಿಕವಾಗಿ ಒಂದು ದಿನ ನನಗೆ ನಮ್ಮ ತಂದೆಯ ಜೊತೆಗೆ ಗುಡ್ಡಕ್ಕ ಹೋಗಿ ಸೀತಫಲ ಕಾಯಿಗಳನ್ನು ಅರಕೊಂಡು ಬರಬೇಕೆಂಬ ಆಸೆಯಿಂದ ಆವತ್ತು ನಾನು ಬರುತ್ತಿನಿ ಅಂತ ಹಠ ಮಾಡಿದೆ. ಆವತ್ತು ರವಿವಾರ ಅಮವಾಸೆ ಇತ್ತು. ಇದು ನನ್ನ ಕುಟುಂಬಕ್ಕೆ ವಿಶೇಷ ಏನೂ ಅಲ್ಲ, ಅಂದರೆ ಮತೀಯ ದೃಷ್ಟಿಯಲ್ಲಿ ಹೇಳುತ್ತಿಲ್ಲ. ಅದು ಒಂದು ದಿನ ಬರುವಂತೆ

ಬರುತ್ತಿದೆಂದು ತಿಳಿದಿರುವ ಕುಟುಂಬ ಅಷ್ಟೇ. ಆವತ್ತು ಹಠ ಹಿಡಿದ ಕಾರಣಕ್ಕೆ ನನ್ನನ್ನು ಕರೆದುಕೊಂಡು ಹೋಗಲು ನನ್ನ ತಾಯಿಯನ್ನು ತಯ್ಯಾರು ಮಾಡಿದರು. ನಮ್ಮ ತಂದೆಯ ಮಗ್ಗಲಲ್ಲಿ ನೀರು ತುಂಬಿಕೊಳ್ಳುವ ತತ್ರಾಣಿಯನ್ನು ಹಾಕಿಕೊಂಡು ನಮ್ಮೂರಿಂದ ಹೋದೆವು. ಆಗ ನನಗೆ ಆರೇಳು ವರ್ಷಗಳು ಇರಬಹುದು. ಇರಲಿ ಹೇಗೊ ಮಾಡಿ ಆ ಸ್ಥಳವನ್ನು ತಲುಪಿದೆವು. ಆಗ ಹನ್ನೆರಡು ಗಂಟೆ ಸಮಯ ಆಗಿರಬಹುದೇನೊ ಗೊತ್ತಿಲ್ಲ. ಆದರೆ ಒಂದು ಮಾತ್ರ ನೆನಪಿದೆ ನಾವುಗಳು ಹೋಗಿದ್ದಕ್ಕಿಂತ ಮುಂಚೆ ಅದಕ್ಕೆ ಸಂಬಂಧಿಸಿದ ಪೂಜಾರಿ ಇದ ರಸ್ತಾಪುರದ ಭೀಮಶ್ಯಾ ಪೂಜಾರಿಯು ಅಸ್ಪೃಶ್ಯ ಸಮುದಾಯಕ್ಕೆ ಸೇರಿದವನು. ವಿಶೇಷವಾಗಿ 'ತಿಪ್ಪಣ್ಣಪ್ಪ' ಮನೆತನದವರು. ಅವರು ಈಗಲೂ ಅವರೇ ಇದಕ್ಕೆ ಪೂಜಾರಿಗಳು. ನಾನು ಆವತ್ತು ಆ ಹಾಸುಬಂಡಿಯ ಮೇಲೆ ನಿಂತುಕೊಂಡು ನನ್ನ ತಂದೆಗೆ 'ಅಮರಕಲ್ಯಾಣ'ಗುಡಿ ಎಲ್ಲಿದೆಯಂತೆ ಕೇಳಿದೆ ? ಅದಕ್ಕೆ ನನ್ನ ತಂದೆ-ತಾಯಿ ಹಾಗೂ ಆ ಪೂಜಾರಿ ಇವರೆಲ್ಲರೂ ಗೊಳ್ಳೆಂದು ನಕ್ಕರು. ನಕ್ಕು ನಂತರ ನಿನ್ನೆದುರಿಗೆ ಆಯ್ತಲ್ಲ. ಈನೀಗ ಅಂಬರಿ ಗಿಡದ ತಪ್ಪಲು ಹಾಗೂ ಅಂಬರಿ ಹೂ ಹಾಕಿದೆಯಲ್ಲ ಅದೇ 'ಅಮರಕಲ್ಯಾಣ' ಅಂತ ಹೇಳಿದರು. ಆ ಸಮಯದಲ್ಲಿ 'ಎಡಕ ಬಲಕ ಎರಡು ಕಲ್ಲು ಉದ್ದಕ್ಕೂ ಕೂಡಿಸಿದರೂ ಹಿಂದಗಡೆ ಒಂದು ಕಲ್ಲು ನಿಲಿವಿಟ್ಟಿದ್ದರು. ಅವುಗಳ ಮೇಲೆ ಚಪ್ಪಡಿ ಆಕಾರ ಇರುವ ಕಲ್ಲು ಡಬ್ಬಾಕಿದರು. ಅದರೊಳಗೆ ಒಂದು ಗುಂಡಕಲ್ಲು ಆಕಾರದಷ್ಟು ಸಣ್ಣ ಉದ್ದ ಇರುವ ಕಲ್ಲು ಇತ್ತು. ಅದರ ಮೇಲೆ ಅಂಬರಿಗಿಡದ ತಪ್ಪಲು ಹೂಗಳಿಂದ ಮುಚ್ಚಿಕೊಂಡಿತ್ತು. ಇದು ನಂಗೆ ಇನ್ನೂ ನೆನಪಿದೆ ಹಾಗೂ ನಮ್ಮ ಅಮ್ಮನಾದ ಘೀರಮ್ಮಳು ಮನೆಯಲ್ಲಿ ಪಿಳಿಬಂಟ ರಂಗವ್ವನಿಗೆ ರಾತ್ರಿವೊತ್ತು ನಮ್ಮಮ್ಮ ಕಥೆ ಹೇಳಿದ್ದು ಸಪ ನೆನಪಿಗೆ ಬರುತ್ತದೆ ಅದು ಹೀಗಿದೆ :

"ಒಂದಾನೊಂದು ಈ ನಾಡಿನೊಳಗ ಪರಪಯ್ಯ, ಸಂಗಯ್ಯ ಮತ್ತು ಚಂದಾಹುಸೇನಿ ಅಂತ ಮೂವರು ಗೆಳೆಯರು, ಗುರು ಶಿಷ್ಯರಾಗಿದ್ದರು. ಅವರು ಚಂತ್ಯಾನ ಊರು ಜನರ ಮುಂದೆ ಕಂಡರೆ ಚಂಜಿಕಿ ಹೊತ್ತು ಮುಳಗದರೊಳಗ ಅವರಿಗೆ ಸಮೀಪ ಗುಡ್ಡದಲ್ಲಿ ಗವಿ ಇದ್ದರೆ ಸಾಕು ಅಲ್ಲಗೆ ಹೋಗಿ ಇರುತ್ತಿದ್ದರು. ಇವರು ಯಂಗ ಇದ್ದುರಂದ್ರ ಒಂದು ಗವಿನಾ, ಒಂದು ಊರುನಾ ಈ ಭೂಮಿ ಎಲ್ಲಿದೆಯೊ ಅಲ್ಲಿಯವರೆಗೂ ತಿರುಗಾಡುತ್ತಿದ್ದರು. ಅದರಂಗ ಈ ಶಹಾಪುರ ಗುಡ್ಡಕ್ಕ ಒಂದು ದಿನ ಹಣ್ಣು-ಹಂಪಲು ತಿಂದು, ಅಲ್ಲಿ ಎಷ್ಟು ಗವಿಗಳಿದ್ದಾವೆ ಎಂದು ನೋಡಿಕೊಂಡು ಬರಮಂತ ತಮ್ಮ ತಮ್ಮಲ್ಲಿ ಮಾತಾಡಿಕೊಂಡು ಹೊರಟರು. ಹೋಗಿ ಎಲ್ಲಾ ಗವಿಗಳನ್ನು ನೋಡಿದರು. ನಂತರ ಸ್ವಲ್ಪಹೊತ್ತು ಹಣ್ಣ-ಹಂಪಲು ತಿಂದರಾಯ್ತು ಅಂತ ಗಿಡ-ಗಿಡ ತಿರುಗಾಡುತ್ತಿದ್ದರು. ಆಗ ದೂರದಿಂದ ಒಂದು ಧ್ವನಿ ಪರಪಯ್ಯನಿಗೆ ಕೇಳಿಸಿತು, ಆಗ ಅವನು ಸಂಗಯ್ಯ ಹಾಗೂ ಚಂದಾಹುಸೈನಿ ಇವರಿಬ್ಬರಿಗೂ 'ಯಾರೊ ಕೂಗಿದಂಗ ಕೇಳಿಸುತ್ತದೆ' ಅಂತ ಹೇಳಿದ. ಅವರಿಬ್ಬರು ಸಪ್ಪಳ ಮಾಡದೆ ನಿಂತು ಎಲ್ಲಿಂದ ಅಂತ ಸ್ವಲ್ಪ ಕಿವಿಕೊಟ್ಟು ಕೇಳತೊಡಗಿದರು. ನಂತರ ಅವರಿಗೂ

ಧ್ವನಿ ಕೇಳಿದ ಕೂಡಲೇ 'ಹೌದಲ್ಲೊ' ಈ ಕಡೆಯಿಂದ ಅಂದರೆ ಈ ಕೊಳ್ಳದ ಕಡೆಯಿಂದ ಕೇಳಿಬರುತ್ತಿದೆ, ನಡಿರಿ ಹೋಗೊಮು ಅಲ್ಲಿ ಯಾರು ಇರಬಹುದು ಅಂತ ಮಾತಾಡಿಕೊಂಡು ಆ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಒಬ್ಬ ದಿಗಂಬರವಾಗಿ ಆ ಹಾಸುಬಂಡೆಯ ಮೇಲೆ ಒಂದು ಗುಂಡಗಲ್ಲು ಆಕಾರದ ಉದ್ದನೆಯ ಸಣ್ಣದೊಂದು ಕಲ್ಲನ್ನು ಎದಿರಿಗಿಟ್ಟಕೊಂಡು ತಪ್ಪಸ್ಸು ಕುಳಿತಿರುತ್ತಾನೆ. ಆತನನ್ನು ಎಲ್ಲರೂ ದಿಗಂಬರಸ್ವಾಮಿ ಅಂತ ಕರೆಯುತ್ತಿದ್ದರು. ಈತನ ಮೂಲ ಡಕ್ಕಲಿಗ ಕೆಂಚಯ್ಯ ಅಂತ ಹೆಸರಿತ್ತು. ಅದೇನಿರಲಿ ಬಂದ ಮೂವರು ಈತನನ್ನು ಕಂಡು ಆತನ ಸಮೀಪ ಹೋಗಲಿಲ್ಲ, ಯಾಕೆಂದರೆ ತಪ್ಪಸ್ಸಿಗೆ ಭಂಗ ತರಬಾರದೆಂದು ತಿಳಿದು ಅಲ್ಲಿಯೇ ಕಂಟಿಯ ನೆರಳಿನ ಕೆಳಗೆ ಕುಳಿತ್ತಿರುತ್ತಾರೆ. ಆ ಕಡೆಯಿಂದ ಇಬ್ಬರು ವ್ಯಕ್ತಿಗಳು ಆತನನ್ನು ಬೇಟಿಯಾಗಲು ಆಲ್ಲಿಗೆ ಬರುತ್ತಾರೆ, ಅವರಿಬ್ಬರು ಬೇರೆ ಬೇರೆ ದಿಕ್ಕಿನವರು. ಒಬ್ಬರು ಪೂರ್ವದಿಕ್ಕಿನವರಾದರೆ, ಇನ್ನೊಬ್ಬ ದಕ್ಷಿಣ ದಿಕ್ಕಿನವನು. ಅವರ ಕೆಲಸ ದಿನಾಲು ಬಂದು ಆತನಿಗೆ ಊಟಕೊಟ್ಟು ಮಾತಾಡಿಸಿಕೊಂಡು ಹೋಗುವುದಾಗಿತ್ತು. ಅಂದಿನಂತೆ ಇವತ್ತು ಕೂಡ ಬಂದಿದ್ದರು. ಆಗ ಆ ದಿಗಂಬರಸ್ವಾಮಿ ತಪ್ಪಸ್ಸಿನಲ್ಲಿ ಕುಳಿತಿದ್ದು ಕಂಡು. ಅವರು ಕೂಡ ಕಂಟಿಯ ನೆರಳಗಿ ಹೋಗಿ ಇವರು ಕುಳಿತುಕೊಂಡರು. ಸ್ವಲ್ಪವೊತ್ತಿನ ನಂತರ ಆ ದಿಗಂಬರಸ್ವಾಮಿಯು ತನ್ನ ತಪ್ಪಸ್ಸು ಮುಗಿಸಿಕೊಂಡು ಆನಂದಕ್ಕೆ ಅಣಿಯಲು ತಯ್ಯಾರಾದ. ಇದನ್ನು ಕಂಡ ಆ ಭಕ್ತರು ಆತನಲ್ಲಿಗೆ ಬಂದು ತಾವು ತಂದಿರುವ ಊಟವನ್ನು ಒಬ್ಬರು ಅಂಗೈಯಲ್ಲಿ ಹಾಕಿಕೊಂಡು ಉಜ್ಜಿ ಹದ ಮಾಡುತ್ತಿದ್ದರು, ಇನ್ನೊಬ್ಬರು 'ಸೇದಿ ಬಂಗನ್ನು ಸ್ವಚ್ಛಗೊಳಿಸಿ ಒಳಗಡೆ ಸಣ್ಣದೊಂದು ಅಳ್ಳು ಹಾಕಿ ತಯ್ಯಾರಿಸಿ ಆತನಿಗೆ ಕೊಟ್ಟರು. ಆಗ ಅವನು ಆ ಸೇದಿ ಬಂಗನಲ್ಲಿ ಹಾಕಿಕೊಂಡು ಚಕಮುಕಿಯಿಂದ ಬೆಂಕಿ ಹಚ್ಚಿಕೊಂಡು ಒಂದು ಜುರಕ ಸೇದಿ ಹೊಗೆಯನ್ನು ಬಿಟ್ಟು ನಂತರ ಈ ಮೂವರು ಬಂದದ್ದನ್ನು ನೋಡಿ ಯಾಕೆ ಬಂದಿರಪ್ಪ ಇಲ್ಲಿಗೆ ? ಏನಾದರೂ ಸಮಾಚಾರ ಇತ್ತಾ ತಮ್ಮಂದಿರ ? ಅಂತ ಕೇಳಿ ವಿಚಾರಿಸತೊಡಗಿದ. ಅದಕ್ಕೆ ಆ ಮೂವರು ಇಲ್ಲೊಂದು ಧ್ವನಿ ಕೇಳಿ ಬರುತ್ತಿತ್ತು ಅದಕ್ಕೆ ನೋಡಕೊಂಡು ಹೋದ್ರಾಯ್ತು ಅಂತ ತಿಳಿದು ಬಂದಿವಿ ಅಂದರು. ಆಗ ಅವನು ಹ್ಞೂಂ. ಆಯ್ತು ಸರಿ, ನೋಡಿರಲ್ಲ ಹೋಗಿ ಈಗ ಹೋಗಬಹುದಲ್ಲ ಅಂತ ಹೇಳಿದ. ಆ ಮೂವರಲ್ಲಿ ಪರಪಯ್ಯ ಮತ್ತೆ ಆತನನ್ನು ಇಲ್ಲಿ ಎಷ್ಟು ಗಪಿಗಳಿವೆ ? ಎಂದು ಕೇಳಿದ, ಆಗ ಆ ದಿಗಂಬರಸ್ವಾಮಿಯೂ 'ನೋಡಪ್ಪ ತಮ್ಮ ಇಲ್ಲಿ ಎಷ್ಟು ಗವಿಗಳಿದ್ದಾವೆಂದು ಹೇಳಕ್ಕಾಗಲ್ಲ, ಒಂದು ಮಾತ್ರ ಸತ್ಯ ಹೊಲದಾಗ ಬೆಳೆಯುವ ಅವರಿಕಾಳುಗಳು ಇರುತ್ತಾವಲ್ಲ, ಆ ಅವರಿಕಾಳುಗಳು ಒಂದು ಗೋಣಿ ಚೀಲದಷ್ಟು ಒಂದೊಂದು ಗವಿಗೆ ಇಟ್ಟಕಂತ ಬಂದ್ರೆ ಸಾಲಬಹುದೇನೊ ಎಂದು ಹೇಳಿ ಮತ್ತೊಂದು ಜುರಕಿ ಎಳೆಯುತ್ತಿದ್ದ. ಇದು ಕೇಳಿದ ಆ ಮೂವರು ಗೊಳ್ಳೆಂದು

ನಕ್ಕರು. ಇದನ್ನು ಗಮನಿಸಿದ ಅವನು ಕೂಡ ಸರಿ ಆಯ್ತು ನಿಮ್ಮಂತೆ ನಾನೊಬ್ಬ ಎಂದು ಒಪ್ಪಿಗೆ ಕೊಟ್ಟ, ನಾವು ಐದು ಮಂದಿ ಕೂಡಿಕೊಂಡು ಒಂದು ಚೀಲ ಅವರಿಕಾಳು ತಗೊಂಡು ಬರಬೇಕು, ಅದು ನಾಳೆ ಭಾನುವಾರ ದಿನವೇ ಆರಂಭಿಸಿದರೆ ಮೂರು-ನಾಲ್ಕು ದಿನಗಳು ಮುಗಿಯಬಹುದು, ಅದಕ್ಕೆ ನೀವು ಈಗ ಹೋಗಿ ನಾಳೆಯೆ ತಂದು ಹಂಚಂಗ ಆಗಬೇಕೆಂದು ತಿಳಿಸುತ್ತಾನೆ. ಇದಕ್ಕೆ ಅವರೆಲ್ಲರೂ ಒಪ್ಪಿ ಅವರಿಕಾಳು ತರಲು ಹೋಗುತ್ತಾರೆ.

ಮಾರನೆ ದಿನವೇ ಆ ಐವರು ಒಂದೊಂದು ದಿಕ್ಕಿಗೆ ಹೋಗಿ ಅವರಿಕಾಳು ತಂದು ದಿಗಂಬರಸ್ವಾಮಿಯಾಗಿರುವ ಡಕ್ಕಲಿಗ ಕೆಂಚಯ್ಯನ ಮುಂದೆ ಹಾಕುತ್ತಾರೆ. ಇದನ್ನು ಕಂಡು ಅವನು ಆಯ್ತು ಸರಿ ಹಂಚಿಕೊಂಡು ಬರೋಣಂತ ತಿಳಿಸಿದಾಗ, ಆ ಐವರು ಮಂದಿಯರು ಇಲ್ಲಿಂದಲೇ ಪ್ರಾರಂಭ ಮಾಡೋಣ. ಹಾಗೇ ನಾವು ಯಾವ ಯಾವ ಗವಿಗಳಿಗೆ ಹೋಗುತ್ತೇವು. ಅವುಗಳಿಗೆ ಹೆಸರುಗಳನ್ನು ಕೊಡುತ್ತ ಬರಬೇಕೆಂದು ಕೇಳುತ್ತಾರೆ. ಇದನ್ನು ಗಮನಿಸಿದ ಡಕ್ಕಲಿಗ ಕೆಂಚಯ್ಯ ಇದಕ್ಕೆ ಮೊದಲು ಒಪ್ಪದಿದ್ದರು ಆ ಐದು ಮಂದಿಯ ಮಾತಿಗೆ ಬೆಲೆಕೊಟ್ಟು ಸರಿ ಎಂದು ತಿಳಿಸುತ್ತಾನೆ. ಆದರೆ ಇಲ್ಲಿಂದಲೇ ಆರಂಭಿಸುವುದು ನನಗೇನು ಸರಿ ಅನಿಸುವುದಿಲ್ಲ, ಯಾಕೆಂದರೆ ಎಲ್ಲ ಕಡೆಯಿಂದ ಹಂಚಿಕೊಂಡು ಎಲ್ಲರಿಗೂ ಸಾಂತ್ವನ ಮಾಡಿಕೊಂಡು ಬಂದು ಕೊನೆಗೆ ಇದಕ್ಕೆ ಒಂದು ಕಾಳುಗಳನ್ನಿಟ್ಟು ಹೆಸರು ಕೋಡೋಣವೆಂದು ತಿಳಿಸುತ್ತಾನೆ. ಇದಕ್ಕೆ ಅವರೆಲ್ಲರೂ ಒಪ್ಪಿಕೊಂಡು ಕಾಳುಗಳನ್ನಿಡಲು ಆ ದಿಗಂಬರನೊಂದಿಗೆ ಹೋಗುತ್ತಾರೆ.

ಅವರೆಲ್ಲರೂ ಕೂಡಿಕೊಂಡು ಒಂದು ಗವಿಗಳನ್ನೂ ಬಿಡದೆ ಮೂರು ದಿನಗಳ ಕಾಲ. ಅಂದರೆ ರವಿವಾರ, ಸೋಮವಾರ, ಮಂಗಳವಾರ ಈ ಮೂರು ದಿನಗಳಲ್ಲಿ ಹಂಚಿಕೊಳ್ಳುತ್ತಾ : ಬುಧುವಾರ ಬೆಳಗ್ಗೆ ತಾವು ಮೊದಲು ಆರಂಭಿಸಬೇಕು ಅನ್ನುವ ಜಾಗಕ್ಕೆ ಮತ್ತೆ ಬರುತ್ತಾರೆ. ಆದರೆ ಆ ಚೀಲದೊಳಗೆ ಅವರಿಕಾಳುಗಳು ಅಷ್ಟೇ ಅಲ್ಲ ಒಂದೇ ಒಂದು ದೂಸುಕಡ್ಡಿಯನ್ನು ಇರದಾಂಗ ಆ ಗೋಣಿಚೀಲ ಖಾಲಿಯಾಗಿತ್ತು. ಆ ಕಾಲಿಯಾದ ಚೀಲ ದಕ್ಷಿಣ ದಿಕ್ಕಿನಿಂದ ಬಂದ ಭಕ್ತನಾದ ಡಂಗರದವನ ಕೈಯಲ್ಲಿತ್ತು. ಕೊನೆಗೂ ಖಾಲಿಯಾದ ಚೀಲವನ್ನು ನೋಡಿ ಎಲ್ಲರೂ ಗಾಬರಿಗೊಂಡು ಈಗೇನು ಮಾಡೊದು, ಅದು ಬೇರೆ. ಸ್ವಂತ ಅವರೇ ತಪ್ಪಸ್ಸು ಕುಳಿತುಕೊಳ್ಳುವ ಜಾಗ, ಇದಕ್ಕೆ ಇರದಂಗಾಯ್ತಲ್ಲ. ಈಗ ಹೋಗಿ ತಂಬಂದ್ರ ಹೇಳಿಕೇಳಿ ಬುಧುವಾರ ಆದ ಇದು ದೇವ್ವದ ವಾರ ಅಂತ ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಆದರೆ ಆ ದಿಗಂಬರಸ್ವಾಮಿ ಕೆಂಚಯ್ಯ ತನ್ನ ತಪ್ಪಸ್ಸು ಮುಗಿಸಿಕೊಂಡು ಇವರನ್ನು ನೋಡಿ 'ಯಾಕೊ ತಮ್ಮಂದಿರಾ ಏನೋ ಗಾಢವಾಗಿ ಚಿಂತಿಸಿದ್ದಂಗ ಕಾಣುತ್ತದೆ' ಎಂದು ವಿಚಾರಿಸತೊಡಗಿದ. ಅದಕ್ಕೆ

ಡಂಗುರದವನು ತನ್ನ ಕೈಯಲ್ಲಿದ್ದ ಚೀಲ ಮೇಲಕೇತ್ತಿ ಎರಡು ಕೈಗಳಿಂದ ಅಳ್ಳಾಡಿಸಿ ತೋರಿಸಿದ ಇದನ್ನು ಕಂಡು ಆ ಸ್ವಾಮಿಯೂ ಮೂಸು ನಕ್ಕು. ಇದಕ್ಕೆ ನೀವೆಲ್ಲ ಸಪ್ಪಗೆ ಕುಳಿತುಕೊಂಡಿರೇನು ಅಂತ ಕೇಳಿ, ಅವರೆಲ್ಲರನ್ನು ಕರೆದು ಅಲ್ಲಿ ಎರಡು ಅಂಬರಿಗಿಡಗಳು ಕಾಣುತ್ತಾವಲ್ಲ. ಅವುಗಳಲ್ಲಿ ಇರುವ ಹೂಗಳು ತಪ್ಪಲುಗಳನ್ನು ಹರಕೊಂಡು ಬನ್ನಿ ಅಂತ ಹೇಳಿದ, ಆಗ ಆ ಐದು ಮಂದಿ ಹೋಗಿ ಹರಕೊಂಡು ಬಂದು. ಈಗೇನು ಮಾಡದು? ಅಂತ ಕೇಳುತ್ತಾರೆ. ಇದಕ್ಕೆ ಅವನು ನಿವೇನು ಮಾಡೊದುಬೇಡ. ನೀವು ತಂದಿರುವ ತಪ್ಪಲು ಹೂ ಒಟ್ಟಿಗೆ ಕೂಡಿಕೊಂಡು ಇದರ ಮೇಲೆ ಹಾಕುತ್ತಿರಿ ಇದಕ್ಕೆ ಹೆಸರಿಟ್ಟರಾಯ್ತು ಅಂತ ತಿಳಿಸಿದ. ಇದಕ್ಕೆ ಎಲ್ಲರೂ ಸರಿ ಎಂದು ಒಪ್ಪಿಗೆ ಕೊಟ್ಟು, ಆ ಐದು ಮಂದಿ ಕೂಡಿಕೊಂಡು ತಾವು ತಂದಿರುವ ತಪ್ಪಲೂ ಹೂಗಳನ್ನು ಹಾಕುತ್ತಿರುತ್ತಾರೆ. ಆಗ ಆ ದಿಗಂಬರನಾದ ಡಕ್ಕಲಿಗ ಕೆಂಚಯ್ಯನು 'ಅಮರಕಲ್ಯಾಣ' ಎಂದು ನಾಮಕರಣ ಮಾಡಿ. ಇದನ್ನು ಲೋಕಕ್ಕೆ ಸಾರಿ ಅಂತ ಆ ಐದು ಮಂದಿಗೆ ತಿಳಿಸುತ್ತಾನೆ. ಅದರಲ್ಲಿ ಪರಪಯ್ಯನು ಪರಮಾನಂದನಾಗಿ ಈತನ ಶಿಷ್ಯನಾಗುತ್ತಾನೆ. ಪೂರ್ವದಿಕ್ಕಿನಿಂದ ಬಂದ ಭಕ್ತ ಇದಕ್ಕೆ ಸೇವಕನಾಗುತ್ತಾನೆ. ಡಂಗುರದವನು ಸಾರುತ್ತಾನೆ. ಇನ್ನುಳಿದವರು ಈ ಪರಂಪರೆಯನ್ನು ಮುಂದುವರೆಸುತ್ತಾರೆ. ಅದಕ್ಕೆ ಅಂದಿನಿಂದ ಇಂದಿನವರೆಗೂ 'ಅಮರಕಲ್ಯಾಣ'ವೆಂದು" ಕರೆಯುತ್ತಾರೆಂದು ಹೇಳಿದಳು.

ಈ ಕಥೆ ಈ ಭಾಗದ ಹಿರಿಕರಲ್ಲಿ ಜನಜನಿತವಾಗಿ ಕೇಳಿಬರುತ್ತದೆ. ಇದನ್ನು ನಾವು ಸೂಕ್ಷ್ಮತೆಯಿಂದ ನೋಡುವ ಕಣ್ಣುಗಳಾದರೆ ಒಂದು ಚರಿತ್ರೆಯನ್ನು ತಿಳಿಸುತ್ತದೆ. ಇಲ್ಲವಾದರೆ ಒಂದು ಮೌಢ್ಯತೆಯ ಕಂತೆಯಾಗಿ ಮೂಢನಂಬಿಕೆಯಾಗಿ ಕಾಣುತ್ತದೆ. ಇದು ಬಹುಮುಖ್ಯ 'ಅಮರಕಲ್ಯಾಣ'ವನ್ನು ಸ್ಥಾಪಿಸಿದ ಮೂಲ ಪುರುಷನಾದ ಡಕ್ಕಲಿಗ ಕೆಂಚಯ್ಯ ಎಂದು ತಿಳಿಸುತ್ತದೆ. ಈ ಡಕ್ಕಲಿಗ ಎಂಬುದು ದಕ್ಕಲಿಗ ಸಮುದಾಯದ ಹೆಸರು. ಜನರ ಹಾಡು ನುಡಿಯಿಂದ 'ಡಕ್ಕಲಿಗ' ಅಂತ ಆಗಿದೆ ಅಷ್ಟೇ. ಈ ದಕ್ಕಲಿಗ ಸಮುದಾಯವು 'ಅಸ್ಪೃಶ್ಯ' ಜನಾಂಗದಲ್ಲೆ ಅತ್ಯಂತ ಅಸ್ಪೃಶ್ಯ ಜನಾಂಗದವರಂತ ಇಂದಿಗೂ ಕರೆಯುತ್ತಾರೆ. ಇವರು ಮೊದಲು ಸಗರ ಗ್ರಾಮದಲ್ಲಿ ಕಂಡುಬರುತ್ತಿದ್ದರು ನಂತರ ಈ ಸಮುದಾಯ ಹುಣಸಗಿ, ತಾಳಿಕೋಟಿ, ನಾರಾಯಣಪುರಗಳಲ್ಲಿ ಇಂದಿಗೂ ಕಂಡುಬರುತ್ತಾರೆ. ಇವರಲ್ಲಿ 'ಅಮರಕಲ್ಯಾಣ'ದ ಚಾರಿತ್ರಿಕ ಪರಂಪರೆ ಹಾಗೂ ಸಂಸ್ಕೃತಿಯನ್ನು ಇಂದಿಗೂ ಅವರ ಆಚರಣೆಯಲ್ಲಿ ಇದೆ. ಈ ಪರಂಪರೆಯನ್ನು ಶಿವಕಂಚಿಯಿಂದ ಬಂದ ಪರಪಯ್ಯನೇ ಪರಮಾನಂದನಾಗಿ ಮುಂದುವರಿಸಿಕೊಂಡು ಹೋಗಿರುವಂತೆ ತಿಳಿಸುತ್ತದೆ. ನಂತರ ಆತನ ಶಿಷ್ಯ ಸಂಗಮನಾಥ ಡಿಗ್ಗಿ ಮತ್ತು ಡಂಗುರದವನು ಪ್ರಚಾರಗೊಳಿಸಿದ್ದು ಗೊತ್ತಾಗುತ್ತದೆ. ಆದರೆ ಪೂರ್ವದಿಕ್ಕಿನವರು ಮತ್ತು ದಕ್ಷಿಣ ದಿಕ್ಕಿನವರು ಯಾರೆಂದು ಖಚಿತತೆಗೊಳಿಸಿಲ್ಲ. ಈ ಪರಂಪರೆಯನ್ನು ಮುಂದೇ ಗುತ್ತಿಬಸವಣ್ಣ, ಕೊಡೆಕಲ್ಲ ಬಸವಣ್ಣ, ಕುಳಗೇರಿ ಖಾದರಲಿಂಗ, ಬಾಡ

ತಿಪ್ಪಣ್ಣಪ್ಪ, ರಸ್ತಾಪುರ ದ್ಯಾವಣ್ಣ ಮತ್ತು ಶರಭಲಿಂಗ, ಕೂಡಲೂರು ಬಸವಲಿಂಗಪ್ಪ, ಕನಗನಹಳ್ಳಿ ಸಿದ್ದರಾಮೇಶ್ವರ, ಸಾವೂರು ದೊಡ್ಡಪ್ಪ ಅಪ್ಪರು, ಸಾಲಟಗಿ ಶಿವಯೋಗಿಗಳು, ತಿಂಥಣಿ ಮೋನಪ್ಪಯ್ಯ, ಕಡಕೋಳ ಮಡಿವಾಳಪ್ಪನವರು ಹಾಗೂ ಮೊಟ್ನಳ್ಳಿ ಹಸನಸಾಹೇಬರು ಮುಂತಾದವರು ಈ ಪರಂಪರೆಯನ್ನು ಗುರು–ಶಿಷ್ಯತ್ವದಲ್ಲಿ ಕಟ್ಟಿಕೊಂಡು ಬಂದಿರುವುದು ಕಾಣುತ್ತದೆ.

"ಕಲ್ಯಾಣವು ಕೇವಲ ಒಂದು ಭೌತಿಕ ಸ್ಥಳವಾಗಿ ಪರಿಭಾವಿಸುವ ಕಲ್ಪನೆ ಮರೆಯಾಯಿತು. ವಚನಕಾರರ ಆಶೋತ್ತರಗಳ ಪ್ರತೀಕವಾದ ಸಾಂಸ್ಕೃತಿಕ ಹಾಗೂ ವೈಚಾರಿಕ ಆಕೃತಿಗಳ ಮೊತ್ತರೂಪದ ಅರ್ಥವಂತಿಕೆಯನ್ನು ಕಲ್ಯಾಣವು ಪಡೆದುಕೊಂಡಿತು. ಹೀಗಾಗಿ ಕಲ್ಯಾಣವೆಂದರೇನೆ ವಚನಗಳು ಮತ್ತು ವಚನಕಾರರು ಕಣ್ಮುಂದೆ ಬರುವಂತಾಯಿತು."[೨] ಇದೆ ಪರಂಪರೆಯ ಅರ್ಥವನ್ನು ಪಡೆದುಕೊಂಡು ಮುಂದೆ ಭಕ್ತ ಹಾಗೂ ಅನುಭಾವಿಗಳಿಗೆ ಒಂದು ಶಕ್ತಿ ಆಯಿತು.

ಕರ್ನಾಟಕ ಸಂಸ್ಕೃತಿಯಲ್ಲಿ ಭಿನ್ನ ಭಿನ್ನ ಧರ್ಮ, ಭಾಷೆ, ತಿಕ್ಕಾಟಗಳು ಆರಂಭವಾಯಿತು. ಆದ್ದರಿಂದ ಅನುಭಾವ ನೆಲೆಯಿಂದ ಈ ಪರಂಪರೆ ಕಡೆಗೆ ಹೆಜ್ಜೆ ಹಾಕುವುದರ ಮೂಲಕ 'ಅಮರತ್ವವನ್ನು' ಸಾರ್ವತ್ರಿಕಗೊಳಿಸಲು ಅನುಭಾವಿ ಚಳುವಳಿಗಳು ಸಾಂಕೇತಿಕ ಸಾದೃಶ್ಯದಿಂದ ಈ 'ಅಮರಕಲ್ಯಾಣ' ಹೆಸರಿನಲ್ಲಿ ಪ್ರಚಾರ ಪಡಿಸಲು ಮುಂದಾದವು.

ಹಾಗೇ ಈ ಕಾಲದಲ್ಲಿ ಡಂಗುರದೊಂದಿಗೆ ಊರೂರು ತಿರುಗಾಟದಿಂದ ಸಮುದಾಯ ಪ್ರಜ್ಞೆಯ ಜಾಗೃತಿ ಮಾಡುವುದು ಇದರ ಮುಖ್ಯ ನೆಲೆಯಾಗಿತ್ತು. ಪವಿತ್ರ–ಅಪವಿತ್ರಗಳೆಂಬ ತರತಮರಹಿತವಾಗಿರುವ ಜಾತ್ಯತೀತ ನಿಲುವನ್ನು ಜನರಲ್ಲಿ ಜೀವಂತವಾಗಿಡುವುದು ಪರಂಪರೆಯ ಆಶಯವಾಗಿದೆ. ಸಂಗಮನನ್ನು–ಮಹಮ್ಮದ್, ಚಂದಾ ಹುಸೈನನ್ನು–ಅಲ್ಲಮ ಹಾಗೂ ಕೊಡೇಕಲ್ ಬಸವಣ್ಣನನ್ನು ದೇವವಾಣಿಯನ್ನು ಜನರಿಗೆ ಬಯಾನ್ ಕೊಡುವವನು ಎಂದು ಕಲ್ಪಿಸಿಕೊಂಡಿದ್ದು, ಕಾಲಜ್ಞಾನಗಳ ಚರಿತ್ರೆಯಲ್ಲಿ ಸರ್ವಸಾಮಾನ್ಯವಾಗಿದೆ. ಈ ವ್ಯಾಪಕವಾದ ಹರವನ್ನು ಪಡೆದುಕೊಂಡು ಜನರ ಮನೋಸ್ವಾಸ್ಥಗಳನ್ನು ನರದೌರ್ಬಲ್ಯಗಳನ್ನು ಗುಣಪಡಿಸಲು ನಿಸರ್ಗಬೆಟ್ಟ ಪ್ರದೇಶಗಳಲ್ಲಿ ಸುಶ್ರಾಲಯ ಕೇಂದ್ರದಂತೆ ದೇಶಿಯ ವೈದ್ಯ ಪರಂಪರೆಯನ್ನು ಕಾರ್ಯನಿರ್ವಹಿಸಿದ ಸಂಗತಿಯಾಗಿದೆ. ಇದೊಂದು ಅರ್ಥದಲ್ಲಿ 'ಅಮರಕಲ್ಯಾಣ'ದ ಹೆಸರು ಸಾರ್ಥಕವಾಗಿದೆ.

ಈ ಅಮರಕಲ್ಯಾಣದ ಪರಂಪರೆ ಕುರಿತು ಜನ ಕಥೆಗಳಲ್ಲಿ ಬರುವಂತೆ ಗುರುಗುಂಡಾ ಬಸವೇಶ್ವರ ಚರಿತ್ರೆ ಮತ್ತು ನಂದಿಯಾಗಮಲೀಲೆ ಕಾವ್ಯಗಳಿಂದ ತಿಳಿದು ಬರುತ್ತದೆ. ತಿಪ್ಪಣ್ಣಯ್ಯನು ಬಾಲಕ ಗುಂಡ ಬಸವಣ್ಣನಿಗೆ :

"ಕೇಳು ನೀ ಬಸವಣ್ಣ ಹೇಳುವ ಮಾತನು
ಭಾಳಲೋಚನ ಭಕ್ತನೊಬ್ಬ
ಹಳೆಯ ಸಗರದ ಹೊರಗೆ ಮಠಕಟ್ಟಿ ತಾ
ಇಳೆಯಾಳ ಅಮರಕಲ್ಯಾಣನೆನಿಸಿ"[೩]

[illegible]

ಎಂದು ತಿಳಿಸುತ್ತಾನೆ. ಇದರಲ್ಲಿ ಬರುವ ಹಳೆಯ ಸಗರವೆಂದರೆ 'ಹಳಿಸಗರ' ಎಂದರ್ಥ. ಇದು ಶಹಾಪುರ ಹತ್ತಿಕೊಂಡಿರುವ ಗ್ರಾಮ ಆಗಿದೆ. ಈ ಊರಿನ ಹೊರಗೆ ಮಠಕಟ್ಟಿ ಅಮರಕಲ್ಯಾಣ ಬೆಳೆಸಿದನೆಂದು ತಿಳಿಸಿದ್ದನ್ನು ನೋಡಿದರೆ ಆತ ಡಿಗ್ಗಿ ಸಂಗಮನಾಥನು ಮುಂದುವರಿಸಿಕೊಂಡು ಹೋಗಿದ್ದು ತಿಳಿಯುತ್ತದೆ.

ಕೊಡೇಕಲ್ ಪರಂಪರೆಯನ್ನು ಅಮರಕಲ್ಯಾಣ ಎಂದು ಈಗಾಗಲೇ ಡಾ.ಬಸವಲಿಂಗಪ್ಪ ಸೊಪ್ಪಿಮಠರು 'ಕೊಡೇಕಲ್ ಬಸವಣ್ಣ : ಒಂದು ಅಧ್ಯಯನ' ಪ್ರಬಂಧದಲ್ಲಿ ಮತ್ತು ಡಾ.ಶಿವಾನಂದ ವಿರಕ್ತಮಠ ಅವರ 'ಅಮರಕಲ್ಯಾಣ' ಕೃತಿಯಲ್ಲಿ ಕೊಡೇಕಲ್ಲು, ಕಡೆಕಲ್ಯಾಣ, ಕಡಿಯಕಲ್ಯಾಣ ಎಂದು ಕರೆಸಿಕೊಂಡಿದ್ದು ಔಚಿತ್ಯಪೂರ್ಣವಾಗಿದೆ, ಅದೇ ರೀತಿ ಅನುಪಮ ವೆಂ. ಆದಾಪೂರ ಅವರು 'ಅಮರಕಲ್ಯಾಣ : ಸಾಂಸ್ಕೃತಿಕ ಅಧ್ಯಯನ' ಸಂಪ್ರಬಂಧದಲ್ಲಿ ಡಿಗ್ಗಿ ಸಂಗಮನಾಥನ ಚರಿತ್ರೆಯೊಂದಿಗೆ 'ಅಮರಕಲ್ಯಾಣ' ಸ್ಥಳವನ್ನು ಗುರುತಿಸಿದ್ದಾರೆ. ಆದರೆ ಅಮರಕಲ್ಯಾಣವನ್ನು ಸ್ಥಾಪಿಸಿದವನು ಡಿಗ್ಗಿ ಸಂಗಮನಾಥನಲ್ಲ. ಇಲ್ಲಿಯ ಜನರ ಮೌಖಿಕ ಚರಿತ್ರೆಯಲ್ಲಿ ಡಕ್ಕಲಿಗ ಕೆಂಚಯ್ಯನು ಪ್ರಮುಖನಾಗುತ್ತಾನೆ ನಂತರ ಪರಪ್ಪಯ್ಯನು ಅವಧೂತನಾಗಿ ಪರಮಾನಂದರು ಎಂದು ನಾಮಕರಣಗೊಂಡು, ಆತನ ಶಿಷ್ಯನಾಗಿ ಮುಂದುವರೆಯುತ್ತಾನೆ. ಈತನ ಶಿಷ್ಯ ಡಿಗ್ಗಿ ಸಂಗಮನಾಥನು ಆರೂಢನಾಗಿ ಈ ಪರಂಪರೆಯನ್ನು ಪ್ರಚಾರಗೊಳಿಸಿದನು. ಚಂದಾಹುಸೈನಿ ಖಾದರಲಿಂಗನವರು ಕುಳಗೇರಿಯಲ್ಲಿ ಈ ಪರಂಪರೆಯನ್ನು ಮುಂದುವರಿಸಿದ್ದು. ಕೊಡೆಕಲ್ ಬಸವಣ್ಣನವರು, ತಿಪ್ಪಣ್ಣಪ್ಪ ಹಾಗೂ ಬಸವಣ್ಣನವರು ತಿಳಿದು ಬರುತ್ತದೆ.

ಶಹಾಪುರ ಬೆಟ್ಟದಲ್ಲಿ ಇರುವ ಈ ಅಮರಕಲ್ಯಾಣ ಪರಿಸರದಲ್ಲಿ ಹಲವಾರು ದೇವಾಲಯಗಳು ಹಾಗೂ ಸ್ಮಾರಕಗಳು ಕಂಡು ಬರುತ್ತವೆ. ಇವು ಜನಸಾಮಾನ್ಯರ ನಂಬಿಕೆ ಆಚರಣೆಗಳಿಂದ ಹುಟ್ಟಿಕೊಂಡಿವೆ ಹಾಗೇ ಈ ಅಮರಕಲ್ಯಾಣವು ಸಣ್ಣದೊಂದು ಗುಡಿ ಸ್ವರೂಪವಾಗಿ ನಿರ್ಮಿಸಿಕೊಂಡಿದ್ದು, ಸರಿಸುಮಾರು ೧೯೯೮-೯೯ರಲ್ಲಿ ಇರಬಹುದು. ಇದನ್ನು ಕಟ್ಟಿಸಿದವನು ವಿರಪಾಪುರದ ಅಂಬ್ರಣ್ಣ ಹಾಗೂ ರಸ್ತಾಪೂರದ ತಿಪ್ಪಣಪ್ಪ ಅವರು ನಿರ್ಮಿಸಿದರೆಂದು ತಿಳಿದುಬರುತ್ತದೆ.

ಈ ಪರಂಪರೆಯನ್ನು ದೈವಿ ಸ್ವರೂಪತೆಯಲ್ಲಿ ಕಂಡು ಇಲ್ಲಿಯ ಸುತ್ತಮುತ್ತಲಿನ ಊರುಗಳ ಜನಸಮುದಾಯಗಳು ಈ ಸಾಂಕೇತಿಕ ಹೆಸರಿನೊಂದಿಗೆ ಅಂಬ್ರಪ್ಪ, ಅಂಬ್ರವ್ವ, ಅಂಬ್ಲಪ್ಪ, ಅಂಬ್ರಕ್ಕ ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಅದರಲ್ಲೂ ವಿಶೇಷವಾಗಿ ಮುಸ್ಲಿಂ ಧರ್ಮದ 'ಪಿಂಜಾರ' ಜಾತಿಯವರಾದ 'ಅಲಿ'ಯನ್ನು ಮುಂದೆ ಸೇರಿಸಿಕೊಂಡು 'ಅಮೃತ ಅಲಿ' ಎಂದು ನಾಮಕರಣ ಮಾಡಿಕೊಂಡು ಪರಂಪರೆ ಮುಂದುವರೆಸಿದ್ದು ಕಂಡು ಬರುತ್ತದೆ. ಇದರ ಸೇವೆ ಅಥವಾ ಪೂಜಾರಿಯೂ ಇಂದಿಗೂ ರಸ್ತಾಪುರದ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ವ್ಯಕ್ತಿಯೆಂದು ತಿಳಿದುಬರುತ್ತದೆ.

೪.೨ ಡಿಗ್ಗಿ(ದಿಗ್ಗಿ) ಸಂಗಮನಾಥರು :

ಇಲ್ಲಿಯ ಜನರ ನಂಬಿಕೆಯ ಪ್ರಮುಖ ದೇವಸ್ಥಾನವಾಗಿದೆ. ಈ ಹೆಸರಿನ ಅನೇಕ ಜನರಲ್ಲಿ ಪ್ರಾದೇಶಿಕ ಹೆಸರುಗಳು ನಾಮಾಂಕಿತಗೊಂಡವರು ಕಂಡು ಬರುತ್ತಾರೆ. ಇದರ ಆಕಾರ ಮತ್ತು ಕಾಲಘಟ್ಟವನ್ನು ಸಿದ್ದಣ್ಣ ಎಸ್.ಕುಂಬಾರರವರು ;

ಗ್ರಾಮ	:	ಡಿಗ್ಗಿ
ಸ್ಥಳ	:	ಸಂಗಮೇಶ್ವರ ದೇವಾಲಯ
ಶೈಲಿ	:	ಬಹಮನಿ
ಅಭಿಮುಖ	:	ಉತ್ತರಾಭಿಮುಖ
ಕಾಲ	:	ಕ್ರಿ.ಶ ೧೪-೧೫ನೇ ಶತಮಾನ
ಸ್ಥಿತಿ	:	ಉತ್ತಮ
ಸಂರಕ್ಷಣೆ	:	ಇದೆ

ಶಹಾಪುರದಿಂದ ಪಶ್ಚಿಮಕ್ಕೆ ೪ಕಿ.ಮೀ ಡಿಗ್ಗಿ ಗ್ರಾಮಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿರುವ ಈ ಸಂಗಮೇಶ್ವರ ದೇವಾಲಯವು ನೆಲಮಟ್ಟದಿಂದ ಸುಮಾರು ೧೦೦-೧೫೦ಅಡಿಗಳಷ್ಟು ಎತ್ತರದಲ್ಲಿದೆ. ಗವಿಯ ಮುಂದೆ ಅರ್ಧ ಮಂಟಪವು ಕಂಡುಬರುತ್ತದೆ. ಇದೊಂದು ಶೈವ ದೇವಾಲಯವಾಗಿದ್ದು, ಗರ್ಭಗೃಹದ ದ್ವಾರವು ಪಶ್ಚಿಮದಿಕ್ಕಿನಲ್ಲಿದ್ದರೆ ಮೂಲ ವಿಗ್ರಹವು ಉತ್ತರರಾಭಿಮುಖವಾಗಿದೆ.

ಈ ದೇವಾಲಯವು ೧೪-೧೫ನೇ ಶತಮಾನದ ದೇವಾಲಯವಾಗಿದ್ದು, ಬಹಮನಿಯರ ವಾಸ್ತುಶೈಲಿಯನ್ನು ಪ್ರತಿನಿಧಿಸುತ್ತದೆ. ಸುಮಾರು ೨ ಅಡಿ ಉದ್ದ ೧.೧೫ ಅಡಿ ಎತ್ತರವಿರುವ ಸುಮಾರು ೧೦೦ಕ್ಕೂ ಹೆಚ್ಚು ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಮಧ್ಯದಲ್ಲಿ ಬೃಹತ್ ೧೫X೧೫ ಅಡಿ ಸುತ್ತಳತೆಯ ಪ್ರವೇಶ ದ್ವಾರ ಇದೆ. ಈ ಗರ್ಭಹೃಹದ ಮೇಲ್ಭಾಗದಲ್ಲಿ ಬೆಟ್ಟದ ಮೇಲೆ ಸೂಫಿಚಂದಾಹುಸೇನಿ ದರ್ಗಾ ಇದ್ದು. ಇಮ ಹಿಂದೂ-ಮುಸ್ಲಿಂ ಭಾವಕೈದ ತಾಣವಾಗಿದೆ. ಶ್ರಾವಣ ಮಾಸದ ೪ನೇ ಸೋಮವಾರದಮದು ಶ್ರೀ ಸಂಗಮೇಶ್ವರ ಉಚ್ಚಯ, ಮಂಗಳವಾರ ರಥೋತ್ಸವ ಜರುಗುತ್ತದೆ. ಈ ಜಾತ್ರೆಯು ಒಂದು ವಾರದವರೆಗೆ ಕಾಲ ನಡೆಯುತ್ತದೆ. ಶ್ರಾವಣ ಮಾಸದ ಕೊನೆಯ ಸೋಮವಾರದಂದು ನಡೆಯುವ 'ಕುಂಬಾರ ಜಾತ್ರೆ'ಎಂದು ನಡೆಯುವ ಹಾಲಗಂಬವು ನೋಡುಗರನ್ನು ಆಕರ್ಷಿಸುತ್ತದೆ'[೪] ಮತ್ತು ಪ್ರತಿ ಜನೇವರಿಯಲ್ಲಿ ಮಕರ ಸಂಕ್ರಮಣದಂದು ಬಲಭೀಮ-ಸಂಗಮೇಶ್ವರ ಉತ್ಸವ ಮೂರ್ತಿಯನ್ನು ೧೮ ಕಿ.ಮೀ ದೂರದಲ್ಲಿರುವ ಹುರಸಗುಂಡಗಿಗೆ ಕೊಂಡೊಯ್ದು ಭೀಮಾ ನದಿ ತೀರದಲ್ಲಿ ಪೂಜೆ ಮಾಡಿದ ನಂತರ ಶಹಾಪುರಕ್ಕೆ ಮೆರವಣಿಗೆಯಲ್ಲಿ ಕರೆತಂದು ರಾತ್ರಿಯೆಲ್ಲಾ ಕುಂಬಾರ ಜನಾಂಗದವರು ದೀವಟಗೆಯನ್ನು ಹಿಡಿದು ಅಗಸಿ ದಾಟಿಸುವವರೆಗೂ ಇಬ್ಬರನ್ನು ಅಣ್ಣ-ತಮ್ಮರಂತೆ ಪಲ್ಲಕ್ಕಿಯನ್ನು ಮೆರೆಸಿ, ಮರು ದಿನ ದೇವಸ್ಥಾನಕ್ಕೆ ಕಳುಹಿಸಿ, ಒಂದುವಾರ ಜಾತ್ರಾ ಮಹೋತ್ಸವ ಜರುಗುತ್ತದೆ. ಈ ಜಾತ್ರೆಯು ಈ ಭಾಗದ ಮತ್ತು ಊರಿನ ಜನರಿಗೆ ಸಡಗರ

ಸಂಭ್ರಮದ ನಂಬಿಕೆಯಾಗಿದೆ.

ಈ ಡಿಗ್ಗಿ ಸಂಗಮನಾಥ ಚಾರಿತ್ರಿಕ ಸಂಗತಿಗಳನ್ನು ಕುರಿತು ಬಹುಮುಖ್ಯವಾಗಿ ಕೊಡೆಕಲ್ ಬಸವಣ್ಣನವರ ಕಾಲಜ್ಞಾನ ಸಾಹಿತ್ಯ, ಸ್ವರವಚನ ಸಾಹಿತ್ಯ, ರಾಚಪ್ಪಯ್ಯನವರ ಕೃತಿಗಳಾದ ಸುವ್ವಿವಚನ ಹಾಗೂ ಪ್ರಭುಚರಿತ್ರೆ ವೀರಸಂಗಪ್ಪಯ್ಯನ ನಂದಿಯಾಗಮಲೀಲೆ ಮತ್ತು ಆತನ ಸ್ವರವಚನಗಳು ಹಾಗೂ ಗುಂಡ ಬಸವೇಶ್ವರ ಚರಿತ್ರೆ, ಸಾಲೋಟಗಿ ಶಿವಯೋಗಿಗಳ ಡಂಗುರ ಪದಗಳು ಮಹತ್ವದ ಸಂಗತಿಗಳನ್ನು ಬಿಚ್ಚಿಡುತ್ತದೆ.

ಒಂದು ಐತಿಹ್ಯದ ಪ್ರಕಾರ ಪರಮಾನಂದ ಶಿಷ್ಯಂದಿರಾದ ಖಾದರಲಿಂಗ, ಬಲಗಾಲಪ್ಪ ಹಾಗೂ ಸಂಗಮನಾಥರು ಇವರುಗಳಲ್ಲಿ ಒಬ್ಬ. ಈತನು ತನ್ನ ಗುರು ಪರಮಾನಂದನ ವ್ಯಕ್ತಿತ್ವವನ್ನು ಹೋಲುವಂತವನು ಹತ್ತಿರದವನು ಆಗಿದ್ದರೂ ಸಹ ಇವನು ಆರೂಢ ಪಂಥಕ್ಕೆ ಸೇರಿದವನೆಂದು ತಿಳಿಯುತ್ತದೆ. ಇಲ್ಲಿ ಅಂದರೆ ಸಗರನಾಡಿನಲ್ಲಿ ಬಹಮನಿ ಮತ್ತು ವಿಜಯನಗರ ಸಾಮ್ರಾಜ್ಯಗಳ ತನ್ನ ವಿಸ್ತಾರತೆಯನ್ನು ಚಾಚಿಕೊಳ್ಳುವ ಸಂದರ್ಭದಲ್ಲಿ ಸಗರನಾಡು ವಶಪಡಿಸಿಕೊಳ್ಳಲು ಯುದ್ಧವನ್ನು ಸಾರಿದವು. ಇದು ಹಿಂದೂ ಮುಸ್ಲಿಂ ಧರ್ಮಗಳ ಸಂಘರ್ಷಗಳಿಗೆ ಕಾರಣವಾಯಿತು. ಈ ಸಂಘರ್ಷವು ಬಾನಂಗಳವನ್ನು ತಲುಪಿತು. ಇಂತಹ ಸಂದಿಗ್ಧ ವಾತಾವರಣದಲ್ಲಿ ಸಂಗಮನಾಥನು ಉದಯಿಸಿದನು. ಹಿಂದೂ-ಮುಸ್ಲಿಂರಲ್ಲಿ ಉಂಟಾದ ಕಲಹವನ್ನು ಹೋಗಲಾಡಿಸಿ ಭಾವೈಕ್ಯತೆ ಉಂಟುಮಾಡಲು ಇಷ್ಟಲಿಂಗ ತೊರೆದು ಪ್ರಾಣಲಿಂಗಿಯಾಗಿ ಆರೂಡ ಪಂಥವನ್ನು ಸ್ವೀಕರಿಸಿ ಆರೂಢ ಸಂಗಮನಾಥನಾದನು. ಈ ಆರೂಢ ಸಂಗಮನಾಥನೆ ಡಿಗ್ಗಿಯ ಸಂಗಮನಾಥನಾಗಿದ್ದಾನೆಂದು ತಿಳಿದು ಬರುತ್ತದೆ.

ಈ ಆರೂಢ ಸಂಗಮನಾಥನೇ ಕೊಡೇಕಲ್ ಪರಂಪರೆಯ ಮುಖ್ಯ ರೂವಾರಿಯಾಗಿದ್ದಾನೆ. ಈತನ ವ್ಯಕ್ತಿ ಚಿತ್ರವನ್ನು 'ನಂದಿಯಾಗಮಲೀಲೆ' ಹೀಗೆ ಕಟ್ಟಿಕೊಡುತ್ತದೆ.

"ಬಿಟ್ಟ ಮಂಡಿಯ ಮೇಲೆ ಕಿರುಜಡೆ
ಸುಟ್ಟು ಉರಿಯುವ ನಯನ ನೊಸಲಲ್ಲಿ
ಮೆಟ್ಟಿದ ಹಾವುಗೆಯು ಪಾದದಿ ಕಮಲಲೋಚನವು
ಮುಟ್ಟಿ ಹಸ್ತದಿ ನಾಗದಂಡವು
ಕಟ್ಟಿದ ಕಟಿಸೂತ್ರ ಕೈಪವು
ಇಟ್ಟ ಸರ್ವಾಂಗದಲ್ಲಿ ಭಸಿತನಾರೂಢ ರೂಪಿನಲ್ಲಿ'(ನಂದಿ-೧೭೭-೧೭೮)

ಉಗ್ರರೂಪಿನ ಸನ್ಯಾಸಿಯಾಗಿ, ಆರೂಡ ಸಂಘಮನಾಥನು ಇಲ್ಲಿ ಚಿತ್ರಿತನಾಗಿದ್ದಾನೆ."[೫]

"ಹಸ್ತಮಸ್ತಕ ಮಾಡಿ ಬಸವಗೆ
ಇತ್ತ ಮಾಯದ ತೇಜಿ ನಾಲ್ವರ
ಭೃತ್ಯರು ಅದೃಶ್ಯರೂಪಿನ ಸೇವಕರನಾಗ

ಮತ್ತೆ ನುಡಿಯ ಪರುಷವಿತ್ತನು
ಎತ್ತಿ ತೊಡಿಸಿದ ಚರ್ಮದಾಂಬರ ಸ
ಮಸ್ತ ಕಾರ್ಯವನಿತ್ತಾ ಸಂಗಮ ವಿಜಯ ಮಾಡಿದನು"[೬]

"ಕೊಡೇಕಲ್ಲ ಸಂಪ್ರದಾಯ ಪ್ರಕಾರ ಬಸವನಿಗೆ ಸಂಗಮನಾಥನು 'ಹಸ್ತಮಸ್ತ'ಕ ದೀಕ್ಷೆ ಮಾಡುವ ಮೂಲಕ ಶಿಷ್ಯನನ್ನಾಗಿ ಮಾಡಿಕೊಳ್ಳುತ್ತಾನೆ. ಆಮೇಲೆ ಶಿಷ್ಯನಿಗೆ ಮಾಯದ ಕುದುರೆ, ನಾಲ್ವರು ಸೇವಕರಾದ ಘಟ್ಟಯ್ಯ, ಬೆಟ್ಟಯ್ಯ, ಗಡಚಣ್ಣ, ಮಿಡಚಣ್ಣರನ್ನು ಒಪ್ಪಿಸುತ್ತಾನೆ. ಅಂದದ್ದು ಆಗುವ ನುಡಿ ಸಿದ್ಧಿಯನ್ನು ನೀಡಿ ಮೈಮೇಲೆ ಆರೂಢ ವೇಷವಾದ ಚರ್ಮಾಂಬರವನ್ನು ತೊಡಿಸುತ್ತಾನೆ."[೭]

ಈ ಕಾರಣದಿಂದ ಕೊಡೇಕಲ್ ಬಸವಣ್ಣನವರು ತನ್ನ ಸ್ವರವಚನಗಳಲ್ಲಿ ಸಂಗಮನಾಥನನ್ನು ಕುರಿತು :

"ಒಡನಾಡಿ ಬಂದನು ಒಡೆಯ ಸಂಗಮನಾಥನ
ನಡೆವ ಸರ್ಪನ ಹೆಡೆಯೊಳಗಣ ಪದ್ಮದಂತೆ
ಕಡೆ ಆಟವು ಬಂತು ಕಲಹ ಕಾರಣ ಮುಂದೆ
ನುಡಿ ದೃಷ್ಟಿಗಳ ನೋಡಿ ಕುಡಿ ಮಿಂಚಿದಂತೆ"[೮]

ಎಂದು ಕೊಂಡಾಡಿದ್ದಾನೆ. ಅದೇ ರೀತಿ ತನ್ನ ಬೆನ್ನೆಲುಬಾಗಿ, ಒಡನಾಡಿಯಾಗಿ ಕೈ ಹಿಡಿದು ನಡೆಸಿದ ಶ್ರೇಯಸ್ಸು ಇವರದ್ದು. ಸರ್ವಸಾಧನೆಗಳಿಗೆ ಮೂಲ ಸಂಗಮನಾಥನಾಗಿದ್ದನು ಎನ್ನುವುದಕ್ಕೆ ಇನ್ನೊಂದು ಸ್ವರವಚನದಲ್ಲಿ ಹೀಗೆ :

"ಇಹವ ಕಾರಣ ಅರ್ಥ ಪರಕಕ್ಕೆ ನಿಲ್ಕದು ವ್ಯರ್ಥ
ಇಹ ಒಂದೆ ಪರ ಒಂದೆ ಎರಡರಿಂದ ಅನರ್ಥ
ಇಹ ಪರವ ಕಾಣಗೂಡದು ದುಃಖದ ಹರ ವಶವು
ಇಹದಿಂದ ನಿಂತಿರು ಇಂತು ಲೋಕಾದಿ ಲೋಕವೆಲ್ಲ
ಪರ ಪರವಸ್ತುವೆ ಪರಿಮಳವು ಎಸೆದಂತೆ
ಪರಿ ಏನು ಹಿಡಿವುದಕ್ಕೆ ಪರಬ್ರಹ್ಮ ಲಿಂಗವನು
ಪರಂಜ್ಯೋತಿ ಪ್ರಕಾಶ ಸಂಗಮನಾಥನು
ಪರಿಪೂರ್ಣನೈದಾನೆ ಪ್ರಥಮದಲಿ ನಿಶ್ಚಟನು
ಪುರುಷ ಮೃಗದಂತೆ ತನ್ನ ನಡೆಲಿಂಗ ನುಡಿಲಿಂಗ
ಪುರುಷೋತ್ತಮನವನು ಪೂರ್ವಚಾರಿ ಸಂಗನಬಸವ
ಪುರಾತರಿಗೆಲ್ಲ ಪುಣ್ಯನಿಧಿ ಸ್ಥಾನಿಕ
ಪೂರ್ವ ನಿಃಪುರುಷನವ ಪೃಥ್ವಿ ಪಾಲಿಪನು
ಪೂರ್ವಿಕನು ಜಗದ ಉತ್ಪತ್ತಿ ಸ್ಥಿತಿ ಲಯಕೆ

ಸರ್ವ ಜೀವ ದಯಾ ಪರಿ ಸಂಗನಬಸವ
ಪರದೈವ ಇನ್ನುಂಟೆ ಶಿವಭಕ್ತ ಹೊರತಾಗಿ"[೯]

ಎಂದು ಅಜ್ಞಾನವನ್ನು ಅಳಿಸಿ ಜ್ಞಾನವನ್ನು ಬಿತ್ತಿದ ಪರಂಜ್ಯೋತಿಯಾದ ಸಂಗಮನಾಥನು ಸೃಷ್ಟಿ, ಸ್ಥಿತಿ, ಲಯಕರ್ತನಾಗಿದ್ದ ನಿಃಕಾಯದವನೆಂದು ತಿಳಿಸುತ್ತಾನೆ. ಹಾಗೇ ತನಗೆ ಆರೂಢ ಸಂಗಮನಾಥನು ಏನನ್ನು ಕೊಟ್ಟನೆಂದು ತಿಳಿಸಲು ಹೀಗೆ ಹೇಳುತ್ತಾನೆ :

"ಅಷ್ಟ ದಿಕ್ಕುಗಳನೆಲ್ಲ ಒಂದು ಮಾಡಯ್ಯ ಹೋಗಿ
ಅಷ್ಟಮದ ಕವಿದಾದೆ ಅಜ್ಞಾನ ತುಂಬಿಯದೆ
ಪಟ್ಟಕ್ಕೆ ಮೂರು ರಾಜರು ಹೋರಾಡುತೈದಾರೆ
ದೃಷ್ಟಿ ವರವನು ಕೊಟ್ಟ ಮಡಿವಾಳ ವೀರಂಗೆ
ತುಟ್ಟ ತುದಿಯಲ್ಲಿ ನೀನು ಅರ್ಭಟವ ಮಾಡೆನಲು
ತೊಟ್ಟಿಕೊಂಡನು ಸ್ವಾಮಿ ಕೊಟ್ಟ ವಜ್ರಾಂಗಿ ಜೋಡು
ಕೊಟ್ಟನು ವಾಚಸಿದ್ಧಿಯನ್ನು ಸಂಗಮೇಶ್ವರ"[೧೦]

ಎಂದು ತನಗೆ ನೀಡಿರುವ ಸಂಗಮನಾಥನು ಅಷ್ಟ ದಿಕ್ಕುಗಳಲ್ಲಿ ಕಾಣುವ ಮನುಜರು ಕಾಮ, ಕ್ರೋಧ, ಮೋಹ, ಮಧ, ಮತ್ಸರ, ಲೋಭ ಎಂಬ ಅಷ್ಟಮದಗಳಿಂದ ತುಂಬಿಕೊಂಡಿದ್ದಾರೆ. ಅದಕ್ಕಾಗಿ ಅವರಲ್ಲಿ ತುಂಬಿಕೊಂಡಿರುವ ಅಜ್ಞಾನವನ್ನು ಹೋಗಳಾಡಿಸಿ ಜ್ಞಾನವನ್ನು ತುಂಬಿಸಿ ಸುಜ್ಞಾನರನ್ನಾಗಿ ಮಾಡುವಂತೆ ನೀನಾಗೆಂದು, ನನಗೆ ವಾಚಸಿದ್ಧಿಯನ್ನು ಕೊಟ್ಟನೆಂದು ಕೊಂಡಾಡುತ್ತಾನೆ. ಹಾಗೇ ಮುಂದುವರಿದು ತನ್ನ ಗುರುವಿನ ಕಾರ್ಯವನ್ನು ಕುರಿತು :

"ವೃಷಭಪತಿ ಬಂದಾನೆ ವ್ರತವನಡಗಿಸಿ ಅಹನೆ
ವಿಷ ವಾಕ್ಯವನು ನುಡಿಸುತಾನೆ ಲೆಂಕನ ಕೈಯ
ಹುಸಿಯಲ್ಲವು ಖಂಡಜ್ಞಾನ ಸಂಗಯ್ಯನದು
ವಿಷದ ಮಳೆ ಕರೆದೀತು ಬೀಡಾರವನು ಬಿಟ್ಟ
ಉಸುರಿದನು ಲೋಕನೋಳು ಇಂತು ಆಯಿತೆಂದು
ಇಂತಿ ಸಂವತ್ಸರ ಈ ಸ್ಥೀತಿಗಳೆಂದು ಎನಲಿಲ್ಲ
ಭಾಷೆ ಪಾಲಿಪನು ಎನ್ನೊಡೆಯ ಸಂಗಮನಾಥ
ಆಭಾಸ ದೈವದ ಶಿಖಾಮಣಿಯೆಂಬ ಬರಿದಂಕ ಜನ
ದೀಶನೀನೊಬ್ಬನೆ ಕೃಪಾಲ ಸಂಗಯ್ಯ
ದೂಷಿಕರ ಬಾಯಲಿ ಸೀಸವ ಕಾಸಿ ಎರೆದಂತೆ
ಬಾಸುಳ ಬಡಿಗಲ್ಲನು ತಂದೊಡ್ಡುತೈದಾನೆ"[೧೧]

ಎಂದು ತನ್ನ ಸಂಗಮನಾಥನು ನುಡಿಯಲ್ಲಿ ನಡೆಯಲ್ಲಿ ಪರಿಶುದ್ಧವನ್ನಾಗಿಸಿದದ ಗುರು

ಆತನು ದುಷ್ಟರನ್ನು ಶಿಷ್ಟರನ್ನಾಗಿ ಪರಿವರ್ತಿಸುವ ಜಗದೀಶ ನನ್ನ ಗುರುವೆಂದು ಕೊಡೆಕಲ್ ಬಸವಣ್ಣನವರು ಸ್ಮರಿಸಿದ್ದಾರೆಂದು ತಿಳಿದು ಬರುತ್ತದೆ.

"ಅಂದಿನ ಮಣಿಯಕೆಲ್ಲರು ಇದುರು ಜರಿದವರು
ಇಂದಿನ ಮಣಿಯಕಂಜರೆ
ಅಂದು ಬಂದವರು ಸಮರ್ಥರಹುದ್ಯೆ ಅವರು
ತಂದೆ ನೀ ಎನಗೆ ಕೃಪೆ ಮಾಡೋ
ಮುಂದೆ ಬಸವಪ್ರಭು ಸಂಗಮನೇಶ್ವರ ನೀನು
ಬಂದು ಆಲಶ್ಯ ಮಾಡಿದರೆ
ಹಿಂದಣ ಮಣಿಯದೋಪಾದಿ ಎನುತ್ತಾರೆ
ಬಂಧಿಸುತಲಾರೆ ಇದುರಿಟ್ಟು"[೧೨]
"ಕೇಳು ಸದ್ಗುರು ಸಂಗನಾಳು ತೆತ್ತಿಸಕೋಟಿ ದೈವದ
ಮೇಳೈಸಿ ಗಗನದಿಂದಲಿ ಧಾಳಿಯಿಳಿಯಿತೊ"[೧೩]
"ಅಸದಳಿಯ ಮಾತುಗಳ ಆಡುವರೆ ಒಂದೊಂದು
ಕಿಸಕುಳವು ನಿಮ್ಮ ನಡೆ-ನುಡಿ ಎಲ್ಲವು
ಬೆಸೆನು ನೋಡಿ ಇನ್ನೆಲ್ಲ ಸಸಿನಗೆ ಮುಂದಿನ್ನು
ಬಿಸಿಯ ಬಿಟ್ಟರು ಮಾಡುವ ಮಾಟಕೆ
ಶಶಿಧರ ಸಂಗಮೇಶ್ವರನ ನುಡಿ ಮರ್ತ್ಯದೊಳು
ಹೊಸತೀಗ ಬಂತು ರಸುಮೆಯ ಬಹಳವ
ಪಸರಿಸುವ ಅಬ್ಬರವ ಬಂದಿದೆ ನಂಬಿ ನಂಬಿನ್ನು
ದೆಸೆದೆಸೆಗೆ ಭುಗಿಲು ಭುಗಿಲಂತೇಳುತ"[೧೪]

"ಹೀಗೆ ಸ್ವರವಚನಗಳಲ್ಲಿ ಡಿಗ್ಗಿ ಸಂಗಮನಾಥ ಆಗಮನದ ಅಗತ್ಯವನ್ನು ಹೇಳುವುದರ ಮೂಲಕ ಕಲ್ಯಾಣದ ನಡೆ-ನುಡಿ ಮರ್ತ್ಯದ ಬದುಕನ್ನು ಹೊಸದಾಗಿ ರೂಪಿಸುವ ಪರಿಯನ್ನು ಬಣ್ಣಿಸಲಾಗಿದೆ"[೧೫]

"ನರಿಯ ಹಿಂದ ಚೌ ಶ್ವಾನಗಳು
ಮುರಿದೋಡಿ ಬಂದವು ಬೇಗ
ನರ ಬಣಮಿಗಳು ಆದವಾಗ
ಗುರು ಸಂಗಮೇಶ್ವರನ ಪ್ರಭೆಯಾಗಿ"[೧೬]
"ಕಪ್ಪು ಕಲ್ಮಶ ಇದ್ದುದಕ್ಕೆ ತಪ್ಪಿಗಳನ್ನು ಮಾಡಿ
ಆಪ್ತ ಸಂಗಮನಾಥನಿಟ್ಟ ತಪ್ಪಿಗಾಜ್ಞೆ ನೋಡಿರೊ"[೧೭]

"ಅನುಪುಂಟು ಅವರಿಗೆ ಸಲೆ ಸಂಗನರ್ಪಿತ
ಬಲುವುಂಟು ಅವರ ಬಲ್ಲವರು
ಕಲಹವನಳಿದವರು ಹಮ್ಮಿಳಿದಿಪ್ಪವರು
ಸುಲಭಾವ ಸೂಕ್ಷ್ಮಗಳನು"[೧೮]

"ನಡುಗದ್ದಿಗೆ ಸಂಗಮೇಶನು ಕುಳ್ಳಿರ್ದ
ಒಡೆತನ ದಂಡನಾಯಕನಿಗೆ
ಹಿಡಿವಂಡ ಸರಕು ಸಕಲ ಸ್ವಯವನು ತಂದ
ಬಿಡು ಚಿನ್ನವಾಲರಂಗಡಿಯಾ"[೧೯]

"ಸಕಲ ಸ್ಥಳಗಳಿಗೆ ಮುಕುರ ಕೈಲಾಸ
ಲಿಖಿತ ಪಾಪಗಳ ದೂರ ವಿನಾಶ
ಭಕುತಿ ಶಿವಶರಣೆಯರ ಸಲಹುವ ಈಶ ನಮ್ಮ
ಶಿಖರ ಸಿಂಹಾಸನದ ಗುರು ಸಂಗಮೇಶ"[೨೦]

ಹೀಗೆ ನಮ್ಮ ಗುರು ಸಂಗಮನಾಥನು ಹಿಂದು–ಮುಸ್ಲಿಂ ನಡುವೆ ನಡೆದ ಸಂಘರ್ಷವನ್ನು ಗಮನಿಸಿದ ಕೋಮುವಾದ ಕಲಹವನ್ನು ನಿಷ್ಠೆಯಿಂದ ಪ್ರಾಣಲಿಂಗದ ಮಹತ್ವವನ್ನು ತಿಳಿಕೊಟ್ಟು, ಈ ದ್ವಿಪ್ರಭುತ್ವಗಳಲ್ಲಿ ಐಕ್ಯತೆಯನ್ನು ಮೂಡಿಸುತ್ತಾನೆ, ಸರ್ವರನ್ನು ಸಮಾನವಾದ ದೃಷ್ಟಿಕೋನದಿಂದ ನೋಡಿಕೊಂಡು ಸರ್ವರನ್ನು ಒಂದುಗೂಡಿಸಲು ಸಾಧ್ಯವಾಯಿತು. ಹಾಗೇ ಹಲವು ಪ್ರದೇಶಗಳಲ್ಲಿ ಸಂಚರಿಸಿ ಜನತೆಯಲ್ಲಿ ಜ್ಞಾನಜ್ಯೋತಿಯನ್ನು ಬಿಂಬಿಸಿ ಅವರಲ್ಲಿರುವ ಅಜ್ಞಾನವನ್ನು ತೊಲಗಿಸಿ ಭಕ್ತರನ್ನು ಅಥವಾ ಶಿಷ್ಯರನ್ನು ಉದ್ಧರಿಸಿದ ಗುರುವಾಗಿದ್ದಾನೆ.

"ಹನ್ನೊಂದ ಅಮರಗನ್ನಡದ ಲಿಪಿ
ಉನ್ನತುತ್ತರ ಉದಯ ಕಾಲದಿ
ನಮ್ಮನರಿತವರಿಲ್ಲಯ್ಯ ಬಸವ ಕೇಳೆಂದ"[೨೧]

ಕನ್ನಡ ಭಾಷೆಗೆ ಶರಣರದು ಬಹುದೊಡ್ಡ ಕೊಡುಗೆ ; ಹನ್ನೆರಡನೆಯ ಶತಮಾನದಲ್ಲಿ ಶ್ರೀ ಸಾಮಾನ್ಯರ ಭಾಷೆಯಲ್ಲಿ ಸಾಹಿತ್ಯ ಭಾಷೆಯನ್ನಾಗಿ ರೂಪಿಸಿಕೊಂಡರು. ಆದರೆ ಈ ಶಿವಶರಣರಿಗಿಂತ ಭಿನ್ನವಾಗಿ ಸಾಂಕೇತಿಕ ಎನಿಸಿಕೊಳ್ಳುವ ಅಮರಗನ್ನಡ ಲಿಪಿಯನ್ನು ಶೋಧಿಸಿದ್ದು ತಿಳಿದುಬರುತ್ತದೆ. ಈ ಭಾಷೆಯನ್ನು ಲಿಪಿಯ ಉಗಮನ್ನು ಕಾರಣರಾದ ಡಿಗ್ಗಿ ಸಂಮನಾಥ ಮತ್ತು ಅದನ್ನು ಬೆಳೆಸಿಕೊಂಡು ಹೋಗಿರುವ ಕೊಡೇಕಲ್ ಬಸವಣ್ಣ ಇವರಿಬ್ಬರಿಗೆ ಸಲ್ಲುತ್ತದೆ. ಇಂತಹ ಅಮರಗನ್ನಡ ಲಿಪಿಯನ್ನು ಸಂಗಮನಾಥನು ನನಗೆ ತಿಳಿಸಿಕೊಟ್ಟನೆಂದು ಕೊಡೇಕಲ್ ಬಸವಣ್ಣನವರು ಮೇಲಿನ ವಚನದಿಂದ ವ್ಯಕ್ತಪಡಿಸುತ್ತಾರೆ.

ಹಾಗೇ ಕೊಡೇಕಲ್ ಬಸವಣ್ಣನವರಿಗೆ ತಾವು ಜನಿಸಿ ಬಂದ ಕಾರಣವನ್ನು ತಿಳಿಸಿ

ಆತನಿಗೆ ದೀಕ್ಷೆಯನ್ನು ನೀಡಿ ಮಾರ್ಗದರ್ಶನ ಮಾಡಿದ್ದು, ತನ್ನನ್ನು ಸಮಾಜ ಸುಧಾರಕನನ್ನಾಗಿ ಕಾರ್ಯನಿರ್ವಹಿಸು ಅಂತ ರೂಪಿಸಿದ್ದು ಆ ಸಂಗಮನಾಥನನ್ನು ಕುರಿತು ಕೊಡೇಕಲ್ ವಚನವಾಕ್ಯಗಳು ಪ್ರತಿಪಾದಿಸುತ್ತವೆ.

ನಂಬು ನಂಬಿಗೆ ಸುಷುಪ್ತಿ ಜಾಗ್ರದಿ
ಬಿಂಬ ತಪಸಿಗೆ ಈಡು ಆದರೆ
ಕೊಂಬು ಕೊಡುವಡೆ ನೋಡ್ವನಂತಃಕರಣದಲ್ಲಿ
ನಂಬಿದಾಗಲೆ ನಿಜವು ಕಾಂಬದು
ತಂದೆ ನಂಗನ ಕೃಪೆಯು ಇರುತಿರೆ
ಕೊಂಬರೇನಿಂದು ಕಾರ್ಯವು ಬಸವ ಕೇಳೆಂದು"[೨೨]
"ಇಷ್ಟ ಅರಿತು ನಡೆದರೆ ಸಾಧ್ಯ
ಅಷ್ಟರಿಂದಲಿ ಸಕಲ ಸಾಧ್ಯ
ಅಷ್ಟಮ ಸಿದ್ಧಿಗಳು ಸಾಧ್ಯ
ದೃಷ್ಟಿ ಪ್ರತ್ಯಕ್ಷ ಸಂಗಮನಾಥ ಸಾಧ್ಯ"[೨೩]

"೧೨ನೇ ಶತಮಾನದ ಶಿವಶರಣರ ವೈಚಾರಿಕ ಚಳುವಳಿಯನ್ನು ಧಾರ್ಮಿಕ ಚಳುವಳಿಯನ್ನಾಗಿ ರೂಪಿಸುವ ಯತ್ನಗಳು ಪ್ರಾಯಶ ೧೪, ೧೫ ನೇ ಶತಮಾನದಲ್ಲಿ ನಡೆದಂತೆ ತೋರುತ್ತದೆ. ವೀರಶೈವ, ಶೈವ, ಶೈವಾಗಮ ಹೀಗೆ ಬೇರೆ ಬೇರೆ ಹೆಸರುಗಳಿಂದ ಶರಣರ ಪ್ರಜಾಪ್ರಭುತ್ವದ ಆಶಯಗಳು ಪುರೋಹಿತ, ಮಠಕೇಂದ್ರಿತ ಸಂವಿಧಾನಗಳಾಗಿ ಪರಿವರ್ತನೆಗೊಂಡಂತೆ ತೋರುತ್ತದೆ. ಅಂತಹ ಸಂದರ್ಭದಲ್ಲಿ ಶೈವ ಯಾವುದು ಶೈವಾಗಮ ಯಾವುದು ಎಂಬ ಚರ್ಚೆಯೇ ನಿರರ್ಥಕ ಎಂಬಂತೆ ಅಮರಕಲ್ಯಾಣದ ಸಂಗಮನಾಥ ಪ್ರತಿಪಾದಿಸಿರುವುದು ಶರಣಪರಂಪರೆಯ ಐತಿಹಾಸಿಕ ಮುಂದುವರಿಕೆಯೆನಿಸಿದೆ."[೨೪]

"ನಾಭಿಯಲ್ಲಿ ಶೈವಾಗಮವು
ನಡುವಿನದೆ ಶುದ್ಧ ಶೈವಗಳು
ಶಿಖಾಮಣಿ ವೀರಶೈವಗಳು
ಮತ್ತು ಪ್ರಕಾಶ ಸಂಗಮನಾಥ ನಿತ್ಯಕೃತ್ಯಗಳು"[೨೫]
"ಡಿಳಿಯೆಂಬುದಕ್ಕೆ ಪ್ರತಿ ಹೆಸರು
ಕಲ್ಯಾಣಕ್ಕೆ ಪ್ರತಿ ಹೆಸರು
ಎಲ್ಲಾ ಸ್ಥಾನಕ್ಕೆ ಹೊಸ ಹೆಸರು
ನೆನೆವ ಸ್ಥಾನವು ಭೂ ಸ್ವರ್ಗ ಪೆಸರು"[೨೬]

ಎಂದು ಮುಂದುವರೆದು ಶರಣರ ಸಿದ್ಧಾಂತಗಳಾದ ಗುರು–ಲಿಂಗ–ಜಂಗಮದ ತಾತ್ವಿಕ

ಚಿಂತನೆಗಳನ್ನು ಪರಶಿವನ ನಿರಾಕಾರ ಸ್ವರೂಪತೆಯನ್ನು ಕುರಿತು ಕೊಡೆಕಲ್ ಬಸವಣ್ಣನವರಿಗೆ ಅರುಹಿದ ಸಂಗಮನಾಥನ ಮಹತ್ವವನ್ನು ಕೊಡೆಕಲ್ ವಚನಗಳಲ್ಲಿ ಕಂಡುಬರುತ್ತದೆ.

"ಮರೆಮಾಡಿ ಬಂದಾನೆ ಲಿಂಗ ತನ್ನ
ಕುರುಹು ತೋರಿ ತೊರದಾನೆ ಸಂಗ
ಹೆಚ್ಚಾಗಿ ತಾ ನಿಂತ ಮತ್ತೆ ಈ ತನುತ್ರಯಕ್ಕೆ
ಇಪ್ಪ ನೆಲೆಯನ್ನು ತೋರೆದಾರಿಗೆ ತಾನ್ಯಾಕೆ
ಬಪ್ಪವಳಿಯದಲಿಂತು ತಾನಾಗಿ ನಿಲ್ಲಲಿಕೆ
ಕಪ್ಪು ಕಣ್ಣೊಳಗೆ ಇದ್ದಂತೆ ಅಪ್ಪು ಸಂಗಯ್ಯನ ಕೃಪೆ ಈ ತೆರೆನಂತೆ"[೨೭]

ಹೀಗೆ ಕೊಡೇಕಲ್ ಬಸವಣ್ಣನವರಿಗೆ ಪ್ರತ್ಯಕ್ಷನಾಗಿ ತನ್ನ ಕುರುಹುಗಳನ್ನು ತನುವಿಗೆ ಆಸರೆಯಾಗಿ ನೆಲೆಯನ್ನು ತೋರಿಸಿದ ಕಾಮಧೇನು ಕಲ್ಪವೃಕ್ಷದವನು ಇವನು ನಿರಾಕಾರ ಸ್ವರೂಪಿ ನಿಃಕಾಯದವನು ಸಂಗಮ ಎಂದು ಹೇಳಿಕೊಂಡಿದ್ದಾನೆ.

ಈ ಕೊಡೆಕಲ್ ಪರಂಪರೆಯಲ್ಲಿ ಬರುವ ವೀರಸಂಗಪ್ಪಯ್ಯನು ದಿಗ್ಗಿ ಸಂಗಮನಾಥನ ಶಿಷ್ಯರಲ್ಲಿ ಈತನೊಬ್ಬ ಈತನಿಂದಲೇ ರಚಿತವಾದ ನಂದಿಯಾಗಮಲೀಲೆ, ಸ್ವರವಚನ, ಕಾಲಜ್ಞಾನದ ಕಟ್ಟಳೆ ಕೃತಿಗಳಲ್ಲಿ ಈ ಸಂಗಮನಾಥನ ಕುರಿತು ಉಲ್ಲೇಖಗಳು ಇವೆ. ಈ ಪರಂಪರೆಯ ಮುಖ್ಯ ರೂವಾರಿಯಾದ ಗುರುವಾದ ಆರೂಢ ಸಂಗಮನಾಥನ ಯಾವ ರೀತಿ ಭಯಂಕರರೂಪಿಯಾಗಿ ಆರೂಢನಾಗಿ ಕಂಡುಬರುತ್ತಾನೆಂಬುದಕ್ಕೆ ಈ ಕೆಳಗಿನ ವಚನದಲ್ಲಿ ಕಾಣಬಹುದು ;

"ಬಿಟ್ಟಮಂಡಿಯ ಮೇಲೆ ಕಿರುಜೆಡೆ
ಸುಟ್ಟು ಉರಿವ ನಯನ ನೂಸಲಲಿ
ಮೆಟ್ಟಿದ ಹಾವುಗೆಯ ಪಾದದಿ ಕಮಲಲೋಚನವು
ಮುಟ್ಟಿ ಹಸ್ತದಿ ನಾಗದಂಡವು
ಕಟ್ಟಿದ ಕಟಿಸೂತ್ರ ಕೃಪವು
ಇಟ್ಟ ಸರ್ವಾಂಗದಲ್ಲಿ ಭಸಿತನಾರೂಢ ರೂಪಿನಲಿ"[೨೮]

ಹೀಗೆ ಬಹುರೂಪಿಯಾಗಿ ಆರೂಢನಾಗಿ ಸಂಗಮನಾಥನು ಕಂಡುಬರುತ್ತಾನೆಂದು ತಿಳಿಯುತ್ತದೆ. ಅದೇ ರೀತಿ ನಂದಿಯಾಗಮಲೀಲೆ ಕೃತಿಯ ೧೪ ಮತ್ತು ೧೫ ಸಂಧಿ ದಿಗ್ಗಿ ಸಂಗಮನಾಥನ ವ್ಯಕ್ತಿತ್ವವನ್ನು ಚಿತ್ರಿಸಲು ಮೀಸಲಾಗಿದೆ. ಹಾಗೇ ಕೊಡೆಕಲ್ ಬಸವಣ್ಣನ ಗುರುವಾಗಿ ಕಲ್ಯಾಣ ಪರಂಪರೆಯನ್ನು ಪ್ರಚಾರಕನಂತೆ ಸಿದ್ಧಿಗೊಳಿಸಿದ ಪರಿಯನ್ನು ಈ ಕೆಳಗಿನ ಕಾವ್ಯದಲ್ಲಿ ತಿಳಿಸುತ್ತದೆ.

"ಈ ಪರಿ ಉದ್ಯಮವ ಮಾಡುತ
ವ್ಯಾಪಾರಗಳ ನಡೆಸುತಿರಲು

ರೂಪ ತಪ್ಪಿಸಿ ಬಂದು ನಿಂತನು ಸಂಗಮೇಶ್ವರನು
ದೀಪ ಬೆಳಗಿಗೆ ತಮವು ಪರಿದೊಲು
ಈ ಪರಿಯಲಿ ಕಾಣಗೂಡದೆ
ತಪ್ಪಿಸಿದನು ಮನದ ಬೆಳಗಿನ ಅರುಹ ಮರೆಮಾಡಿ"[೨೯]
"ಅಣಿಕಾರನು ಸಂಗಮೇಶ್ವರ
ಪ್ರಾಣಲಿಂಗಸ್ಥಲವ ತಂದನು
ಮಾಣದೆ ಹೇಳಿದನು ತೀರ್ಥ ಪ್ರಸಾದ ಮಹಿಮೆಯನು
ಕ್ಷೋಣಿಯೋಘಗೆ ಅನ್ನ ಉದಕವ
ತ್ರಾಣ ಜೀವನಾಧಾರೆ ಎಂಬಂತೆ
ಜೋಳ ಮದಳಿಗಿಕ್ಕಿದಂತೆ ಶರೀರ ಒಲ್ಮೆಯದು"[೩೦]

ಮುಂದುವರಿದು ಸಂಗಮೇಶ್ವರನು ಆರೂಢ ಪಂಥದ ತಾತ್ವಿಕತೆಯನ್ನು ಪ್ರಸರಣಗೊಳಿಸಿ ಆರೂಢ ಸಂಗಮೇಶ್ವರನಾಥ ಆದದ್ದು ಬಗ್ಗೆ ;

"ನೀನೆ ಜಗಕೆ ಕರ್ತುನಾದರೆ
ದಾನಿ ಸಂಗನನುಡಿಸಿ ಕೊಡುವುದು
ಅನುಮಾನಿಲ್ಲದೆ ಮರವೆ
ತೆರೆಯನು ಹರಿದು ತೋರುವುದು
ಮಾನನಿಧಿಯ ಬಸವರಾಜನು
ತಾನು ಭೂಧರ ಶಿಲೆಯ ಗವಿಯೋಳು
ಆನಂದದಿಂದಲಿ ಹೋಗಿ ಕಂಡನು ಆ ಪರಂಜ್ಯೋತಿಯನು"[೩೧]

ಹಾಗೇ ಈತನ ಆರೂಢತ್ವದ ಬಗ್ಗೆ ವೀರ ಸಂಗಪ್ಪಯ್ಯನ ಸ್ವರವಚನಗಳಲ್ಲಿ ಈ ಮಹತ್ವವನ್ನು ವರ್ಣಿಸುತ್ತದೆ.

"ಸಂಗಮಂ ಪಾಹಿ ಸಜ್ಜನರ ಹೃದಯ
ಲಿಂಗಮಂ ಪಾಹಿ ಅಂಗಲಿಂಗನು ಆತ್ಮಜೀವನು
ಸಂಗ ಸಂಯೋಗದಲಿ ರಕ್ಷಿಪ
ಆರು ದರುಶನ ಹೊಂದಿದ ಆರೂಢನೆ
ಮೇದಿನಿಗಾಶ್ರಯ ಶಿವನೆ
ಮಾರಹರನು ಮರ್ತ್ಯದೊಳಗಣ
ವೀರಶೈವದ ಭಕ್ತಿ ರಕ್ಷಿಪ"[೩೨]
"ಶಿಶುವು ಶರಣರ ಶೀಲ ರಕ್ಷೀಪ

ಪರಿವರಿ ಶಾಸ್ತ್ರಗಳು ನಿಮ್ಮಯ
ಚರಣವ ಸ್ತುತಿಸುತಿರೆ
ಅರಸು ಕೊಡೆಯಕಲ್ಲ ಬಸವನ
ಗುರುವು ಕಪ್ಪಡಿ ಗವಿಯ ವಾಸನೆ"[೩೩]

ಇತ್ತಿಚಿಗೆ ದೊರೆತ ಗುಂಡಬಸವೇಶ್ವರ ಚರಿತ್ರೆ ಸಂಗಮನಾಥನ ವ್ಯಕ್ತಿತ್ವವನ್ನು ಮತ್ತು ಆತ ಸಂಚರಿಸಿದ ಸ್ಥಳಗಳನ್ನು ಚಾರಿತ್ರಿಕವಾಗಿ ಕಟ್ಟಿಕೊಡುತ್ತದೆ. ಈ ಕೃತಿಯ ಪ್ರಕಾರ ಸಂಗಮನಾಥನ ಶಿಷ್ಯ ಪರಂಪರೆಯನ್ನು ಮತ್ತು ಆತನ ಡಂಗುರ ಬೋಧೆಯ ಕಾಯಕವನ್ನು ಈ ಕೆಳಗಿನ ಪದ್ಯಗಳು ಹೀಗೆ ನಿರೂಪಿಸುತ್ತವೆ"[೩೪]

"ಗುರುಗುಂಡ ಬಸವೇಶ ನೆರಲಿಂಗ ಸಂಗಮ
ಚರವು ಎನಗೆ ಪ್ರಭುದೇವ
ಗುರು ಹೃದಾಲಯದೋಳು ಚರಲಿಂಗವಿಹುದೆಂದು
ನೆರೆನಂಬಿ ನಾ ಭರಿಸುವೆನು
ಬಾಳ ಲೋಚನದಲ್ಲಿ ಕಳುಹಿಸಿಕೊಂಡರು
ಢಾಳರು ಗೋಮುಖದವರು
ಇಳೆಯೊಳು ಹಳೆಯಸಗರವೆಂಬ ಊರಲ್ಲಿ
ಬೆಳಗುಳ್ಳ ಗುರು ಜನಿಸಿದನು
ಕೇಳು ನೀ ಬಸವಣ್ಣ ಹೇಳುವ ಮಾತನು
ಭಾಳಲೋಚನ ಭಕ್ತನೊಬ್ಬ
ಹಳೆಯ ಸಗರದ ಹೊರಗೆ ಮಠಕಟ್ಟಿ
ಇಳೆಯೊಳಮರಕಲ್ಯಾಣೆನಿಸಿ"[೩೫]
"ತಿಥಿನಾಲ್ಕು ಮಾಡಿದ ಆತ ತಾ ಬಸವಣ್ಣ
ಮತ್ತೇ ಭಕ್ತರು ಬೋಳರೆನಿಸಿ
ಶೃತಿಧರ್ಮ ಬೋಧೆಯ ಸಾರಿಸುತಲಿಹನು
ಮಥಿಸಿ ಮರ್ತ್ಯಲೋಕದೊಳಗೆ"[೩೬]
"ಡಂಗುರ ಬೋಧಯ ಹಿಂಗದೆ ಹೇಳ್ವೆನು
ಅಂಗವಿಸಲು ಬಾರದಂತೆ
ಸಂಗಮೇಶ್ವರನ ಮೆಚ್ಚಿನ ನುಡಿನುಡಿದೆನೆಂ
ದಂಗವಾಣಿಗಳ ನಾಡುವನು"[೩೭]

ಅದೇ ರೀತಿ ದಕ್ಷಿಣ ಕರ್ನಾಟಕದ ಜಾನಪದ ಚರಿತ್ರೆಯಲ್ಲಿ ಕಂಡುಬರುವ ಮಂಟೆಸ್ವಾಮಿಯೂ.

ಕೊಡೇಕಲ್ ಬಸವಣ್ಣನವರ ಸಮಕಾಲಿನ ಇರುವುದರಿಂದಲೇ ಆತನು ಶರಣ ಪರಂಪರೆಯನ್ನು ಬಿತ್ತಿದನು. ಆದ್ದರಿಂದ ಈತನ ಸಾಹಿತ್ಯದಲ್ಲಿಯೂ ಕೂಡ ಡಿಗ್ಗಿ ಸಂಗಮನಾಥನ ಕುರಿತು ಉಲ್ಲೇಖಗಳು ಕಂಡುಬರುತ್ತವೆ.

"ಬಾಹ್ಯದ ಆಡಂಬರ(ಬಾಹ್ಯದ ಬಣ್ಣ) ನಡೆಯದು ಇನ್ನು ಮುಂದೆ ಈ ಆಡಂಬರ ಮುರಿಯಲು ಬಸವಣ್ಣನಾಟ, ಚೆನ್ನಬಸವಣ್ಣನಾಟ ಬರುತ್ತಿದೆ. ಮಂಡಲಿಂಡರು ಹೆಚ್ಚಾಗಿದ್ದಾರೆ. ಮಂಡಲದಲ್ಲಿ ಗಂಡನ ಜೀವಕ್ಕೆ ಮದ್ದು ಅರೆಯುವ ಹೆಂಡತಿ ಹುಟ್ಟಿ ಉಂಡ ಮನೆಗೆ ಎರಡು ಬಗೆಯಲು ಮುಂದಾಗಿದ್ದಾಳೆ. ಪಾಪ-ಪುಣ್ಯದ ವಿವೇಕವಿಲ್ಲದ ಗಂಡು-ಹೆಣ್ಣು ಹೆಚ್ಚಾಗಿದ್ದಾರೆ. ಭೂಮಿಯಲ್ಲಿ ಅಣ್ಣನ ಹೆಂಡತಿಗೆ ಮೈದುನ ಕಣ್ಣು ಹಾಕುತ್ತಿದ್ದಾನೆ. ನಡತೆ ಎನ್ನುವುದು ಮಣ್ಣುಗೂಡಿ ಹೋಯಿತು, ಮರ್ತ್ಯದಲ್ಲಿ ಸತ್ಯವನ್ನು ಸಾರುತ್ತ ಹೊರಟಿದ್ದಾನೆ ಕರ್ತ. ಹೆತ್ತ ತಾಯಿಯ ಜರಿದವನನ್ನು ಕರ್ತ ಸಂಗಮನಾಥ ನೋಡಿ ಕೇಳುತ್ತಾನೆ"[೩೮] ಎಂದು ಡಿಗ್ಗಿ ಸಂಗಮನಾಥನನ್ನು ಕುರಿತು ವಿವರಿಸುತ್ತಾನೆ.

ಹೀಗೆ ಸಂಗಮನಾಥನ ಕುರಿತು ಅನೇಕ ನಂಬಿಕೆಯ ಪವಾಡಗಳನ್ನು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಶಿಶು ಸಂಗಮನಾಥ ದೇಸಾಯಿಯವರು 'ಶ್ರೀ ಡಿಗ್ಗಿ ಸಂಗಮೇಶ್ವರ ಚರಿತ್ರೆ' ಎಂಬ ಕೃತಿಯಲ್ಲಿ ಸುಮಾರು ೧೪ ಸ್ಥಳಗಳನ್ನು ಗುರುತಿಸಿದ್ದಾರೆ. ಹೀಗೆ ಡಿಗ್ಗಿ ಸಂಗಮನಾಥನ ಚಾರಿತ್ರಿಕ ಸಂಗತಿಗಳು ತಿಳಿದುಬರುತ್ತದೆ. ಆತನು ಸಂಚರಿಸಿದ ಭೂಪ್ರದೇಶ ಕೊನೆಯ ದಿನಗಳು ಗುರುಶಿಷ್ಯ ಪರಂಪರೆ ಹಾಗೂ ಸಾಂಸ್ಕೃತಿಕ ವಿಚಾರಗಳು ಕಟ್ಟಿಕೊಡಲು ಮೇಲೆ ಪ್ರಸ್ತಾಪಿಸಿಕೊಂಡು ಚರ್ಚಿಸಿದ ಕೃತಿಗಳಿಂದ ಈತನ ವ್ಯಕ್ತಿತ್ವದ ಬಗ್ಗೆ ಕಟ್ಟಿಕೊಡುತ್ತದೆ.

೪.೩ ಸಗರ ಹಜರತ್ ಸೂಫಿ ಸರ್ಮಸ್ಥ :

ಸಗರ ಗ್ರಾಮವು ಶಹಾಪುರ ನಗರದಿಂದ ನೈರುತ್ಯಕ್ಕೆ ೨೨ಕಿ.ಮೀ ದೂರದಲ್ಲಿ ಬರುವ ಪ್ರಮುಖ ಕಂದಾಯ ವಲಯವಾಗಿದೆ. ಇದು ತಾಲೂಕಿನ ದೊಡ್ಡ ಹೋಬಳಿಯು ಹೌದು. ಈ ಗ್ರಾಮಕ್ಕೆ ಮೊದಲು 'ನಸ್ರತ್‌ಬಾದ್' ಎಂದು ಕರೆಯುತ್ತಿದ್ದರು. ಈ ಗ್ರಾಮದ ಉತ್ತರ ದಿಕ್ಕಿನಲ್ಲಿ ೨ಕಿ.ಮೀ ದೂರದಲ್ಲಿ ಒಂದು ದರ್ಗಾವಿದೆ. ಅದು ಸ್ಥಳೀಯವಾಗಿ ಪ್ರಸಿದ್ಧಿಯನ್ನು ಪಡೆದುಕೊಂಡ ಸೂಫಿ ಸರ್ಮಸ್ಥರು ಒಬ್ಬರು. ಇವರು ಭಾರತಕ್ಕೆ ಆಗಮಿಸಿದ ಸೂಫಿಗಳಲ್ಲಿ ಎರಡನೆಯವರು. ಆದರೆ ಕರ್ನಾಟಕಕ್ಕೆ ಅದರಲ್ಲೂ ದಖ್ಖನಗೆ ಬಂದಿರುವ ಸೂಫಿಗಳಲ್ಲಿ ಇವರೇ ಮೊದಲಿಗರು. ಈತನು ೫೫೫ಹಿಜರಿಯಲ್ಲಿ ಜನಿಸಿದನು ಇವನು 'ಸಾಮ್ರಾ' ಪ್ರಾಂತ್ಯದ ರಾಜವಂಶಸ್ಥರಾಗಿದ್ದು ಹಾಗೂ ಬಲಖ್ ಪ್ರಾಂತ್ಯದ ರಾಜಕುಮಾರಿಯನ್ನು ವಿವಾಹವಾಗಿದ್ದನೆಂದು ಕಂಡುಬರುತ್ತದೆ. ನಂತರ ಸೂಫಿ ಆಧ್ಯಾತ್ಮಕತೆಯಿಂದ ಪ್ರಭಾವಕ್ಕೆ ಒಳಗಾಗಿ ದೆಹಲಿಯ ಸೂಫಿ ಸರ್ಮಸ್ಥ ಹಸದದ್ದುಲ್ ಹೌಲಿಯ(ಕಬರತ್ ಬಲಾ-ಎ-ಸಾನಿಯಾ) ಎಂದು ನಾಮಕರಣಗೊಳ್ಳುತ್ತಾರೆ. 'ಸರಮಸ್ತ' ಅಂದರೆ 'ದೈವೀ ಪ್ರಮಸ್ತ' ಎಂಬುದು ಇದರರ್ಥ ಹಾಗೂ ಸೂಫಿಯ ಸಂಕೇತವಾಗಿದೆಂದು ಹೇಳಬಹುದು.

ನಂತರ ಉತ್ತರಭಾರತದ ಮಥುರಾ ಇತ್ಯಾದಿ ಕಡೆಗಳಲ್ಲಿ ಸಂಚರಿಸಿ ಸುಮಾರು ೧೬೦೦

ಪಲ್ಲಕ್ಕಿಗಳಲ್ಲಿ ತಮ್ಮ ಅನುಯಾಯಿಗಳ ಜೊತೆ ನಸ್ರತ್‌ಬಾದ್ ಅಥವಾ ಸಗರದಲ್ಲಿ ಬಂದು ನೆಲೆಸಿದರು. ತಜರಿತಾ(ಸಂತ ಚಾರಿತ್ರ)ಗಳು ವಿವರಿಸುವಂತೆ ಸೂಫಿ ಹೆಸರುಳ್ಳ ಯೋಧರು ಬಂದಿರುವುದನ್ನು ಈ ಕೃತಿ ವಿವರಿಸುತ್ತದೆ. ಇಲ್ಲಿ ಅವರು ಜಿಹಾದ್(ಧರ್ಮಯುದ್ಧ) ಎಂದು ತಿಳಿದು ದೊರೆ ಮತ್ತು ಧರ್ಮಕ್ಕಾಗಿ ಯುದ್ಧದಲ್ಲಿ ಪಾಲ್ಗೊಂಡು ಸಾಮ್ರಾಜ್ಯ ವಿಸ್ತರಿಸಿಕೊಡಲು ಬಂದ ಸೂಫಿಗಳಲ್ಲಿ ಈ ಸೂಫಿ ಸರ್ಮಸ್ಥ ಕೂಡ ಒಬ್ಬರು. ಇಂತಹ ಸೂಫಿಗಳನ್ನು ಯುದ್ಧರೂಪಿ ಸೂಫಿಗಳು ಎಂದು ಕರೆಯುತ್ತಾರೆ. ಇವರಲ್ಲಿ ಸೂಫಿ ಸರ್ಮಸ್ಥ, ದೀರ್ ಖಂಡಾಯಿಕ್ ಆಗಮಿಸಿದ ಯುದ್ಧ ಸೂಫಿಗಳಲ್ಲಿ ಮೊದಲಿಗರೆಂದು ತಿಳಿಸುತ್ತದೆ.

ಇಂತಹ ಯುದ್ಧ ರೂಪಿ ಸೂಫಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಇರುವುದು ಕಂಡುಬರುತ್ತದೆ.

೧ ಶೇಕ್ ಫರಿದುದ್ದಿನ್ ಸುಲ್ತಾನ್ ಸರ್ಮಸ್ಥ್(ಅಯೋಧ್ಯ)

೨ ಶೇಕ್ ನಿಜಾಮುದ್ದಿನ್ ಸರ್ಮಸ್ಥ್(ಅಯೋಧ್ಯ)

೩ ಶೇಕ್ ಶಹಾಬುದ್ದನ್ ಸರ್ಮಸ್ಥ್(ಜಾಲಿಹಾಳ, ಕಲಬುರಗಿ)

೪ ಮನ್ನಾವರ ಬಾದಷಾ ಸರ್ಮಸ್ಥ್(ಸಗರ)

ಇವರು ಆತನಿಗೆ ಗಂಡು ಮಕ್ಕಳಾದರೆ :

೧ ಮಹಿಬೂಬಿ ಉರ್ಫ ತಿರಕಸಬಿ

೨ ಬೀಬಿ ರಾಬಿಯಾ

೩ ಬೀಬಿ ನಿಜಾಮ್ ಕಾತುಲ್

ಎಂಬ ಮೂವರು ಆತನ ಹೆಣ್ಣು ಮಕ್ಕಳುಗಳಾಗಿ ಕಂಡುಬರುತ್ತಾರೆ. ಈತನ ಮೊದಲ ಮಗಳ ಮಗಳನ್ನು ಸಂತ ಸೂಫಿ ಚಂದಾಹುಸೇನಿಯೊಂದಿಗೆ ವಿವಾಹ ಮಾಡಿಕೊಡುತ್ತಾರೆ. ಅಂದಿನಿಂದ ಸಗರ–ಗೋಗಿಯ ನಡುವೆ ಸಂಬಂಧಗಳು ಏರ್ಪಟ್ಟವು.

ಇವರು ೨ನೇ ಖಲಿಫ್‌ನ್ ಪೀಳಿಗೆಯವರಾಗಿದ್ದು, ೧೬ನೇ ವಾಸ್ತೆಯವರತ್ತಾರೆ(ಉಮರ್ ಫಾರೂಖ್) ಎಂದು ತಿಳಿದುಬರುತ್ತದೆ. ಹಾಗೇ ತಮ್ಮ ಅನುಯಾಯಿಗಳ ಜೊತೆ ಸಗರದಲ್ಲಿ ನೆಲೆಸಿ ಹಿಜರಿ ಶಕೆ ೬೮೦ರಲ್ಲಿ ನಿಧನ ಹೊಂದಿದ ಇವರು ಹಾಗೂ ಇವರ ಅನುಯಾಯಿಗಳ ಗೋರಿಗಳು ಸಗರನಲ್ಲಿ ಸುಮಾರು ೨–೩ಕಿ.ಮೀ ವ್ಯಾಪ್ತಿಯಲ್ಲಿ ಹರಡಿವೆ, ಇವರು ಕವಿ–ಲೇಖಕರಾಗದೇ ಇದ್ದರೂ ಸಗರನಾಡಿಗೆ ಬಂದು ನೆಲೆಸಿದ ಪ್ರಥಮ ಸೂಫಿಯಾಗಿದ್ದ. ಸಗರನಾಡಿಗೆ ಐತಿಹಾಸಿಕ ಹಾಗೂ ಅಧ್ಯಾತ್ಮಿಕವಾಗಿ ಮಹತ್ವ ಪಡೆದವರಾಗಿದ್ದಾರೆ. ಇಲ್ಲಿ ಚಾರ ರಬ್ಬಿಹುಸ್ ಸಾನಿ ಎಂದು ಉರುಷ್ ಜರುಗುತ್ತದೆ. ಇದರ ಎಲ್ಲಾ ಕಾರ್ಯಗಳನ್ನು ಸಜ್ಜಾದ ತಬರಾಜ ಸೂಫಿ ಸರ್ಮಸ್ಥರು ನೋಡಿಕೊಳ್ಳುತ್ತಾರೆ.

ಇಲ್ಲಿಯ ಜನರು ತಮ್ಮ ದೈವಸ್ವರೂಪಿಯಾಗಿ ನಿರ್ಮಿಸಿಕೊಂಡು ಹಿಂದೂ–ಮುಸಲ್ಮಾನರು ಭೇದ ಭಾವ ಇಲ್ಲದೆ ನೈವೇದ್ಯ ಹರಕೆಯನ್ನು ತೀರಿಸಿಕೊಂಡು ಇತನ ಹೆಸರನ್ನೆ ತಮ್ಮ ಮಕ್ಕಳಿಗ

ಸೋಪಣ್ಣ, ಸೋಫಿಸಾಬ, ಸೋಪವ್ವ, ಸೋಪಿಯಾ ಇತ್ಯಾದಿ ಹೆಸರುಗಳಿಂದ ಕರೆದುಕೊಂಡು ದಿನನಿತ್ಯ ಆತನನ್ನು ಪೂಜಿಸುವುದು ಕಂಡುಬರುತ್ತವೆ. ಇದೊಂದು ಸಾಮರಸ್ಯದ ಹಾದಿಯನ್ನು ಕಟ್ಟಿಕೊಂಡಂತೆ ಕಾಣುತ್ತದೆ.

೪.೪ ಗೋಗಿ ಸೂಫಿ ಚಂದಾಹುಸೇನಿ :

ಶಹಾಪುರ ತಾಲೂಕಿನ ಸೂಫಿಗಳಲ್ಲಿ ಚಂದಾಹುಸೇನ ಒಬ್ಬರು. ಇದು ತಾಲೂಕ ಕೇಂದ್ರದಿಂದ ಪಶ್ಚಿಮಕ್ಕೆ ೧೧ಕಿ.ಮೀ ದೂರದಲ್ಲಿ ಬರುವ ಗೋಗಿಯ ಗ್ರಾಮದ ಮಧ್ಯದಲ್ಲಿ ಈತನ ಸಮಾಧಿ ಕಂಡುಬರುತ್ತದೆ. ಈ ಗ್ರಾಮವು ಕಂದಾಯ ಗ್ರಾಮವಾಗಿದ್ದು, ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಈ ಸೂಫಿಯು ಕಲಬುರಗಿ ಜಿಲ್ಲೆಯ ಜೇವರಗಿ ತಾಲೂಕ ಭೀಮನದಿ ತೀರ ಪ್ರದೇಶದ ರದ್ದೇವಾಡಿ ಗ್ರಾಮದಲ್ಲಿ ೭೬೪ಹಿಜರಿ ಅಂದರೆ ಕ್ರಿ.ಶ.೧೪೧೭ರಲ್ಲಿ ಗ್ರಾಮದ ಮಸೀದಿಯ ಹತ್ತಿರ ಒಂದು ಕೋಣೆಯಲ್ಲಿ ಮುಂಜಾನೆ 'ನಮಾಜ್ ಹಜಾನ್' ಸಮಯದಲ್ಲಿ ಸೈಯದ್ ಜಹಾಸಿನ್ ಹುಸೇನ್ ಮತ್ತು ಆಸ್ಮತ್ ಪನಾಬಿಬಿ ಪಿರ್ದೀಶಾ ಇರ್ವರ ದಂಪತಿಗಳ ಮಗನಾಗಿ ಜನಿಸುತ್ತಾರೆ. ಈ ಸೂಫಿ ಹುಟ್ಟುವ ಸಂದರ್ಭದಲ್ಲಿ ಲಂಗೋಟಿಯನ್ನು ಧರಿಸಿಕೊಂಡು ತಲೆಯ ಮೇಲೆ ಕಿರೀಟವನ್ನು ಇಟ್ಟಕೊಂಡೆ ಜನಿಸಿದನು. ಇದನ್ನು ಕಂಡು 'ಪರಿಸ್ತರು' ತಮ್ಮ ಲೋಕದಲ್ಲಿ ಖುಶಿಯನ್ನು ಹಂಚಿಕೊಂಡು ಆಚರಣೆ ಮಾಡಿಕೊಂಡರೆಂದು ಕಥೆಯಿದೆ.

ಈತನ ಪೂರ್ವಿಕರು ಬಹುಮನಿ ಸುಲ್ತಾನರಲ್ಲಿ ಸೈನಿಕ ದಂಡನಾಯಕರಾಗಿದ್ದು, ಅದರಂತೆ ಈತನ ಚಿಕ್ಕಪ್ಪನು ಕೂಡ ಸೈನಿಕ ಸೇವಕನಾಗಿ ಕಾರ್ಯನಿರ್ವಹಿಸುತ್ತಿದ್ದ. ಇವನ ತಂದೆಯೂ ಸೂಫಿಗಳ ಪ್ರಭಾವಕ್ಕೆ ಒಳಗಾಗಿದ್ದರಿಂದ ಈತನ ಸೂಫಿ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದನು. ಒಂದು ದಿನ ಬಹಮನಿ ಅರಸನು ಫಿರೋಜಾಬಾದ ಪ್ರದೇಶವನ್ನು ವಶಪಡಿಸಿಕೊಂಡು ನಂತರ 'ಫಿರೋಜ್ ಶಹಾ' ಬಹಮನಿಯವರ ಆಸ್ಥಾನದಲ್ಲಿ ತಾಂತ್ರಿಕ ಖಾಸಗಿ ಸಲಹೆಗಾರರಾಗಿ ನೇಮಕವಾಗಿ ಫಿರೋಜಾಬಾದಗೆ ಬಂದು ನೆಲೆಸುತ್ತಾನೆ. ಇದೇ ಸಂದರ್ಭದಲ್ಲಿ ರಾಜನಿಗೆ ಸೂಫಿ ಜನಿಸುವ ವಾಣಿಯೊಂದು ಕೇಳಿ ಬರುತ್ತಿತ್ತು ಎಂಬ ನಂಬಿಕೆಯಿದೆ. ಈತನ ಜನನದ ಬಗ್ಗೆ ಒಂದು ಕಥೆಯಿದೆ ಅದು ಜನಪದ ಹಾಡುಗಾರನಾದ ಹುಸೇನಾ ಭಾಷಾ ಗೋಗಿಯವರು ಹೀಗೆ ಹೇಳುತ್ತಾರೆ:

"ಒಂದು ದಿನ ಬಹಮನಿ ಸುಲ್ತಾನ ರಾಜನಿಗೆ ಅಗೋಚರ ಶರೀರವಾಣಿಯೊಂದು ನಿನ್ನ ನಾಡಿನಲ್ಲಿ ಒಬ್ಬ ಮಹಾನ್ ಸಂತನು ಹುಟ್ಟಿಬರುತ್ತಾನೆ ಆಗ ನಿಮ್ಮ ರಾಜ್ಯವು ಸುಖಮಯದಿಂದ ಕೂಡಿ ಏಳಿಗೆಯಾಗುತ್ತದೆ ಎಂದು ಹೇಳಿತ್ತು. ಕೂಡಲೇ ಆ ರಾಜನು ತನ್ನ ಸೈನಿಕರನ್ನು ಮಗುವಿನ ಹುಡುಕಾಟಕ್ಕೆ ಬೀಡು ಬಿಟ್ಟಿದನು ಒಮ್ಮೆ ಇದ್ದಕ್ಕಿಂದ ಹಾಗೆ ಬಿರುಗಾಳಿ ಶುರುವಾಗಿ ಬಿಡಾರಗಳು ದೂಳಿಪಟವಾಗಿ ದೀಪಗಳು ನಂದಿಹೋದವು. ಆದರೆ ಸಂತನ ತಂದೆಯ ಬಿಡಾರ ಮಾತ್ರ ಉಳಿದು ಅದರಲ್ಲಿನ ದೀಪ ಹಾಗೇ ಉರಿಯುತ್ತಿತ್ತು. ಆತನ ತಂದೆ ಹಾಗೇ ಕುಳಿತುಕೊಂಡು ಜಪಮಣಿಯನ್ನು ಎಣಿಸಿಕೊಳ್ಳುತ್ತಾ ಕುಳಿತ್ತಿದ್ದ. ಇದನ್ನು ಕಂಡು ಸೈನಿಕರು ರಾಜನಿಗೆ ಹೋಗಿ ಸುದ್ದಿ ತಿಳಿಸುತ್ತಾರೆ,

ಇದನ್ನು ಕೇಳಿದ ರಾಜನು ಇದೆ ಪವಾಡ ಪುರುಷನ ಮನೆಯೆಂದು ಅಲ್ಲಿಗೆ ಬರುತ್ತಾನೆ. ಇನ್ನೂ ರಾಜರು ಬರುವ ಸುದ್ಧಿ ತಿಳಿದು ತಂದೆ ತಾಯಿಗಳು ಅಲ್ಲಿಂದ ದೂರ ಹೋಗಲು ನಿರ್ಧರಿಸಿಕೊಂಡು ಬರುತ್ತಿರುತ್ತಾರೆ. ಆಗ ಭೀಮಾನದಿಯು ತುಂಬಿ ಹರಿಯುತ್ತಿತ್ತು ಅದನ್ನು ದಾಟುವುದು ಹೇಗೆ ಎಂದು ಚಿಂತಿಯಲ್ಲಿದ್ದಾಗ ಆಕಾಶದಿಂದ ಅಶರೀರವಾಣಿಯೊಂದು ಕೇಳಿ ಬಂತು. ಅದು ಹೇಳಿದಂತೆ ಜಾ–ನಮಾಜ್(ಬಿಸ್ತಾರ)ವನ್ನು ನದಿಯ ಮೇಲೆ ಹಾಸಿ ಒಂದು ಮೂಲೆಯಲ್ಲಿ ತಂದೆ ಇನ್ನೊಂದು ಮೂಲೆಯಲ್ಲಿ ತಾಯಿ ಹಾಗೂ ಮತ್ತೊಂದು ಮೂಲೆಯಲ್ಲಿ ಚಿಕ್ಕಪ್ಪ ಹೀಗೆ ಮೂವರು ಕುಳಿತುಕೊಂಡು ಹೋಗುತ್ತಿರುತ್ತಾರೆ, ಆಗ ಇನ್ನೊಂದು ಮೂಲೆಯೂ ಮುಳುಗಲು ಪ್ರಾರಂಭಿಸಿತು, ಇದನ್ನು ಕಂಡ ಚಂದಾಹುಸೇನನು ತನ್ನ ತಾಯಿಯ ಉದರದೊಳಗಿದ್ದೆ ತಾಯಿಗೆ ಹೆದರದಿರು, ಆ ತುದಿಗೆ ನಾನು ಕೂಡತ್ತೇನೆಂದು ಭರವಸೆ ಮಾತನ್ನು ನೀಡಿ. ಹೀಗೆ ತುಂಬಿದ ನದಿಯಲ್ಲಿ ತೇಲುತ, ರದ್ದೇವಾಡಗಿಯನ್ನು ತಲುಪಿದರು. ನಂತರ ಅದೇ ಗ್ರಾಮದಲ್ಲಿ ಬಟ್ಟೆಉಟ್ಟುಕೊಂಡೆ ಜನಿಸಿದನು. ಈತನಿಗೆ ತಂದೆ ತಾಯಿಗಳು 'ಜಲಾಲ್ ಮಹ್ಮದಿ ಹುಸೇನ' ಎಂದು ನಾಮಕರಣ ಮಾಡಿದರು.

ಆತನು ಜನಿಸುವ ಸಮಯಕ್ಕೆ ದೇವಲೋಕದಿಂದ ತೊಟ್ಟಿಲೊಂದು ತೂಗುತ್ತಾ ಭೂಮಿಗೆ ಬಂದಿಳಿಯಿತು. ಇದನ್ನು ಕಂಡ ತಂದೆ ತಾಯಿಗಳು ಗಾಬರಿಗೊಂಡರು. ನಂತರ ಆ ತೊಟ್ಟಿಲೊಳಗೆ ಮಗುವನ್ನು ಹಾಕಿದರು. ಆಗ ತೊಟ್ಟಿಲು ಗಾಳಿಯಿಂದ ಆಕಾಶ ತುಂಬೆಲ್ಲ ಹಾರಾಡಿಕೊಂಡು ಮುಂದೆ ಹೋಗುತ್ತಿತ್ತು. ಇದರ ಹಿಂದೆ ತಂದೆ ತಾಯಿಗಳು. ಬೆನ್ನಟ್ಟಿಕೊಂಡು, ಹೋಗುತ್ತಿದ್ದರು. ಮುಂದೆ ಆ ತೊಟ್ಟಿಲು ಒಂದು ಸ್ಥಳದಲ್ಲಿ ಗಿಡಕ್ಕೆ ಸಿಕ್ಕು ತೂಗಿಗೊಂಡು ನಿಂತಿತ್ತು. ಅದು ಮುಂದೆ 'ಗಂವಾರ' ಎಂಬ ಊರಾಗಿ ಇಂದು ಬೆಳೆದಿದೆ. 'ಗಂವಾರ' ಅಂದರೆ ಉರ್ದುವಿನಲ್ಲಿ 'ತೊಟ್ಟಿಲು' ಎಂದರ್ಥ. ಮತ್ತೆ ಅಲ್ಲಿಂದ ಮುಂದೆ ಗಾಳಿಯಲ್ಲಿ ಹಾರಾಡಿಕೊಂಡು ಯಾರು ಇಲ್ಲದ ಅಡವಿಯಲ್ಲಿ ಗಿಡಕಂಟಿಗಳಿಂದ ಕೂಡಿದ ಭಯಾನಕ ಸ್ಥಳಕ್ಕೆ ಬಂದು, ಒಂದು ದೊಡ್ಡದಾದ ಕರಿಜಾಲಿ ಗಿಡಕ್ಕೆ ಕುಳಿತುಕೊಂಡಿತ್ತು. ಅದು ದಿನನಿತ್ಯ ಸುತ್ತಾಕಡೆ ತಿರುಗಾಡಿಕೊಂಡು ಪುನಃ ತೊಟ್ಟಿಲು ಇದೆ ಜಾಗಕ್ಕೆ ಬಂದು ಕುಳಿತುಕೊಳ್ಳುತ್ತಿತ್ತು, ಯಾಕೆಂದರೆ ಇಲ್ಲಿ ತಂಪು ನೆಲ ಆತನಿಗೆ ಇಷ್ಟವಾಯಿತು. ಇದೇ ಮುಂದೆ ಆತನು ವಾಸಿಸುವ ಸ್ಥಳವಾಯ್ತು ಇದೆ ಗೋಗಿ ಊರು" ಎಂದು ತಿಳಿಸುತ್ತಾನೆ.

ಈ ಕಥೆಯೂ ಇಲ್ಲಿಯ ಜನರ ಬಾಯಲ್ಲಿ ರೂಢನಾಮದಂತೆ ಕಂಡುಬರುತ್ತದೆಂದು ಹೇಳಬಹುದು. ಇದನ್ನು ಸೂಕ್ಷ್ಮತೆಯಿಂದ ನೋಡಿದಾಗ ಇವನೊಬ್ಬ ಪವಾಡ ಪುರುಷ ಹಾಗೂ ದೈವಸ್ವರೂಪಿಯಂತೆ ಆತನ ಜನನ ಕಟ್ಟಿಕೊಂಡಿತ್ತು ಎಂದು ಭಾವಿಸಿಕೊಂಡು ಬಂದಿದ್ದಾರೆಂದು ತಿಳಿದುಬರುತ್ತದೆ. ಹಾಗೇ ಒಮ್ಮೆಯೂ ತನ್ನ ೧೫ನೇ ವಯಸ್ಸಿನಲ್ಲಿ ಕಲಬುರಗಿಯ ಖಾಜಾ ಬಂದೇ ನವಾಜರನ್ನು ಬೇಟಿಯಾಗಲು ಹೋಗಿದ್ದರು, ಈತನ ಬರುವಿಕೆಯನ್ನು ಕಂಡು ಬಂದೇ ನವಾಜರವರು ಆತ್ಮೀಯವಾಗಿ ಬರಮಾಡಿಕೊಂಡು ತನ್ನ ಆಸ್ಥಾನದ ಬಳಿಯಲ್ಲಿ ಕುಳ್ಳಿರಿಸಿಕೊಂಡರು. ಇದನ್ನು ನೋಡಿದ ಶಿಷ್ಯಂದಿರು ಆಶ್ಚರ್ಯ ಆಗುವುದನ್ನು ಕಂಡ ಪ್ರೇಮ ಸೂಫಿಯೂ ಇವರು

ಮಹ್ಮದ್ ಪೈಗಂಬರನ ಪ್ರತೀಕದಂತೆ ಇದ್ದಾರೆಂದು ವಿವರಿಸುತ್ತಾರೆ. ಮತ್ತು 'ಖಮರುಲ್ ಹಜ'(ಭೂಮಿಯ ಚಂದ್ರ) ಎಂಬ ಬಿರುದನ್ನು ನೀಡುತ್ತಾರೆ ಎಂದು ತಿಳಿದುಬರುತ್ತದೆ.

ಈತನ ವಿವಾಹವು ಹಜರತ್ ಬೀಬಿ ಮಗ್ದುಮ್ ಜಹಾರೊಂದಿಗೆ ಆಗುತ್ತದೆ. ಆಕೆಯೂ ಹಜರತ್ ಸೂಫಿಸರ್ಮಸ್ಥ ರಹೇಮತುಲಾಲೆ–ಕಿ–ನವಾಸಿ(ಮಗಳ ಮಗಳು), ಹಜರತ್ ಶೇಕ್ ಕಾಕುರವರ ಮೊದಲ ಮಗಳು ಇವರಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರೆಂದು ತಿಳಿಯುತ್ತದೆ.

೧ ಸೈಯದ್ ಷಾ ನೂರ್ ಆಲಮ್(ಗೋಗಿ)

೨ ಸೈಯದ್ ಷಾ ಶೇಮ್ಸ್ ಆಲಮ್(ರಾಯಚೂರ)

೩ ಸೈಯದ್ ಷಾ ಅಬ್ದುಲ್ ರಹಿಮ್ ಹುಸೇನಿ(ಬೀದರ)

೪ ಸೈಯದ್ ಷಾ ಮಸ್ತಾಲ ಹುಸೇನಿ(ಬೀದರ)

ಇವರಲ್ಲಿ ಗೋಗಿಯ ಸೈಯದ್ ಷಾ ನೂರ್ ಆಲಮ್‌ನನ್ನು ಹೊರತುಪಡಿಸಿ ಉಳಿದ ೩ ಜನರು ಸೂಫಿಸಂತರಾಗುತ್ತಾರೆ. ನೂರ್ ಆಲಮ್ ಮಾತ್ರ ತಂದೆಯ ನಂತರ ಉತ್ತರಾಧಿಕಾರತ್ವವನ್ನು ಸ್ವೀಕರಿಸುತ್ತಾರೆ. ಮುಂದೆ ಚಂದಾಹುಸೇನಿಯವರಿಗೆ ಖಿಲಾಪತ್(ಉತ್ತರಾಧಿಕಾರತ್ವ)ವನ್ನು ಹಜರತ್ ಖಾಜಾ ಆರೀಫ್ ಬಿಲ್ಲಾ ಜೀಯಾ–ಹಜರತ್ ಸೈದುದ್ದಿನ್ ಫೀರ್ ಜನ್ನಜಾನಿ–ಹಜರತ್ ಖಾಜಾ ಹಸ್ರಫ್ ಜಹಾಂಗಿರ್ ಸುಮ್ನಾನಿ ಹೀಗೆ ೨೪ ಖಿಲಾಪತ್‌ಗಳ ಮೂಲಕ ಸಾಗಿ ಮಹ್ಮದ್ ಪೈಗಂಬರ್‌ಗೆ ಸಮಾನವಾಗಿ ತಲುಪುತ್ತದೆ.

ಹಾಗೇ ಯೂಸೂಫ್ ಆದಿಲ್ ಖಾನನು ಚಂದಾಹುಸೇನಿಯ ದರ್ಶನದ ಪೂರ್ವದಲ್ಲಿ ಇವರಿಗೆ ಹೆಚ್ಚಾಗಿ ಅಪಜಯಗಳು ಸಂಭವಿಸುತ್ತಿದ್ದವು. ಇವರ ಆಶೀರ್ವಾದ ಪಡೆದ ನಂತರ ಜಯಗಳು ಲಭಿಸಲು ಪ್ರಾರಂಭಿಸಿದವು. ಇದರಿಂದ ಚಂದಾಹುಸೇನಿಯನ್ನು ಗುರುವನ್ನಾಗಿ ಸ್ವೀಕರಿಸಿ ಅವರಿಗೆ ಸಂಪತ್ತನ್ನು ನೀಡಲು ಮುಂದಾದ ಖಾನನಿಗೆ ನಿರಾಶೆ ಕಾದಿತ್ತು, ಅದನ್ನು ಸ್ವೀಕರಿಸದೆ ಮರಳಿ ಕಳುಹಿಸಿದರು. ಬಿಜಾಪುರದ ಆದಿಲ್ ಷಾಗಳು ಮರಣ ನಂತರ ಗೋಗಿಯಲ್ಲಿ ಮಣ್ಣು ಮಾಡಬೇಕೆಂದು ಕರಾರೊಂದನ್ನು ರಚನೆ ಮಾಡಿಕೊಂಡರು. ಇದರಂತೆ ಷಾ ಕುಟುಂಬದ ಸದಸ್ಯರ ಅಂತಿಮ ಕಾರ್ಯಗಳು ಗೋಗಿಯಲ್ಲಿ ನಡೆದಿವೆ. ಯಾಕೆಂದರೆ ಸಂತನಾದ ಚಂದಾಹುಸೇನಿಯ ಬಳಿಯಲ್ಲಿ ಮಣ್ಣು ಮಾಡುವುದರಿಂದ 'ಜನ್ನತ್'(ಸ್ವರ್ಗ) ಪ್ರಾಪ್ತಿಯಾಗುತ್ತದೆಂಬ ನಂಬಿಕೆಯಿಂದ ಈ ತಿರ್ಮಾನವನ್ನು ಕೈಗೊಳ್ಳುತ್ತಾರೆ. ನಂತರ ಈ ಸೂಫಿಯೂ ಹಿಜರಿ ೮೫೮(ಕ್ರಿ.ಶ ೧೫೮೧)ರಲ್ಲಿ ತಮ್ಮ ೬೫ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಆಗ ಯೂಸೂಫ್ ಆದಿಲ್ ಷಾನ ಕಾಲದಲ್ಲಿ ದರ್ಗಾದ ಕಟ್ಟಡ ಕಾರ್ಯವನ್ನು ಪ್ರಾರಂಭಿಸಿ, ಇಬ್ರಾಹಿಂ ಆದಿಲ್ ಷಾ ನ ಕಾಲದಲ್ಲಿ ಕಟ್ಟಡ ಕಾರ್ಯವನ್ನು ಪೂರ್ಣಗೊಳಿಸುತ್ತಾರೆ. ಈತನ 'ಹತ ಶಬಾನ್'ರಂದು ಪ್ರತಿ ವರ್ಷ ಉರುಷ ನಡೆಯುತ್ತದೆ. ಇದು ಮೊದಲು ಪ್ರಾರಂಭಿಸಿದ್ದು ಯೂಸೂಫ್ ಆದಿಲ್ ಷಾನಿಂದ ಹಿಡಿದು ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ.

ಈ ಉರುಷ ನಡೆಯುವ ಮುಂಚೆ ನಗಾರಿ ಬಡಿಯುತ್ತಾರೆ, ೧೧ದಿನಗಳು ಕಾಲ ಪೂಜೆ ನಡೆಯುತ್ತದೆ. ಆ ಸಮಯದಲ್ಲಿ ಎಲ್ಲರೂ ನಿರಾಹಾರಿಗಳಾಗಿರುತ್ತಾರೆ, ನೀರು ಕುಡಿಯದೆ ರಾತ್ರಿ ಮಾತ್ರ ಊಟ ಮಾಡುವುದು ಇದೆ. ಈ ದಿನಗಳಲ್ಲಿ ಪ್ರತಿ ನಿತ್ಯವು ತಲೆ ಸ್ನಾನದ ನಂತರ ಸಕ್ಕರೆ ತೆಗೆದುಕೊಂಡು ದರ್ಗಾಕ್ಕೆ ಹೋಗುತ್ತಾರೆ. ಅಮವಾಸ್ಯೆಯ ನಂತರ ಚಂದ್ರನ ದರ್ಶನವಾದ ೧೧ದಿನಕ್ಕೆ ಉರುಸು ಪ್ರಾರಂಭವಾಗುತ್ತದೆ. ಇಂದು ನಡೆಯುತ್ತಿರುವ ಉರುಸು ೫೭೪ನೇ ಜಾತ್ರೆ(ಉರುಸು) ಉರುಸುಗೂ ಮೊದಲು ಗುಡಿಯನ್ನು ಸ್ವಚ್ಛಗೊಳಿಸುತ್ತಾರೆ. ದೀಪಾಲಂಕಾರಾರದಿಂದ ಕಂಗೊಳಿಸುವಂತೆ ಭಕ್ತಾದಿಗಳನ್ನು ಕೈಬೀಸಿ ಕರೆಯುತ್ತದೆ. ಹಾಗೇ ಉರುಸಿನ ಸಮಯದಲ್ಲಿ ಊರಲ್ಲಿ ಭಕ್ತಸಾಗರವೇ ಸೇರಿರುತ್ತದೆ, "ದೇಶದ ಮೂಲೆ ಮೂಲೆಗಳಿಂದ ಅವನ ಭಕ್ತರು ಬಂದು ಇಲ್ಲಿ ತಂಗುತ್ತಾರೆ. ಇಡಿ ರಾತ್ರಿ ಡೊಳ್ಳು ಕುಣಿತ ಕೋಲಾಟ ಕುದುರೆ ಮೆರವಣಿಗೆ ಹೀಗೆ ಹಲವಾರು ವಿಶೇಷತೆಯಿಂದ ಮೆರವಣಿಗೆಯನ್ನು ಬೆಳಗ್ಗೆ ಸರಿಯಾಗಿ ಐದು ಗಂಟೆಗೆ ದರಗಾ ತಲುಪುತ್ತದೆ. ನಂತರ 'ಗಂಧಾ' ನೇರೆವೇರುತ್ತದೆ. ಎರಡನೇ ದಿನ ಮುಸಲ್ಮಾನ ಬಳಗದವರು ಹಾಗೂ ಹಿಂದೂಗಳು ಕೂಡಿಕೊಂಡು ನೈವೇದ್ಯವನ್ನು ಸಲ್ಲಿಸುತ್ತಾರೆ. ಮೂರನೆ ದಿನ ದೀಪೋತ್ಸವ ಇರುತ್ತದೆ, ನಾಲ್ಕನೇ ದಿನ ಕಾರ್ಯ ಮುರಿಯುತ್ತಾರೆ."[೩೯]

ಅಂದಿನಿಂದ ಇಂದಿಗೂ ದರ್ಗಾವನ್ನು ಚಂದಾಸಾಹೇಬನ ವಂಶಸ್ಥರು ನೋಡಿಕೊಂಡು ಹೋಗುತ್ತಿದ್ದಾರೆ, ಆದ್ದರಿಂದ ಈ ದರ್ಗಾದ ಎಲ್ಲ ಕಾರ್ಯಕ್ರಮಗಳನ್ನು ಸಂಸ್ಥಾನಿಕರಾದ (ವಾರಸ್ಥಾರರು) ಸೈಯದ್ ಮಹ್ಮದ್ ಮಹ್ಮದೂಲ್ ಹುಸೇನಿ ಬಿನ್ ಸೈಯದ್ ಷಾ ಶಮ್ಸ್-ಎ-ಆಲಮ್ ಹುಸೇನಿ, ಸಜ್ಜಾದ ನಶಿಂ ಬುಜುರು ಬರ್ಗಾಯ್ ಜಲಾಲಿಯ ಗೋಗಿ ಷರೀಫ್ ಎಂಬ ೨೦ನೇ ಪೀಠಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

೪.೫ ನಾಗನಟಗಿ ಪರಮಾನಂದ ಪ್ರಭು :

ನಾಗನಟಗಿಯೂ ಶಹಾಪುರ ನಗರದಿಂದ ೧೫ಕಿ.ಮೀ ದೂರದಲ್ಲಿ ಕಂಡುಬರುವ ಒಂದು ಹಳ್ಳಿ. ಈ ಗ್ರಾಮದಲ್ಲಿ ಮೊದಲು ಶಿವದೇವಾಲಯವಿತ್ತು, ಅನ್ನುವುದಕ್ಕೆ ಇಲ್ಲಿ ದೊರಕಿರುವ ಗಜಲಕ್ಷ್ಮೀ ಶಿಲ್ಪವೇ ಕಾರಣ ಹಾಗೂ ಇಲ್ಲಿಯ ಜನರ ನಂಬಿಕೆಯಂತೆ ಈ ಊರು ನಾಗದೇವತೆಯಿಂದ ಇದಕ್ಕೆ ಮೊದಲು ನಾಗರಹಟ್ಟಿ ಅಂತ ಕರೆಯುತ್ತಿದ್ದರು. ನಂತರ ದಿನಗಳಲ್ಲಿ ಜನರ ಬಾಯಿಂದ ಬಾಯಿಗೆ ನಾಗನಟಗಿ ಎಂದು ರೂಪಾಂತರಗೊಂಡಿತು. ಅಂದಿನಿಂದ ಇಂದಿನವರೆಗೂ ಈ ಊರಿಗೆ ನಾಗನಟಗಿ ಅಂತಲೇ ಕರೆಯುತ್ತಿದ್ದಾರೆಂದು, ಆ ಊರಿನ ಹಿರಿಕರು ತಿಳಿಸುತ್ತಾರೆ. ಇಲ್ಲಿಂದ ಪಶ್ಚಿಮ ಅಭಿಮುಖವಾಗಿ ಸುಮಾರು ೩ಕಿ.ಮೀ ದೂರದಲ್ಲಿ 'ಪರಮಾನಂದ ಪ್ರಭು ಗುಡಿ' ಬರುತ್ತದೆ. ಇದು ಬಹುಮುಖ್ಯ ಅವಧೂತರ ಸಂಕಲ್ಪದಲ್ಲಿ ಆಚರಣೆಗಳು ನಡೆಯುತ್ತವೆ.

ಇವನು ತಮಿಳುನಾಡು ಶಿವಕಂಚಿಯಿಂದ ಬಂದವನೆಂದು ತಿಳಿಯುತ್ತದೆ. ಈತನಿಗೆ ಆತನ ತಂದೆ-ತಾಯಿಗಳು ಮದುವೆ ಮಾಡಲು ಇಚ್ಛಿಸಿದ್ದಾಗ ಅದನ್ನು ಧಿಕ್ಕರಿಸಿ ಅಲ್ಲಿಂದ ಸಂಚರಿಸಿಕೊಳ್ಳುತ್ತಾ

ಆಂಧ್ರಪ್ರದೇಶದ ಕಂಚಿ-ಕಾಮಾಕ್ಷಿ ಕಡೆ ಬರುತ್ತಾನೆ. ನಂತರ ರಾಯಚೂರಿನ ಧೊಂಗಾರಾಮಪೂರಕ್ಕೆ ಬಂದು ಕೆಲವು ದಿನ ಪವಾಡ ಮಾಡಿ ಅಲ್ಲಿಯೇ ಬದುಕಿ ಮುಂದಿನ ದಿನಗಳನ್ನು ದೋರನಹಳ್ಳಿ, ಸಗರ, ರಸ್ತಾಪೂರ, ಯಲಗೊಡ, ಅರಿಕೇರಿ, ನಾಯ್ಕಲ್, ಹೆಬ್ಬಾಳ ಹಾಗೂ ನಾಗನಟಗಿ ಹೀಗೆ ಅನೇಕ ಕಡೆ ಸಂಚರಿಸಿಕೊಂಡು ತನ್ನ ಕೊನೆ ಸಮಯವನ್ನು ಸಿಂದಗಿ ಹತ್ತಿರ ಚಾಂದಕೋಟೆಯಲ್ಲಿ ಐಕ್ಯನಾದ(ಕೊಲೆಯಾದ)ನೆಂದು ಇಲ್ಲಿಯ ಜನರ ನಂಬಿಕೆಯಾಗಿದೆ.

ಈ ಪ್ರಭುವು ಡಿಗ್ಗಿ ಸಂಗಮನಾಥ ಗುರು ಹಾಗೂ ಅಮರಕಲ್ಯಾಣ ಸ್ಥಾಪಿಸಿದ, ನಾಮಕರಣ ಮಾಡಿದ ದಿಗಂಬರ ಸ್ವಾಮಿ ಡಕ್ಕಲಿಗ ಕೆಂಚಯ್ಯನ ಶಿಷ್ಯನೆಂದು ಈ ಭಾಗದಲ್ಲಿ ಭಾವಿಸಿಕೊಂಡು ಜನ ಸಮುದಾಯದಲ್ಲಿ ದೈವವಾಗಿ ಪೂಜಿಸುತ್ತಾರೆ. ಆತನ ಹೆಸರಿನ ಮೇಲೆ ದೇವಸ್ಥಾನ, ಜಾತ್ರೆ ಆಚರಣೆ ಉತ್ಸವಗಳಲ್ಲಿ ಮೂರ್ತರೂಪ ಪಡೆದುಕೊಂಡಿರುವುದನ್ನು ಜಾನಪದ ಆಕರಗಳಿಂದ ಗೊತ್ತಾಗುತ್ತದೆ ಆದರೆ ಸಾಹಿತ್ಯದ ದೃಷ್ಟಿಯಿಂದ ಈತನ ಯಾವುದೇ ರಚನೆಗಳು ದೊರಕುವುದಿಲ್ಲ. ಇವನು ಒಂದು ರೀತಿಯಲ್ಲಿ ಮರುಳಶಂಕರನನ್ನು ಹೋಲುವ ವ್ಯಕ್ತಿತ್ವದಂತೆ ಕಂಡುಬರುತ್ತದೆ. ಕೊಡೆಕಲ್ ಬಸವಣ್ಣ ಮತ್ತು ಮಂಟೆಸ್ವಾಮಿಯವರು ಇವನ ವ್ಯಕ್ತಿತ್ವ ಸಾಧನೆ ಸಿದ್ಧಿಗಳನ್ನು ಉಲ್ಲೇಖಿಸಿದ್ದು ಅವರ ಕೃತಿಗಳಿಂದ ತಿಳಿಯುತ್ತದೆ. ಅದನ್ನು ಬಿಟ್ಟರೆ ಜನಪದರ ಆಚರಣೆಯಲ್ಲಿ ಕೇವಲ ಅಮೂರ್ತಸ್ವರೂಪತೆ ಕಂಡುಬರುತ್ತದೆ ಎಂದು ಹೇಳಬಹುದು. ಈತನ ಹಿಂದೆ ಯಾವಾಗಲೂ ಸಿದ್ದಪ್ಪ ಇರುತ್ತಿದ್ದನೆಂದು ನಂಬಿಕೆ. ನಂತರ ಹೆಬ್ಬಾಳ ಹಾಗೂ ನಾಗನಟಗಿಯಲ್ಲಿ ನೆಲೆ ನಿಂತಾಗ ಡಿಗ್ಗಿ ಸಂಗಮನಾಥ, ಖಾದರಲಿಂಗ ಹಾಗೂ ಬರಗಾಲಪ್ಪ ಎಂಬ ಮೂವರು ಶಿಷ್ಯರು ಜೊತೆಯಲ್ಲಿದ್ದರೆಂದು ಒಂದು ನಂಬಿಕೆ. ಇವರು ಸಾಹಿತ್ಯ ರಚನೆ ಮಾಡದಿದ್ದರೂ ಪರವಾಗಿಲ್ಲ. ಯಾಕೆಂದರೆ, ಅಮರಕಲ್ಯಾಣದ ಸಂತರ ಪಥ ಆರೂಢ ಸಂಗಮೇಶ್ವರನಿಗೆ ಈತನು ಮಾಡಿರಬಹುದಾದ ಬೋಧೆ, ಸಾಹಿತ್ಯ ತನ್ನ ಕಾಲದ ಸಕಲರಿಗೆ ಬೋಧೆ ನೀಡಿದ ಅಪ್ರತಿಮ ಯೋಗಿ ಅನ್ನುವುದರಲ್ಲಿ ಸಂಶಯವಿಲ್ಲ.

ಈತನಲ್ಲಿ ನಂಬಿಕೆಯಿಟ್ಟ ಈ ಊರಿನ ಜನರು ಮಳೆರಾಯನನ್ನು ಧರೆಗೆ ಕರೆಯಿಸಿಕೊಳ್ಳಲು ಡೊಳ್ಳು ಬಾರಿಸಿಕೊಂಡು, ಹಲಗಗಳು ಹಾಕಿಕೊಂಡು ಹಾಗೂ ಕಂಬಳಿ ಧರಿಸಿಕೊಂಡು ಆ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸಿದ ನಂತರ ಕಲ್ಲಿನ ಹಾಸುಬಂಡೆಯೇ ತಮ್ಮ ಊಟ ಮಾಡುವ ಗಂಗಾಳವನ್ನಾಗಿ ಮಾಡಿಕೊಂಡು ನುಚ್ಚು ಮತ್ತು ಮಜ್ಜಿಗೆಯನ್ನು ಕಲಿಸಿಕೊಂಡು ಪ್ರಸಾದ ಸ್ವೀಕರಿಸುತ್ತಾರೆ. ಹಾಗೇ ಬಂದರೆ ನಮ್ಮೂರಿಗೆ ಮಳೆ ಆಗುತ್ತದೆಂಬ ನಂಬಿಕೆಯಾಗಿದೆ. ಇಲ್ಲಿ ಎಲ್ಲಾ ಜನ ಸಮುದಾಯದವರು ಕೂಡಿಕೊಂಡು ಪ್ರಸಾದ ಸ್ವೀಕರಿಸುವುದು ವಿಶೇಷವಾಗಿದೆ.

ಕೊನೆಯ ಟಿಪ್ಪಣಿಗಳು :

೧ ಚರಿತ್ರೆ ಕಥನ, ಡಾ.ಕೆ.ಮೋಹನಕೃಷ್ಣ ರೈ, ಪುಟ-೩

೨ ಅಮರಕಲ್ಯಾಣ, ಡಾ.ಶಿವಾನಂದ ವಿರಕ್ತಮಠ, ಪುಟ-೨, ೩

೩ ಗುಂಡ ಬಸವೇಶ್ವರ ಚರಿತ್ರೆ(ಸಂ), ಡಾ.ಎಂ.ಎಂ.ಕಲಬುರಗಿ, ಸಂಗಪ್ಪಯ್ಯ ಸ್ವಾಮಿ, ಪುಟ-೫೭

೪ ಶಹಾಪುರ ಪರಿಸರದ ಶಾಸನಗಳು ಮತ್ತು ದೇವಾಲಯಗಳು, ಸಿದ್ದಣ್ಣ ಎಸ್.ಕುಂಬಾರ, ಪುಟ-೭೩, ೭೪

೫ ಅಮರಕಲ್ಯಾಣ, ಡಾ.ಶಿವಾನಂದ ವಿರಕ್ತಮಠ, ಪುಟ-೩೮

೬ ನಂದಿಯಾಗಮಲೀಲೆ(ಸಂ), ಆಯ್.ಜಿ.ಕೊಡೇಕಲ್ಮಠ, ಪುಟ-೧೭೯

೭ ಅಮರಕಲ್ಯಾಣ, ಡಾ.ಶಿವಾನಂದ ವಿರಕ್ತಮಠ, ಪುಟ-೩೯

೮ ವಚನ ಸ್ವರವಚನ(ಸಂ), ಡಾ.ಶಿವಾನಂದ ವಿರಕ್ತಮಠ, ಪುಟ-೧೬೧

೯ ಅದೇ ಪುಟ-೬೭

೧೦ ಅದೇ ಪುಟ-೯೮

೧೧ ಅದೇ ಪುಟ-೭೨

೧೨ ಅದೇ ಪುಟ-೧೦೮

೧೩ ಅದೇ ಪುಟ-೧೧೯

೧೪ ಅದೇ ಪುಟ-೧೨೬

೧೫ ಅಮರಕಲ್ಯಾಣ : ಸಾಂಸ್ಕೃತಿಕ ಅಧ್ಯಯನ, ಅನುಪಮಾ ವೆಂ. ಆದಾಪುರ, ಪುಟ-೨೨

೧೬ ವಚನ ಸ್ವರವಚನ(ಸಂ), ಡಾ.ಶಿವಾನಂದ ವಿರಕ್ತಮಠ, ಪುಟ-೧೩೪

೧೭ ಅದೇ ಪುಟ-೧೫೦

೧೮ ಅದೇ ಪುಟ-೩೨೦

೧೯ ಅದೇ ಪುಟ-೩೨೦

೨೦ ಅದೇ ಪುಟ-೪೧೯

೨೧ ಕೊಡೇಕಲ್ ವಚನವಾಕ್ಯ(ಸಂ), ಡಾ.ಬಸವಲಿಂಗ ಸೊಪ್ಪಿಮಠ, ಪುಟ-೪೬೫

೨೨ ಅದೇ ಪುಟ-೪೮೯

೨೩ ಅದೇ ಪುಟ-೫೧೨

೨೪ ಅಮರಕಲ್ಯಾಣ : ಸಾಂಸ್ಕೃತಿಕ ಅಧ್ಯಯನ, ಅನುಪಮಾ ವೆಂ. ಆದಾಪುರ, ಪುಟ-೨೫

೨೫ ಕೊಡೇಕಲ್ ವಚನವಾಕ್ಯ(ಸಂ), ಡಾ.ಬಸವಲಿಂಗ ಸೊಪ್ಪಿಮಠ, ಪುಟ-೫೧೩

೨೬ ಅದೇ ಪುಟ-೫೧೩

೨೭ ಅದೇ ಪುಟ-೧೭

೨೮ ನಂದಿಯಾಗಮಲೀಲೆ(ಸಂ), ಆಯ್.ಜಿ.ಕೊಡೇಕಲ್ಮಠ, ಪುಟ-೧೭೮

೨೯ ಅದೇ ಪುಟ-೧೭೭

೩೦ ಅದೇ ಪುಟ-೨೨೩

೩೧ ಅದೇ ಪುಟ-೨೨೩

೩೨ ಅದೇ ಪುಟ-೨೭೨

೩೩ ಅದೇ ಪುಟ-೨೭೨

೩೪ ಗುಂಡ ಬಸವೇಶ್ವರ ಚರಿತ್ರೆ(ಸಂ), ಡಾ.ಎಂ.ಎಂ.ಕಲಬುರಗಿ, ಸಂಗಪ್ಪಯ್ಯ ಸ್ವಾಮಿ, ಪುಟ-೯

೩೫ ಅದೇ ಪುಟ-೨೭

೩೬ ಅದೇ ಪುಟ-೫೭

೩೭ ಅದೇ ಪುಟ-೫೮

೩೮ ಕೊಡೇಕಲ್ ಬಸವಣ್ಣ : ಒಂದು ಅಧ್ಯಯನ, ಡಾ.ಬಸವಲಿಂಗ ಸೊಪ್ಪಿಮಠ, ಪುಟ-೨೩೪

೩೯ ದರಗಾ(ಕಟ್ಟುಗ), ಬಸವರಾಜ ಕೋಡಗುಂಟಿ, ಪುಟ-೨೫

ಅಧ್ಯಾಯ : ಐದು

ಸಾಂಸ್ಕೃತಿಕ ಮೌಲ್ಯವಿವೇಚನೆ :

ಹದಿಮೂರು–ಹದಿನಾಲ್ಕನೇ ಶತಮಾನದಲ್ಲಿ ಸೂಫಿ–ಸಂತರ ಸಾಂಸ್ಕೃತಿಕ ಹಾಗೂ ಅವರ ಸಾಮಾಜಿಕ ಪರಿವರ್ತನೆಯನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ 'ರಾಜಕೀಯ ದೃಷ್ಟಿ ಕೋನಗಳು' ಸವಾಲುಗಳಾಗಿ ಕಂಡುಬರುತ್ತದೆ. ಯಾಕೆಂದರೆ, ಇವೆರಡರ ಕಾಲಘಟ್ಟದಲ್ಲಿ ಪ್ರಭುತ್ವ ಅರಸರು ತಮ್ಮ ಸಾಮ್ರಾಜ್ಯವನ್ನು ವಿಸ್ತರಣೆ ಮಾಡಿಕೊಳ್ಳುವುದಕ್ಕಾಗಿ ನಡೆದ ಯುದ್ದಗಳು ಮಹತ್ವ ಪೂರ್ಣವಾಗಿ ಗೋಚರಿಸುತ್ತವೆ. ಅವು ಒಂದು ರೀತಿಯಲ್ಲಿ ಹಿಂದು – ಮುಸ್ಲಿಮರ ಮಧ್ಯ ನಡೆದ ಯುದ್ಧ ಸಂಘರ್ಷದಂತೆ ನಮ್ಮ ಚರಿತ್ರೆಕಾರರು ಮಧ್ಯಕಾಲಿನ ಭಾರತ ಇತಿಹಾಸವನ್ನು ಚಿತ್ರಿಸಿ ಒಪ್ಪಿಸಿದಂತೆ ತೋರುತ್ತದೆ. ಇದರಿಂದ ಇವೆರಡರ ಕೊಡುಕೊಳ್ಳುವಿಕೆಯ ಸಾಂಸ್ಕೃತಿಕ ಅಂತಃಕರಣದ ಬದ್ಧತೆಯನ್ನು ಮರೆತುಕೊಂಡು ಮತೀಯ ಭಾವನೆಗಳಿಗೆ ಒಳಗಾಗುವಂತೆ ಮಾಡಿವೆ. ಇದೇ ಸಂದರ್ಭದಲ್ಲಿ ಭಕ್ತಿಯ ಪ್ರಧಾನತೆಯೊಂದಿಗೆ ಹುಟ್ಟಿಕೊಂಡು ತಮ್ಮ ಅನುಭಾವದ ಚಿಂತನೆಗಳನ್ನು ಭಿತ್ತಿಸಿಕೊಂಡು ಬಂದಿರುವುದು ಹಾಗೂ ರಾಜಾಶ್ರಯವನ್ನು ಒಪ್ಪಿಕೊಂಡ ಕೆಲವು ಸೂಫಿಗಳು ಸಂತರು ಇರುವುದನ್ನು ಚಾರಿತ್ರಿಕ ದಾಖಲೆಯಿಂದ ತಿಳಿದು ಬರುತ್ತದೆ. ಈ ಕಾಲದ ಪಂಥವನ್ನು ಅರ್ಥವನ್ನು ಮಾಡಿಕೊಳ್ಳದೆ ಒಂದು ಮತೀಯ ರಾಜಕಾರಣಕ್ಕೆ ತುತ್ತಾಗಿದ್ದಂತೆ ತೋರುತ್ತದೆ. ಈ ಕಾರಣದಿಂದ ಸೂಫಿಸಂತರು ಕಟ್ಟಿಕೊಟ್ಟಿರುವ ಸಾಂಸ್ಕೃತಿಕ ಸಂಬಂಧಗಳು ಮತ್ತು ಜನ ಸಮುದಾಯಗಳ ನಂಬಿಕೆಗಳು ಪಲ್ಲಟಗೊಳ್ಳತ್ತಲೇ ಬಂದಿವೆ. ಇದರಿಂದ ಸಾಮರಸ್ಯಕ್ಕೆ ತೊಡಕು ಉಂಟಾಗಿ ನಮ್ಮಲ್ಲಿ ದ್ವೇಷ ಭಾವನೆಗಳು ಉದಯಿಸುವಂತೆ ಚರಿತ್ರೆಕಾರರು ಒಪ್ಪಿಸಿದ್ದು ತಿಳಿಯುತ್ತದೆ.

ಇಂತಹ ಚರಿತ್ರೆಕಾರರಿಗೆ ಆ ಕಾಲದ ಸೂಫಿ–ಸಂತರ ಸಂಬಂಧಗಳು ಅವರು ಕೈಗೊಂಡ ಧಾರ್ಮಿಕತೆ, ನೈತಿಕತೆ, ಸಾಮಾಜಿಕ, ಭಾಷೆ–ಸಾಹಿತ್ಯ–ಸಂಗೀತ ಹಾಗೂ ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಸೂಕ್ಷ್ಮತೆಯಿಂದ ನೋಡುವ ಕಣ್ಣುಗಳು ಇರಲಿಲ್ಲ. ಆ ಕಾರಣದಿಂದ ಸೂಫಿ–ಸಂತರ ಜಾತ್ರೆಗಳು ಮತ್ತು ಉತ್ಸವಗಳಲ್ಲಿ ಒಂದು ಧರ್ಮಿಯರ ಆಚರಣೆಯಂತೆ ಧ್ವನಿ ಕೇಳಿ ಬರುತ್ತಿರುತ್ತವೆ. ಆದರೆ ಇದಕ್ಕೂ ಭಿನ್ನಸ್ವರೂಪಕ್ಕೆ ನಾಂದಿಯಾಗಿದ್ದು ಎಂದು ಅವರು ನೀಡಿದ ಮೌಲ್ಯಗಳಿಂದ ತಿಳಿದು ಬರುತ್ತದೆ.

ಹಿಂದೂ–ಮುಸ್ಲಿಂ ಭಾವೈಕ್ಯತೆಯನ್ನು ಹೊಂದಿ ತತ್ವ ಆಚರಣೆಗಳಲ್ಲಿ ಪರಸ್ಪರ ಒಂದು ಎಂಬ ಮನೋಭಾವನೆ ಉಂಟಾಗುವಂತೆ ನೋಡಿಕೊಂಡಿರುವುದು. ಯಾವುದೇ ಜಾತಿಯವರಿರಲಿ ನಡೆ, ನುಡಿ, ನೋಟದಿಂದ ಪರಿಶುದ್ಧನು ಆಗಿರಬೇಕೆಂಬುದು ಆಗಿದೆ. ಅದರಂತೆ ಈ ಅಧ್ಯಯನಕ್ಕೆ ಒಳಪಡಿಸಿದ ಸೂಫಿಸಂತರ ಸಾಂಸ್ಕೃತಿಕ ಮೌಲ್ಯಗಳು ಕೂಡ ಸಾಮಾಜಿಕ ಆಶಯಕ್ಕೆ ಪೂರಕವಾಗಿ ಕಾಣುತ್ತವೆ.

ಶಹಾಪುರ ತಾಲೂಕು ಚಾರಿತ್ರಿಕವಾಗಿ ಅಧ್ಯಾತ್ಮಿಕವಾಗಿ, ಹಾಗೂ ಸಾಹಿತ್ಯಕವಾಗಿ ಮಹತ್ವ

ಪಡೆದಿದೆ. ಹಲವು ಸೂಫಿ-ಸಂತರು ಇಲ್ಲಿ ಆಗಿಹೋಗಿದ್ದಾರೆ. ಅದೇರೀತಿ ಇದು ಅನೇಕ ಧಾರ್ಮಿಕ ಶ್ರದ್ಧೆ ನಂಬಿಕೆಗಳ ನೆಲೆವೀಡಾಗಿದೆ. ಹೀಗಾಗಿ ಇಲ್ಲಿ ಹಲವು ಐತಿಹಾಸಿಕ ಸ್ಮಾರಕಗಳು, ಗುಡಿ-ಗುಂಡಾರಗಳ, ಜೊತೆ ಜೊತೆಗೆ ಹಲವು ಭವ್ಯ ಮಸೀದಿ-ದರ್ಗಾಗಳನ್ನು ಕಾಣಬಹುದು.

ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಇಲ್ಲಿ ಬಂದು ನೆಲೆಸಿ, ಬಾಳಿ ಇಲ್ಲಿಯ ಧಾರ್ಮಿಕ ಸಹಬಾಳ್ವೆಯ ಜೀವನ ಹಾಗೂ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಅನೇಕ ಸೂಫಿ ಸಂತರು ಕಂಡುಬರುತ್ತಾರೆ. ಅವರಲ್ಲಿ ಕೆಲವರು ಉತ್ತಮ ವಾಗ್ಮಿಗಳು ಚಿಂತಕರು ಹಾಗೂ ಕವಿಸಾಹಿತಿಗಳಾಗಿದ್ದು ಶ್ರೇಷ್ಠ ಗ್ರಂಥ ರಚನೆ ಮಾಡಿ ಇಲ್ಲಿ ಮಣ್ಣಲ್ಲಿ ಮಣ್ಣಾಗಿ ಹೋಗಿರುತ್ತಾರೆ. ಆ ಸೂಫಿ ಸಂತರು ಈ ಲೋಕವನ್ನು ತ್ಯಜಿಸಿದ್ದರೂ. ಅವರು ರಚಿಸಿದ ಮಹಾನ್ ಕೃತಿಗಳು ಎಲ್ಲೊ ಒಂದೆಡೆ ಕಾಲಗರ್ಭದಲ್ಲಿ ಲುಪ್ತವಾಗಿದ್ದು, ಮತ್ತೊಂದೆಡೆ ನಮ್ಮ ಅನಾದರ ಹಾಗೂ ಕೃತಿ ರಚನೆ ಮಾಡಿರುವ ಭಾಷೆಯನ್ನು ಅರಿಯದೇ ಇರುವುದು ನಮ್ಮ ಅಸಹಾಯಕತೆ. ಅವರ ಸಾಹಿತ್ಯ ಓದುವದಂತೂ ದೂರದ ಮಾತು, ಅವುಗಳನ್ನು ತಿಳಿದುಕೊಳ್ಳಲು ನಮ್ಮವರಿಗೆ ವಿಪರ್ಯಾಸದ ಸಂಗತಿಯಾಗಿದೆ. ಸಂಶೋಧನೆಯ ಸಂದರ್ಭದಲ್ಲಿ ಈ ಸ್ಥಿತಿಯನ್ನು ಗಮನಿಸಿದ ರಹಮತ್ ತರೀಕೆರೆವರು 'ಕರ್ನಾಟಕ ಸೂಫಿಗಳು' ಎಂಬ ಕೃತಿಯಲ್ಲಿ ಗೋಗಿಯ ಲೇಖಕ ಸೂಫಿ ಮಹಮೂದ ಬಹರಿಯ ಕುರಿತು ಪ್ರಸ್ತಾಪಿಸಿರುವುದನ್ನು ಇಲ್ಲಿ ಉಲ್ಲೇಖಿಸುವುದು ಸರಿ ಅನಿಸುತ್ತದೆ.

'ಗುಲಬರ್ಗಾ ಸೀಮೆಯ ಗೋಗಿಯಲ್ಲಿದ್ದ ಖ್ಯಾತ ದರವೇಶ ಕವಿ ಮಹಮೂದ ಬಹರಿ ದಖನಿ ಕಾವ್ಯವನ್ನು ಗೋಗಿಯ ನಾಡಿನವರಾದ ನಾವು ಅಮೆರಿಕೆಯಿಂದ ಬಂದ ವಿದ್ವಾಂಸರ ಇಂಗ್ಲೀಷ ಅನುವಾದಗಳ ಮೂಲಕ ತಿಳಿದುಕೊಳ್ಳಬೇಕಾದದ್ದು ಲಜ್ಜೆಗೆ ಅಸಹಾಯಕತೆಗೆ ಸಂಭಂಧಿಸಿದೆ. ಈ ಸ್ಥಿತಿಗೆ ಕಾರಣ ಏನು ? ಎಂಬ ಪ್ರಶ್ನೇಯು ಶೋಚನೀಯವಾದದ್ದು. ಆದರೆ ಇಲ್ಲಿಯ ಅಧ್ಯಯನ ಕೇಂದ್ರಗಳ ಭಾಷಿಕ ಅಲಕ್ಷತನವೇ ಇದಕ್ಕೆ ಕಾರಣ ಇರಬಹುದು ಅನಿಸುತ್ತದೆ. ಈ ಕಾರಣದಿಂದ ನಮಗೆ ನಿಲುಕದ ಭಾಷೆಯಾಗಿ ಕಾಡಿತ್ತು ನಂತರದಲ್ಲಿ ಇದನ್ನು ಗಮನಿಸಿದ ವಚನ ಪಿತಾಮಹ ಡಾ॥ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ ಬಿ.ಎಲ್.ಡಿ.ಇ ಸಂಸ್ಥೆ ವಿಜಯಪುರರವರು ಹಜ್ರತ್ ಖ್ವಾಜಿ ಮಹಮೂದ ಬಹರಿ ವಿರಚಿತ 'ಉರುಸೇ-ಇರ್ಫಾನ್(ಮನ್ ಲಗನ್)' ಕೃತಿಯನ್ನು ಅನುವಾದ ಮಾಡಿ ಕನ್ನಡಕ್ಕೆ ತಂದು ಕೊಟ್ಟಿರುವುದು ಆದಿಲ್ ಶಾಹಿ ಸಾಹಿತ್ಯ ಸಂಪುಟ-೯ರಲ್ಲಿ ನೋಡಬಹುದು. ಇದೊಂದು ಸ್ವಾಗತಾರ್ಹ ಕೆಲಸವೆಂದು ಹೇಳಬಹುದು.

"ವಿಶ್ವದ ಸಮಸ್ತ ಗೋಚರ-ಅಗೋಚರ ವ್ಯಾಪಾರಿಗಳಿಗೆ ಕಾರಣವಾದ ಅಮೂರ್ತ ಚೈತನ್ಯವನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸಿ ಅರ್ಪಣಾಭಾವದಿಂದ ಕಾಯಕವನ್ನಾ ಆಚರಿಸಿ ಸಂಪೂರ್ಣ ನೀತಿಯುತವೂ, ಅಹಿಂಸಾ ಪೂರ್ಣವೂ, ಆದ ಪರಮ ಪವಿತ್ರ ಜೀವನವನ್ನು ನಡೆಸಿದರು. ಅಷ್ಟಾವರಣ ಷಟಸ್ಥಳಗಳ ದಿವ್ಯ ಮಾರ್ಗದಲ್ಲಿ ಮುಂದುವರಿದು, ಲಿಂಗಾಂಗ ಸಾಮರಸ್ಯದಿಂದ ಪರಿಪೂರ್ಣ ಮಾನವರಾಗುವುದೇ ಶರಣ ಧರ್ಮದ ಆದರ್ಶ, ಎಂದು ನಂಜಿ

ಬಾಳಿ ತೋರಿಸಿದರು. ಈ ಶರಣರ ಒಂದು ಸಂಪ್ರದಾಯವೇ ಹುಟ್ಟಿಕೊಂಡು ಆಧ್ಯಾತ್ಮಿಕ ಆನಂದವನ್ನು ಸವಿಯುತ್ತಿದ್ದರು, ಸಾಮಾನ್ಯ ಜನರು ಜಾತಿ ಭೇದವನ್ನು ತೂರೆದು ಕಾಯಕ ಶ್ರದ್ಧೆಯಿಂದ ಬಸವಣ್ಣ ಹಾಕಿಕೊಟ್ಟ ಕಾಯಕವೇ ಕೈಲಾಸ ಎಂಬ ತತ್ವವನ್ನು ಪಾಲಿಸಿ ಮುಕ್ತಿಗೆ ಹಂಬಲಿಸಿದರು."[೧] ಇದರ ಸ್ವರೂಪಕ್ಕೆ ಹೊಂದಿಕೊಂಡತೆ ಈ ಸೂಫಿಸಂತರು ಭಿನ್ನಸ್ವರೂಪವಾಗಿ ಕಂಡುಬಂದರು. ಒಂದು ರೀತಿಯ ಗುರುಶಿಷ್ಯರ ಪರಂಪರೆಯನ್ನು ಕಟ್ಟಿಕೊಂಡು ಅನುಭಾವಿಗಳಾಗಿ ತೋರುತ್ತದೆ. ಹಾಗಂತ ಒಬ್ಬರನ್ನು ಒಬ್ಬರು ಇರಿಸುಮುರಿಸು ಮಾಡಿಕೊಳ್ಳುವ ಬಗೆಯೂ ಅಲ್ಲ. ಅದೊಂದು ರೀತಿಯಲ್ಲಿ ತಮ್ಮ ತಮ್ಮಲ್ಲೆ ಚರ್ಚಿಸಿಕೊಂಡು ಗೆಳೆಯರು, ಗುರುಶಿಷ್ಯರಾಗಿ ಹಾಗೂ ಮಾತಿಗೆ ಜವಾಬು ನೀಡುವ ಆದ್ಯಕರ್ತವ್ಯದಂತೆ ಕಂಡುಬರುವುದು.

ಹಿಂದೂ ಮುಸ್ಲಿಂ ಹೊಂದಾಣಿಕೆಗೆ ಬರುವ ಮುನ್ನ ಎರಡು ಧರ್ಮಗಳ ಸಮುದಾಯಗಳು ಪರಸ್ಪರ ಸವಾಲು ಎದುರಿಸಿದವು. ತಮ್ಮ ಧರ್ಮದೊಳಗಿನ ಭಿನ್ನ ಅಭಿಪ್ರಾಯಗಳು ಒಪ್ಪಿಕೊಳ್ಳ-ಒಪ್ಪಿಕೊಳ್ಳದವರ ನಡುವೆ ದೊಡ್ಡ ಶೀತಲ ಸಮರ ಕೂಡ ನಡೆಯಿತು, ಸೂಫಿ ಸಂತರ ಪರಂಪರೆಯೂ ಈ ಕಾಲಘಟ್ಟದ ಮಹತ್ವದ ಅಂಶ ಆದ್ದರಿಂದ ಸರ್ ಜಾನ್ ಮಾರ್ಷಲ್ ಅವರು "ಹಿಂದೂ ಮತ್ತು ಮುಸ್ಲಿಂನಾಗರಿಕತೆಗಳು ಪರಸ್ಪರ ಮುಖಾಮುಖಿಯಾಗಿ ಸಂಧಿಸಿ ಬೆರೆತುಕೊಂಡ ರೀತಿ ಅನನ್ಯವಾದದು. ಎರಡು ವಿಭಿನ್ನ ಸಂಸ್ಕೃತಿಗಳು ಮತ್ತು ಧಾರ್ಮಿಕ ಕಾರಣಗಳಾಗಿ ವ್ಯಾಪಕ ಭಿನ್ನಾಭಿಪ್ರಾಯಗಳ ನಡುವೆಯೂ ಪರಸ್ಪರ ಪ್ರಭಾವ ಬೀರಿದವು" ಎಂದು ಅಭಿಪ್ರಾಯ ಪಡುತ್ತಾರೆ.

ಹಾಗೇಯೇ ಈ ಭಾಗದ ಸೂಫಿಸಂತರು ಅನೇಕ ಪವಾಡಗಳನ್ನು ಮಾಡಿದ್ದನ್ನು ನಾವು ಜನರ ನಂಬಿಕೆಯ 'ಮಿತ್'ಗಳಲ್ಲಿ ಕಾಣಬಹುದು. ಚಂದಾಹುಸೇನಿಯಾ ಪ್ಲೇಗ ರೋಗವನ್ನು ನಿವಾರಣೆ ಮಾಡಿ ಜನರನ್ನು ರಕ್ಷಿಸಿದ್ದು, ಸಂಗಮನಾಥನು ರಾಕ್ಷಸರನ್ನು ಧ್ವಂಸ ಮಾಡಿ ಮನುಕುಲವನ್ನು ಕಟ್ಟಿದ್ದು ಕೊಡೆಕಲ್ ಬಸವಣ್ಣನಿಗೆ ಅಮರಗನ್ನಡ ಲಿಪಿ ಕಲಿಸಿದ್ದು. ನಂತರ ಗುಂಡಬಸವಣ್ಣನಿಗೆ 'ಧರ್ಮಕಲ್ಯಾಣಕ್ಕೆ ಪ್ರೇರಣೆ ಶಕ್ತಿಯಾಗಿ ನಿಂತಿದ್ದು, ಪರಮಾನಂದರು ಡಕ್ಕಲಿಗ ಕೆಂಚಯ್ಯನ ಶಿಷ್ಯನಾಗಿ ತನ್ನಲ್ಲಿರುವ ವಿಷಯ ಸಂಗತಿಗಳನ್ನು ಹಂಚಿಕೊಂಡು ತಿಳಿದುಕೊಂಡಿದ್ದು ನಂತರ ದಿನಗಳಲ್ಲಿ ಸಂಗಮನಾಥನಿಗೆ ಜ್ಞಾನವನ್ನು ಬೋಧಿಸಿದ್ದು, ಇವೆಲ್ಲವು ಸಾಂಸ್ಕೃತಿಕ ಮೌಲ್ಯಗಳೇ ಆಗಿವೆ.

ಅದೇ ರೀತಿ ಯುದ್ಧ ಸ್ವರೂಪಿಯಲ್ಲಿ ಬಂದಿರುವ ಸೂಫಿಸರ್ಮಸ್ಥನು ಕುಮಾರನಾಯಕನಿಂದ ಜನರನ್ನು ರಕ್ಷಿಸಿ ಔರಂಗಜೇಬನಿಗೆ ತಿರುಗಿ ಬಿದ್ದು ರಾಜಾಶ್ರಯ ಒಪ್ಪಿಕೊಳ್ಳದೆ ಧರ್ಮವನ್ನು ಪರಿಪಾಲನೆ ಮಾಡಿದ್ದು, ಧರ್ಮ ಅಂದರೆ 'ಮನುಕುಲತೆಯನ್ನು ಹೊಂದಿಕೊಂಡು ಬದುಕನ್ನು ಸಾಗಿಸುವುದು ಮತ್ತು ದೈವಿಗೆ ಶರಣಾಗತನಾಗಿ ನಡೆಯುವುದು' ಈತನ ಮುಖ್ಯ ಉದ್ದೇಶವಾಗಿತ್ತು ಈ ಹಿನ್ನೆಲೆಯಲ್ಲಿ ಮತಾಂಧ ಔರಂಗಜೇಬನ ಕೈಯಲ್ಲಿ ತನ್ನ ಗೆಳೆಯ ದಾರುಶುಕುನು ಕೊಲೆಯಾದ ಕ್ಷಣದಲ್ಲಿ ನೇರವಾಗಿ ಪ್ರತಿಭಟಿಸಿದ. ಇದೇ ಕಾರಣಕ್ಕೆ ಆತನ ರುಂಡ ಕತ್ತರಿಸಿಕೊಂಡು ದೆಹಲಿಗೆ ತೆಗೆದುಕೊಂಡು ಹೋದ, ಆತನ ದಿಂಬೆ ಮಾತ್ರ ಇಲ್ಲಿ ಉಳಿಯಿತ್ತು ಎಂಬ ಸಂಗತಿಯೂ ತಿಳಿಯುತ್ತದೆ.

ಇದನ್ನು ಸೂಕ್ಷ್ಮತೆಯಿಂದ ನೋಡಿದರೆ ಪ್ರಭುತ್ವದಿಂದ ಮೊದಲ ಧ್ವನಿಯೆತ್ತಿದ್ದು ಸೂಫಿಯ ಸತ್ಯ-ಅಹಿಂಸೆತೆಯನ್ನು ತೋರಿಸಿಕೊಡುತ್ತದೆ. ಈ ನೆಲದಲ್ಲಿ ಸಂತರು ಕೂಡ ರಾಜಪ್ರಭುತ್ವನ್ನು ಒಪ್ಪಿಕೊಳ್ಳಲಿಲ್ಲ ಅನ್ನುವುದುದಕ್ಕೆ ಸಿಂದಗಿಯ ಹತ್ತಿರ ಚಾಂದಕೋಟಿ(ಚಾಂದಕವಠೆ)ಯಲ್ಲಿ ಪರಮಾನಂದ ಘಟನೆಗಳೇ ಸಾಕ್ಷಿ. ಈತನು ದಿನನಿತ್ಯ ಸಂಚರಿಸಿಕೊಂಡು ತನ್ನನ್ನು ತಾನು ಆತ್ಮಾವಲೋಕನ ಮಾಡಿಕೊಂಡು ಮನುಜ ಪಥಕ್ಕೆ ನಾಂದಿಯಾಡಿದ್ದು ತಿಳಿಯುತ್ತದೆ, ಇಂತಹವುಗಳನ್ನು ಸೂಕ್ಷ್ಮತೆಯಿಂದ ಗಮನಿಸಿದರೆ ನಮಗೆ ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಅರ್ಥವಾಗುತ್ತದೆ ಇಲ್ಲಂದರೆ ಒಂದು ಕಂತೆಯಾಗಿ ಕಾಣುವ ಸಾಧ್ಯತೆಯಿದೆ.

ಸೂಫಿ ಸಂತರು ಇನ್ನೊಂದು ಬಹುಮುಖ್ಯವಾಗಿ ಗುರುಶಿಷ್ಯ ಪರಂಪರೆಯೊಂದಿಗೆ ಖಾನಖಾ ಮತ್ತು ಮಠಗಳನ್ನು ಕಟ್ಟಿಕೊಂಡು. ದಾಸೋಹದ ಜ್ಞಾನವನ್ನು, ನಾಡಿನ ಕಡೆಗೆ ದೈವ ಏಕಾಂತಕ್ಕೆ, ಶಿಷ್ಯರಿಗೆ ಕಲಿಸುವುದಕ್ಕೆ, ಸಂಸಾರಕ್ಕೆ ಹಾಗೂ ಸಾಮಾನ್ಯ ಜನರೊಂದಿಗೆ ಬೆರೆತುಕೊಂಡು ಹೋಗುವಂತೆ ಮಾಡಿದರು. ಇವುಗಳು ಭಿನ್ನಸ್ವರೂಪದಲ್ಲಿ ನಡೆದುಕೊಂಡು ಬಂದವು ಅದಕ್ಕೆ ದಿಗ್ಗಿ ಸಂಗಮನಾಥನು ಊರು ಹೊರಗೆ ಮಠಕಟ್ಟಿ ಜನರ ಮುಖಾಂತರ ಹೆಜ್ಜೆ ಹಾಕಿದರೆ ತನ್ನ ಗುರು ಪರಮಾನಂದರು ದೂರದ ದೊಡ್ಡ ಬೆಟ್ಟ ಗುಡ್ಡಗಳ ಅರಣ್ಯದಲ್ಲಿ ಇದ್ದುಕೊಂಡೆ ಬಯಲನ್ನೆ ಸಂಚರಿಸಿಕೊಂಡು ಹೋದದ್ದು ಇದಕ್ಕೆ ತದ್ವಿರುದ್ದವಾದರು ಆತನ ಅವಧೂತ ಸಂಕಲ್ಪವಾಗಿತ್ತು, ಅದೇ ರೀತಿ ಚಂದಾಹುಸೇನಿ ಸಾಹೇಬರು ಕೂಡ ಖಾನಖಾ ಕಟ್ಟಿಕೊಂಡು ಬದುಕಿರುತ್ತಾರೆ ಇದಕ್ಕೆ ಸೂಫಿಸರ್ಮಸ್ಥರು ತದ್ವಿರುದ್ದವಾಗಿ ಕಾಣುತ್ತಾರೆ. ಇವರು ಬಯಲೇ ಅವರು ವಾಸಿಸುವ ಸ್ಥಳವಾಗಿರುತ್ತದೆ. ಮತ್ತು ತನ್ನ ಅನುಯಾಯಿಗಳಿಗೆ ಜವಾಬು ನೀಡುವ ಸಲುವಾಗಿ ಒಂದೊಂದು ಸಲ ಯುದ್ಧ ಸ್ವರೂಪಿಗಳಾಗಿ ಕಂಡು ಬರುತ್ತಾರೆ. ಅದೇನಿದ್ದರೂ ಇದರಿಂದ ನಮ್ಮಲ್ಲಿ ಮಠ ಮತ್ತು ದರ್ಗಾ ಸಂಸ್ಕೃತಿಗಳಿಗೆ ಕಾರಣವಾಗಿ ಇಲ್ಲಿಯ ಜನರ ಭಜನೆಗಳು ಹಾಗೂ ಕವಾಲಿಗಳು ಒಂದು ಸಂಸ್ಕಾರದಂತೆ ಹುಟ್ಟಿಕೊಂಡು ಬಂದಿರುವುದು ಗೋಚರಸುತ್ತದೆ.

ಸೂಫಿ ಸಂತರು ಸತ್ತ ನಂತರ ಜನರ ಭಾವನೆಯಲ್ಲಿ ದೈವ ಸ್ವರೂಪಿಯಾಗಿ ಕಂಡರು, ಒಂದೊಂದು ಸಲ ಮೈಯೊಳಗೆ ಬಂದು ಜುಮುಕಿಸಿಕೊಂಡು ಹೇಳುವ ಪದ್ದತಿಯೂ ಇದೆ. ಇದೊಂದು ರೀತಿಯೂ ಮೂಢನಂಬಿಕೆಗೆ ಸಮೀಪ ಇರುವಂತದ್ದೆ : ಆದರೆ ಜನರು ನಂಬಿಕೆಯಿಟ್ಟಿರುವ ಆ ಸೂಫಿ ಸಂತರನ್ನು ಮತ್ತೆ ಮತ್ತೆ ನೆನಪಿಸಿಕೊಂಡು ಹೋಗುವಂತದ್ದು. ಇದು ಒಂದೊಂದು ಸಲ ತದ್ವಿರುದ್ದವಾಗುತ್ತದೆ. ಇದಕ್ಕೆ ಜನ ಸಮುದಾಯಗಳೇ ಹೊಣೆ ಆಗಿರುತ್ತವೆ. ಜಾತ್ರೆ ಮತ್ತು ಉರುಸುಗಳಲ್ಲಿ ಸಂತರಿಗೆ ಪಲ್ಲಕ್ಕಿ ರಥೋತ್ಸವ ಜರುಗಿಸಿದರೆ, ಸೂಫಿಗಳಿಗೆ ಗಂಧ ಮೆರೆವಣಿಗೆ ಮತ್ತು ಕುದುರೆ ಮೆರವಣಿಗೆ ತೆಗೆದುಕೊಂಡು ದೈವತ್ವದ ಸೇವೆ ಸಲ್ಲಿಸುವುದು ಕಂಡುಬರುತ್ತದೆ. ಇಲ್ಲಿ "ಸರ್ವಜಾತಿ ಅಂತಸ್ತುಗಳ ಜನ ಭಾಗವಹಿಸಿಸುವುದು ನಿಜವಾದದ್ದು, ಸಾಮಾಜಿಕವಾಗಿ ಆರ್ಥಿಕವಾಗಿ ಕೆಳ ಸ್ತರದವರು ಪ್ರಧಾನವಾಗಿರುವುದು ಸ್ಪಷ್ಟ. ದರ್ಗಾಗಳಿಗೆ ಜನ ನಡೆದುಕೊಳ್ಳುವುದನ್ನು ಅವರ

ಸ್ಥಿತಿಗತಿಗಳಿಗೂ ನೇರ ಸಂಬಂಧವಿದೆ. ಈ ಅರ್ಥದಲ್ಲಿ ಸಂತರು ದಲಿತರ ಬಡವರ ಸ್ತ್ರೀಯರ ಅನಾಥರ ದೈವಗಳು. ಸೂಫಿ ಅನುಭವವು ಬಡತನವನ್ನು(ಫಕೀರಿ)ಹೀನೈಸುತ್ತಿರಲಿಲ್ಲ. ದೀಕ್ಷೆ ಕೊಡುವಾಗ ಜಾತಿ ಮತಗಳನ್ನು ಲೆಕ್ಕಿಸುತ್ತಿರಲಿಲ್ಲ ಇಷ್ಟಾದರೂ ಸೂಫಿಸಂತರು ಮೂಲತ ವೈಯಕ್ತಿಕ ಸಾಧನೆಗೆ ಆದ್ಯತೆ ಕೊಡುವ ವ್ಯಕ್ತಿವಾದಿ ಫಿಲಾಸಫೀ. ಆದರೆ ಸೂಫಿಗಳು ಸತ್ತು ಅವರ ಅನುಭಾವ ತತ್ವಜ್ಞಾನಗಳು ಸರಿದು ಹೋದ ಮೇಲೆ ಉಳಿದ ಗೋರಿಗಳು ಕೆಳಸ್ತರದ ಜನರ ಧಾರ್ಮಿಕ ಅಭಿವ್ಯಕ್ತಿಯ ವೇದಿಕೆಗಳಾಗಿಬಿಟ್ಟವು. ಇದನ್ನು ಸೂಫಿಸಂ ಚರಿತ್ರೆಯಲ್ಲಿ 'ತಾಫಿಯಾ' ಘಟ್ಟ ಎಂದು ಕರೆಯಲಾಗಿತು. ಇದು ತಪ್ಪಿಸಲಾಗದ ಬೆಳವಣಿಗೆಯಾಗಿತ್ತು. ಇಸ್ಲಾಮಿಗೆ ಮತಾಂತರಗೊಂಡರೂ ತಮ್ಮ ಹಿಂದಿನ ಧಾರ್ಮಿಕ ನೆನಪುಗಳಿಂದ ಬಿಡಿಸಿಕೊಳ್ಳಲಾಗದ ಅಥವಾ ತಮ್ಮ ಸಾಮಾಜಿಕ ಸ್ಥಿತಿಯ ಕಾರಣದಿಂದ ಶಿಷ್ಟ ಇಸ್ಲಾಮನ್ನು ಪಾಲಿಸಲಾಗದ ಸಮುದಾಯಗಳಿಗೆ ದರ್ಗಾಗಳು ಧಾರ್ಮಿಕ ಹಕ್ಕನ್ನು ಅನುಭವಿಸಲು ಪರ್ಯಾಯ ಅವಕಾಶ ಒದಗಿಸಿದವು. ಬಹುದೇವತಾರಾಧಕ ಸಂಸ್ಕೃತಿಯಲ್ಲಿ ಹಾಗೂ ಗುರುಪಂಥಗಳಲ್ಲಿ ಬೆಳೆದ ಜನಕ್ಕೆ ಸಂತರ ಆರಾಧನೆ ಪ್ರಿಯವಾಯಿತು."[೨]

ಈ ಕಾರಣದಿಂದ ಜನರು ಗುಡಿ ದರ್ಗಾಗಳು ಜಾತ್ರೆಗಳಲ್ಲಿ ನೈವೇದ್ಯ ನೀಡುವ ನಿಯಮ ಕಟ್ಟಿಕೊಂಡರು. ಇದು ಸಾಮಾನ್ಯವಾಗಿ ಸಕ್ಕರೆ ಓದಿಸುವುದು, ಮಾಲ್ದಿ ನೀಡುವುದು, ಹೂ, ಗಂಧವನ್ನು ಲೇಪಿಸುವುದು, ಲೋಬಾನ ಊದಕಡ್ಡಿ ಹತ್ತಿಸಿ, ಫಾತೆಹಾ ಮತ್ತು ಮಂತ್ರ ಓದಿಸುವುದು ಉತ್ತತ್ತಿ ಕಟ್ಟುವುದು ದರಗಾದ ಹಾಗೂ ಗುಡಿ ಹೊರಗೆ ಕಾಯಿ ಹೊಡೆಯುವುದು ಕಂದೂರಿ ಮಾಡಿ ಎಡೆ ನೀಡುವುದು ಇವೆಲ್ಲವುಗಳ ಉರುಸುಗಳಲ್ಲಿ ಹಿಂದೂ-ಮುಸ್ಲಿಂರ ಒಂದೇ ಸಂಸ್ಕಾರಗಳಾಗಿ ಕಾಣುತ್ತವೆ. ಆದರೆ ಸಂತರ ಗುಡಿಗಳಿಗೆ ಎಡೆ ನೀಡುವಾಗ ಬಹುಪಾಲು ಮಾಂಸಹಾರಿ ನೈವೇದ್ಯ ನೀಡುವುದು ಕಂಡುಬರುವುದಿಲ್ಲ. ಇದು ಭಿನ್ನ ಸ್ವರೂಪತೆ ಹೊಂದಿದ್ದರು ಅವುಗಳಿಂದ ಬದಲಾವಣಿಯ ಸ್ವರೂಪವಲ್ಲ, ಇವೆರಡು ಸಂಸ್ಕಾರದಲ್ಲಿ ಐದು ಮಂದಿ ಫಕೀರರು ಹಾಗೂ ಐದು ಮಂದಿ ವಗ್ಗರಗಳನ್ನು ಕರೆದು ಊಟ ಮಾಡಿಸುವುದು ಸರ್ವಸಾಮಾನ್ಯವಾಗಿ, ಡಿಗ್ಗಿ ಸಂಗಮನಾಥ, ಅಮರಕಲ್ಯಾಣ, ನಾಗನಟಗಿ ಪರಮಾನಂದರು, ಗೋಗಿ ಚಂದಾಹುಸೇನಿ, ಸಗರ ಸೂಫಿ ಸರ್ಮಸ್ಥರು ಉರುಸು ಜಾತ್ರೆಗಳಲ್ಲಿ ಕಂಡುಬರುತ್ತದೆ.

ಇಲ್ಲಿಯ ಜನರು ಸೂಫಿ-ಸಂತರ ಹೆಸರಿನೊಂದಿಗೆ ತಮ್ಮ ಮಕ್ಕಳೊಂದಿಗೆ ಕರೆದುಕೊಂಡ ಊರುಗಳನ್ನು ನೋಡಬಹುದು. ಅವುಗಳಲ್ಲಿ ಬಹುಮುಖ್ಯ ನೆಲೆಯನ್ನು ಆಯ್ಕೆ ಮಾಡಿಕೊಂಡಿರುವ ಗ್ರಾಮಗಳಾದ ಶಹಾಪುರ, ನಾಗನಟಗಿ, ಡಿಗ್ಗಿ, ಗೋಗಿ, ಸಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಾದ ದರಿಯಾಪುರ, ಸೈದಾಪುರ, ಬಾಣತಿಹಾಳ, ಶೆಟ್ಟಿಗೇರಾ, ಗಂಗನಾಳ, ಉಮರದೊಡ್ಡಿ, ಪಿರಪಾಪುರದೊಡ್ಡಿ, ಎಕ್ಕಿಗಡ್ಡಿ, ತಿಮ್ಮಾಪೂರದೊಡ್ಡಿ, ಹೊಸಳ್ಳಿದೊಡ್ಡಿ, ಗೋಲಗೇರಿದೊಡ್ಡಿ, ಶಾರದಳ್ಳಿ, ಪಿಂಜಾರದೊಡ್ಡಿ(ಸೂಫಿನಗರ), ಸಿಂಗನಳ್ಳಿ, ಹೊಸಕೇರಿ, ರಾಜಾಪುರ, ರಬ್ಬನಹಳ್ಳಿ, ನಂದಿಹಳ್ಳಿ, ಕರಕಳ್ಳಿ, ಚಂದಾಪುರ, ಉಕ್ಕಿನಾಳ, ದರ್ಶನಾಪುರ, ಚಾಮನಾಳ, ಹಾರಣಗೇರಾ ಹೀಗೆ ಅನೇಕ

ಗ್ರಾಮಗ:ಳಲ್ಲಿ ತಮ್ಮ ಮಕ್ಕಳಿಗೆ ಸಂತರು ಸೂಫಿಗಳ ಹೆಸರನ್ನು ಅಳಸಿಕೊಳ್ಳದಂತೆ ಕೆಲವೊಂದು ಕಡೆ ಅಪ್ಪ ಅವ್ವ ಅಂತ ಸೇರಿಸಿಕೊಂಡು ಕರೆದುಕೊಳ್ಳುವುದು ಕಾಣುತ್ತದೆ. ಈ ಕಾರಣದಿಂದ ಇಲ್ಲಿ ತಮ್ಮ ಮಕ್ಕಳಿಗೆ ಸೂಫಿಗಳ ಹೆಸರನ್ನು ಚಾಂದಷಾಶ, ಚಾವುಸ್, ಚಂದಪ್ಪ, ಸೋಪಣ್ಣ, ಸೋಪವ್ವ, ಸೋಪಿಯಾ, ಸೋಪಿಸಾಬ, ಸಾಬವ್ವ, ಸಾಹೇಬ ಹೀಗೆ ಕರೆದುಕೊಂಡರೆ ಸಂತರ ಹೆಸರನ್ನು ತಮ್ಮ ಮಕ್ಕಳಿಗೆ ಅಮೃತಅಲಿ, ಸಂಗಪ್ಪ, ಸಂಗಯ್ಯ, ಅಂಬ್ರಣ್ಣ, ಅಂಬ್ರಪ್ಪ, ಅಂಬಲವ್ವ, ಪರಪಯ್ಯ, ಪಾಪಯ್ಯ, ಮಹಾನಂದ, ಪರಮಾನಂದ ಇದೇ ರೀತಿ ಸೇರಿಸಿಕೊಂಡು ಕರೆಯುವ ರೂಡಿಯಿದೆ. ಹಾಗೂ ಇವರ ಹೆಸರಿನ ಮೇಲೆ ಮೊಹರಂ ಆಚರಣೆಗಳು ಮತ್ತು ಪುರವಂತಿಕೆಗಳು ಕಂಡುಬರುತ್ತವೆ. ಇವುಗಳು ಸೂಫಿಸಂತರ ಆಚರಣೆಯ ನಿಲುವುಗಳಲ್ಲ. ಇದೊಂದು ಜನರ ನಂಬಿಕೆಯ ಭಾವನೆಯ ಸ್ವರೂಪಗಳಾದವು ಅನಿಸುತ್ತದೆ.

ಕೊನೆಯ ಟಿಪ್ಪಣಿಗಳು :

೧ ಕೂಡಲೂರ ಬಸವಲಿಂಗ ಶರಣರು, ಎಮ್.ಜಿ.ಶಾಸ್ತ್ರಿಮಠ, ಪುಟ–೫

೨ ಕರ್ನಾಟಕದ ಸೂಫಿಗಳು, ರಹಮತ್ ತರೀಕೆರೆ, ಪುಟ–೧೬೬

ಅಧ್ಯಾಯ : ಆರು

ಸಮಾರೋಪ

ಮಾನವ ಮತ್ತು ಪ್ರಕೃತಿ ಇವೆರಡು ಭಿನ್ನಸ್ವರೂಪತೆಯನ್ನು ಕಂಡರೂ. ಇವು ಒಂದಕ್ಕೊಂದು ಪೂರಕ ಸಂಬಂಧಂತೆ ಕಾರ್ಯನಿರ್ವಹಿಸಿ, ನಿರ್ದೇಶನದಂತೆ ಬದುಕುತ್ತಿರುತ್ತವೆ. ಹಾಗೇ ಕರ್ನಾಟಕ ಬಹು ಸಂಸ್ಕೃತಿಯಲ್ಲಿ ಸೂಫಿ ಸಂತರ ಅನುಭವಗಳನ್ನು ಹಾಗು ಜನರ ನಂಬಿಕೆಗಳು ಜನ ಸಂಸ್ಕೃತಿಯಲ್ಲಿ 'ಯಜಮಾನಿಕೆ' ಸಂಸ್ಕೃತಿಯಿಂದ ಬಿಡುಗಡೆಗೊಳ್ಳಲು ನಯವಾಗಿ ಪ್ರತಿಬಟಿಸುತ್ತವೆ. ಒಂದಕ್ಕೊಂದು ಪೂರಕ ಸಂಬಂಧಗಳಾಗಿ ಒಂದು ಸಂಸ್ಕಾರ ಆಯಾಮಗಳನ್ನಾಗಿ ಕಟ್ಟಿಕೊಂಡು ಬದುಕುತಿರುತ್ತವೆ. ಇಂತಹ ಮೌಲ್ಯಗಳು ಕರ್ನಾಟಕ ಅಥವಾ ಭಾರತ ವಿವಿಧ ಪ್ರದೇಶದಲ್ಲಿ ಅಲ್ಲಿಯ ಜನರ ನಂಬಿಕೆ ಆಚರಣೆಗಳು ಹಾಗೂ ಸಂಪ್ರದಾಯಗಳನ್ನು ಹೊಂದಿಕೊಂಡು ಇರುತ್ತವೆ. ಆದ ಕಾರಣ ಪ್ರಸ್ತುತ ಅಧ್ಯಯನದಲ್ಲಿ ಶಹಾಪೂರ ತಾಲೂಕಿನ ಸೌಹಾರ್ದತೆಯ ನೆಲೆಗಳು ಒಂದು ಅಧ್ಯಯನ ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಈ ನಾಡಿನ ಅತವಾ ಪರಿಸರದಲ್ಲಿ ಬದುಕಿ, ಬಾಳಿ ಅಸುನೀಗಿದ ಅನೇಕ ಸೂಫಿ ಸಂತರು ಕಂಡುಬರುತ್ತಾರೆ. ಅವರಲ್ಲಿ ಪ್ರಮುಖರಾದ ಗೋಗಿ ಚಂದಾ ಹುಸೇನಿ ಸೂಫಿ ಶರರ್ಮಸ್ಥರು, ಶಹಾಪುರದ ಅಮರ ಕಲ್ಯಾಣ, ಡಿಗ್ಗಿ ಸಂಗಮನಾಥ ಹಾಗೂ ನಾಗನಟಗಿ ಪರಮಾನಂದ ಪ್ರಭು ಇವರನ್ನು ಅನುಲಕ್ಷಿಸಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಇದು ಇಲ್ಲಿಯ ಜನರ ನಂಬಿಕೆ ಆಚರಣೆಗಳು ಸಂಪ್ರದಾಯಗಳು ಹಾಗೂ ಪರಂಪರೆಯ ಕುರಿತು ಚರ್ಚಿಸಿಕೊಂಡು ಆರು ಅಧ್ಯಯನಗಳನ್ನಾಗಿ ವಿಭಾಗಿಸಿಕೊಂಡು ಸೂಕ್ಷ್ಮತೆಯಿಂದ ವಿಷಯಕ್ಕೆ ಅನುಸಂಧಾನಗೊಳಿಸುವಂತೆ ಸಂಶೋಧಿಸಲು ಪ್ರಯತ್ನಿಸಿದ್ದೇನೆ.

ಈ ವಿಷಯ ಮಾನವ ಮತ್ತು ಪ್ರಕೃತಿಗೆ ಅವಶ್ಯಕವಾಗಿದೆ. ಇಂದು ಮಾನವನು ವೈಜ್ಞಾನಿಕ ಕ್ಷೇತ್ರದಲ್ಲಿ ತಂತ್ರಾಜ್ಞಾನಗಳ ಶೋಧದಿಂದ ಏನೆಲ್ಲಾ ಸಾಧನೆಗಳನ್ನು ಸಾಧ್ಯಮಾಡಿಕೊಂಡು ನಾಗರಿಕತೆಯ ನಾಗಾಲೋಕದಲ್ಲಿ ಮುಂದುವರಿಯುತ್ತಿದ್ದಾನೆ. ಇದು ಭೌತಿಕ, ಅಭ್ಯೂದೇಯ, ಅಜೀರ್ಣವೆನ್ನುವಷ್ಟು ವೃದ್ಧಿಯಾಗಿದೆ. ಆದರೆ ಮುಖ್ಯವಾಗಿ ಬೇಕಾದ ಮಾನಸಿಕ ಶಾಂತಿ, ನೆಮ್ಮದಿಗಳಿಂದ ಆತನು ಆಧುನಿಕ ಸಂದರ್ಭದಲ್ಲಿ ವಂಚಿತನಾಗಿದ್ದಾನೆ. ಆತನಲ್ಲಿರುವ ಸಂಕುಚಿತತೆ, ಸ್ವಾರ್ಥತೆ ಸ್ವಜನ ಪಕ್ಷಪಾತಗಳು ತಲೆ ಎತ್ತಿಕೊಂಡು. ಇಂದು ಜಾತಿಯತೆ, ಧರ್ಮ, ರಾಷ್ಟ್ರೀಯತೆ, ದೇವರು-ದೆವ್ವ ಹಾಗೂ ಸಾಂಸ್ಕೃತಿಕ ಇವುಗಳ ತತ್ವ ಸಿದ್ಧಾಂತಗಳ ಘರ್ಷಣೆಯಿಂದ ಪ್ರಜಾಪ್ರಭುತ್ವವನ್ನೆ ಬುಡಮೇಲು ಮಾಡಿ. ಕ್ರೌರ್ಯ, ಹಿಂಸೆ, ಅನ್ಯಾಯ, ಅತ್ಯಾಚಾರಗಳು ಅವ್ಯಾತವಾಗಿ ನಡೆದು ಮನಷ್ಯ ಮನುಷ್ಯನನ್ನೆ ಇರಿದು ತಿನ್ನುವ ಪೈಶ್ಯಾಚಿಕ ಕೃತ್ಯಗಳು ಘನಘೋರ ಸ್ಥಿತಿಗೆ ಅಹ್ವಾನಿಸಿದೆ. ಇವುಗಳು ಒಂದು ರೀತಿಯಲ್ಲಿ, 'ಬಾಯಿಯ ದವಡೆಗಳು ಮತ್ತು ವಸಡುಗಳು ಒಬ್ಬರಿಗೊಬ್ಬರು ಗುದ್ದಾಡಿಕೊಂಡು ಬದುಕಬೇಕಾಗಿತ್ತು. ಆಗ ಅದರ ನೋವಿನ ಅರಿವು ಆಗುತ್ತಿತ್ತು. ಆದರೆ ಹಾವು-ಮುಂಗಸಿಯಂತೆ

ಕಚ್ಚಾಡುವುದರಿಂದ ಇನ್ನೊಂದು ದಡಕ್ಕೆ ನಗುವಿಗೆ ಕಾರಣವಾಯಿತು, ವಿನಹ ಅದರ ನೋವಿನ ಕಥೆಯು ತಿಳಿಯಲಿಲ್ಲ'. ಎಂಬುದು ನನ್ನಂತ ಮನಸುಗಳಿಗೆ ಬಲವಾಗಿ ಕಾಡುತ್ತಿದೆ. ಇಂತಹ ಸ್ಥಿತಿಯನ್ನು ತಿಳಿಗೊಳಿಸಲು ಇದಕ್ಕೆ ಸರ್ಜರಿ ಮಾಡಬೇಕು. ಈ ಸರ್ಜರಿಗೆ ಚಿಕಿತ್ಸಕ ವೈದ್ಯರೆಂದರೆ ಸೂಫಿ ಸಂತರ ಅನುಭಾವಗಳು ಬಹುಮುಖ್ಯ ಅನಿಸುತ್ತದೆ.

ವರ್ತಮಾನದ ಬದುಕಿನಲ್ಲಿ ಮನುಷ್ಯ ತನ್ನ ನಡತೆಯನ್ನು ಕುರಿತು ಆಲೋಚಿಸಿಕೊಂಡು ಪರಸ್ಪರ ಅರ್ಥೈಸಿಕೊಳ್ಳುವುದು ಅಗತ್ಯವಾಗಿದೆ. ಇಂತಹ ಅಗತ್ಯತೆಯನ್ನು "ಮನುಷ್ಯನ ನಾಗರಿಕತೆ ಬೆಳೆದಂತೆಲ್ಲ ಅವನ ಸಾಮಾಜಿಕವಾಗಿ, ರಾಜಕೀಯವಾಗಿ ಬೆಳೆಯಬಹುದು, ಬಲಿಷ್ಠನಾಗಬಹುದು. ಆದರೆ ಅದೇ ಹೊತ್ತಿಗೆ ಹೃದಯ ಹಿನವಾಗಿ ಯಾಂತ್ರಿಕೃತ ವಿಶ್ವದ ಒಂದು ಭಾಗವಾಗಿಬಿಡಬಹುದು. ವ್ಯಕ್ತಿತ್ವಕ್ಕೆ ಹದವನ್ನು, ಮಾರ್ದವನ್ನು, ಮಾನವ ಸಹಜ ಪ್ರೀತಿಯನ್ನು ಒದಗಿಸಬಲ್ಲ ಆಧ್ಯಾತ್ಮಿಕ ವಿಕಾಸ ಅವನಲ್ಲಿ ಸಂಭವಿಸದೇ ಹೋದರೆ ಯಂತ್ರ-ನಾಗರಿಕತೆಯ ನಡುವೆ ಅವನು ಒಂದು ಯಂತ್ರವಾಗಬಹುದು. ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ಕಟ್ಟಿದ ಸಂಸ್ಕೃತಿ ನಾಗರಿಕತೆಗಳು ಅರ್ಥಹಿನವಾಗಿ ಜೀವಂತಿಕೆ ಇಲ್ಲದೆ, ಲವಲವಿಕೆ ಇಲ್ಲದ ನಿರ್ಜಿವ ಶಿಲ್ಪಗಳಾಗಿ ಬಿಡಬಹುದು. ಆದ್ದರಿಂದಲೇ ಮಾನವಿಯತೆ ತತ್ತರಿಸುತ್ತಿರುವ ಹಿಂದಿನ ದಿನಗಳಲ್ಲಿ ಗತಕಾಲದ ಅಧ್ಯಯನ ಸಾಹಿತ್ಯದ ಜವಾಬ್ದಾರಿಗಳ ಬಗ್ಗೆ ಮತ್ತೆ ಮತ್ತೆ ಆಲೋಚನೇ ಮಾಡಬೇಕಾಗಿದೆ". ಈ ಕಾರಣದಿಂದ ಸೂಫಿ ಸಂತರ ಅನುಭಾವಗಳು ನಮಗೆ ಅವಶ್ಯಕ, ಇದಕ್ಕೆ ಅವರಲ್ಲಿ ಇರುವ ಸರಳ ಜೀವನ ವಿಧಾನದ ಬದುಕನ್ನು ಕಟ್ಟಿಕೊಂಡು ಸಾಕಾರ ಸ್ವರೂಪಿಗಳಾಗಿ ತಮ್ಮ ನೈತಿಕತೆಯ ಬದ್ಧತೆಯನ್ನು ಈ ನೆಲಕ್ಕೆ ಭಾಷೆಯನ್ನು ಕೊಟ್ಟು ನಡೆದುಕೊಂಡು ಹೋಗಿದ್ದಾರೆ. ಹಾಗೇ ಇವರಿಗೆ ಯಾವುದೇ ಜಾತಿ ಧರ್ಮ ಕಟುನಿಯಮದಂತಹ ಸಂಸ್ಕೃತಿಯನ್ನು ಅಂಟಿಕೊಂಡು ಬದುಕದೆ ಇವರು ಕುವೆಂಪುರವರು ಹೇಳಿರುವ ವಿಶ್ವಮಾನವ ಸಂದೇಶದ ಕವಿತೆಯಾದ

ಓ ನನ್ನ ಚೇತನ

ಆಗು ನೀ ಅನಿಕೇತನ

ರೂಪರೂಪಗಳನ್ನು ದಾಟಿ

ನಾಮ ಕೋಟಿಗಳನ್ನು ಮೀಟಿ

ಎದೆಯ ಬಿರಿಯೇ ಭಾವದೀಟಿ

ಎಲ್ಲಿಯೂ ನಿಲ್ಲದಿರು

ಮನೆಯನೆಂದು ಕಟ್ಟದಿರು

ಕೊನೆಯನೆಂದು ಮುಟ್ಟದಿರು

ಓ ಅನಂತವಾಗಿರು

ಓ ನನ್ನ ಚೇತನ

ಆಗು ನೀ ಅನಿಕೇತನ(ಅನಿಕೇತನ–1,3)

ಎಂಬ ಕವಿತೆಯ ಆಶಯದಂತೆ ಕಂಡುಬರುತ್ತಾರೆ. ಇವರು ಕುವೆಂಪು ಅವರಿಗಿಂತ ಮೊದಲೇ ವಿಶ್ವಮಾನವ ಸಂದೇಶ ಸಾರಿರುವುದನ್ನು ತಿಳಿಯುತ್ತದೆ.

ಅದೇ ರೀತಿ ಇವರು ಪ್ರಕೃತಿಯೊಂದಿಗೆ ತಾಯಿ ಮಕ್ಕಳಾಗಿ ಬದುಕುತ್ತಾ ಭೂ–ಮನುಷ್ಯ ಪ್ರೀತಿಯ ಸಂಬಂಧಗಳನ್ನು ಕಟ್ಟಿಕೊಂಡು ಮನುಷ್ಯನ ವಯಕ್ತಿಕ, ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯವಾಗಿ ಸಂಕಷ್ಟದಲ್ಲಿ ಅನುಭವಿಸಿದಾಗಲೆಲ್ಲ ಇವರನ್ನು ಸಾಕಾರ ಸ್ವರೂಪಿಗಳಂತೆ ಕಂಡುಕೊಳ್ಳುತ್ತಾರೆ. ಇವರಲ್ಲಿನ ಬಹುಮುಖ್ಯವಾದ ಅಲಿಪ್ತತೆ, ನಿಸ್ಪ್ರತಹತೆ, ಸ್ಥಿತ ಪ್ರಜ್ಞತೆ, ಸಾಧಾರಿಣಿಕರಣ ಹಾಗೂ ಮಾನವೀಕರಣದಿಂದ ಕರುಳುವಿನ ಅಂತಕರಣದಲ್ಲಿ ಬಹುರೋಗಿಯ ವೈದ್ಯರಾಗಿ ಕಾಣುತ್ತಾರೆ ಎಂಬುದನ್ನು ಡಾ. ಅಬ್ದುಲ್ ಹಮೀದ್ ಅವರ ಕವಿತೆಯಾದ

ವಿಶ್ವಬಂಧತ್ವ

ಜಗ ಬರಡಲ್ಲ ಎದ್ದೇಳು

ಎಚ್ಚರಗೊಳ್ಳು ಎಲೆ ಮಾನವ

ಜಗವೇನೆಂಬುದು ತಿಳಿ

ಧರ್ಮ, ಧರ್ಮವೆಂದೇಕೆಗಳಹುತಿರುವೆ

ಎಲ್ಲಾ ವ್ಯರ್ಥ, ಮಾನವಕೋಟಿಯೆಲ್ಲಾ ಒಂದೆಂದು ತಿಳಿ

ಅದೇ ನಿನ್ನ ಧರ್ಮ, ಬಂಧುತ್ವ

ಎಂಬ ಆಶಯದಂತೆ ಜಗತ್ತಿನಲ್ಲಿದ್ದು, ಜಗತ್ತನ್ನು ಅಂಟಿಸಿಕೊಳ್ಳದ ಮಹಾತ್ಯಾಗಿಗಳಂತೆ ತೋರುತ್ತದೆ.

ಅನುಬಂಧಗಳು

ಆಕರ ಗ್ರಂಥಗಳು

೧ ಅನುಪಮಾ ವೆಂ. ಆದಾಪೂರ, ೨೦೧೨, **'ಅಮರಕಲ್ಯಾಣ : ಸಾಂಸ್ಕೃತಿಕ ಅಧ್ಯಯನ',** ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು

೨ ಅಬ್ದುಲ್ ಮಜೀದ್‌ಖಾನ್, ೧೯೯೪, **'ಜಲಾಲುದ್ದೀನ್ ರೂಮಿ',** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೩ ಅಬ್ದುಲ ಹಮೀದ್, ೧೯೯೮, **'ಸೂಫಿಪಥ ಮತ್ತು ಶರಣಪಥಗಳ ತೌಲನಿಕ ಅಧ್ಯಯನ',** ಪ್ರೀಯದರ್ಶಿನಿ ಪ್ರಕಾಶನ, ಬೆಂಗಳೂರು

೪ ಅಮರೇಶ ನುಗಡೋಣಿ, ೨೦೧೪, **'ತತ್ವಪದ ಸಾಹಿತ್ಯ ಅಧ್ಯಯನ',** ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫ ಅಲ್ದಾಳ.ಎಲ್.ಬಿ.ಕೆ, ೨೦೧೭, **'ಚಕ್ರತೀರ್ಥ',** ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ, ಕಲಬುರಗಿ

೬ ಇರಸಂಗಯ್ಯ ಜಿ. ಕೊಡೇಕಲ್ಮಠ, ೨೦೦೪, **'ನಂದಿಯಾಗಮಲೀಲೆ',** ಶ್ರೀ ಕೊಡೇಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಕೊಡೇಕಲ್ಲ

೭ ಕಪಟರಾಳ ಕೃಷ್ಣರಾಯ, ೨೦೦೬, **'ಸುರಪುರ ಸಂಸ್ಥಾನ ಇತಿಹಾಸ',** ಶಕ್ತಿ ಪ್ರಕಾಶನ, ಬೆಂಗಳೂರು.

೮ ಕಪಟರಾಳ ಕೃಷ್ಣರಾಯ, ೧೯೭೦, **'ಕರ್ನಾಟಕ ಸಂಸ್ಕೃತಿಯ ಸಂಶೋಧನೆ',** ಉಷಾ ಸಾಹಿತ್ಯ ಮಾಲೆ, ಮೈಸೂರ.

೯ ಕಲಬುರಗಿ ಎಂ.ಎಂ, ಸಂಗಪ್ಪಯ್ಯ ಸ್ವಾಮಿ. ೨೦೦೭, **'ಗುಂಡ ಬಸವೇಶ್ವರ ಚರಿತ್ರೆ',** ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು. ಕರ್ನಾಟಕ ಸರ್ಕಾರ.

೧೦ ಕಲಬುರಗಿ ಎಂ.ಎಂ, ೧೯೯೮, **'ಮಾರ್ಗ'**, ಸ್ವಪ್ನ ಬುಕ್ ಹೌಸ್, ಬೆಂಗಳೂರು

೧೧ ಕಾಂತೇಶರಡ್ಡಿ ಗೋಡಿಹಾಳ, ೨೦೧೨, **'ಧರ್ಮಕಲ್ಯಾಣ'**, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು

೧೨ ಕೃಷ್ಣ.ಎ.ಸುರಪುರ(ಸಂ), ೧೯೮೫, **'ಸಗರನಾಡ ದರ್ಶನ'**, ಮಹಾಕವಿ ಲಕ್ಷ್ಮೀಶ ವಾಚನ ಸಂಘ, ಸುರಪುರ.

೧೩ ಚಂದ್ರಕಾಂತ ಕರದಳ್ಳಿ(ಸಂ), ೨೦೧೭, **'ಮಂದಾಕಿನಿ'**, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು, ಶಹಾಪುರ

೧೪ ಚಿದಾನಂದಮೂರ್ತಿ ಎಂ, ೧೯೮೭, **'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ'**, ಸಾಹಿತ್ಯ ಕಲಾವಿದರ ಬಳಗ, ಬೆಂಗಳೂರು

೧೫ ಜೋಶಿ ಶಂ.ಬಾ, **'ಕರ್ನಾಟಕ ಸಂಸ್ಕೃತಿಕ ಪೂರ್ವ ಪೀಠಿಕೆ ಭಾಗ-೧ ಮತ್ತು ೨'**, ಸಮಾಜ ಬುಕ್ ಡಿಪೋ, ಧಾರವಾಡ

೧೬ ಜೋಶಿ ಶಂ.ಬಾ, ೧೯೯೭, **'ಹಾಲುಮತ ದರ್ಶನ'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭ ದೇವು ಪತ್ತಾರ, ೨೦೧೫, **'ಬಹಮನಿ ಸಾಮ್ರಾಜ್ಯ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೮ ನಾಗರಾಜ ಡಿ.ಆರ್, ೧೯೯೯, **'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ'**, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೧೯ ನಿಕಲ್ಸನ್.ಆರ್.ಎ, **'ದಿ ಐಡಿಯಾ ಆಫ್ ಪರ್ಸನಾಲಿಟಿ ಇನ್ ಸೂಫಿಸಂ'**

೨೦ ಪಾರಸನಾಥ ತೀವಾರಿ, **'ಕಬೀರವಾಣಿ ಸಂಗ್ರಹ'**

೨೧ ಫಕೀರ್ ಮುಹಮ್ಮದ್ ಕಟ್ಪಾಡಿ, ೨೦೧೫, **'ಸೂಫಿಸಂತರು'**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು

೨೨ ಬಸವರಾಜ ಕಲ್ಗುಡಿ, **'ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ'**

೨೩ ಬಸವರಾಜ ಕೋಡಗುಂಟಿ(ಸಂ), ೨೦೧೫, **'ದರಗಾ'**, ಬಂಡಾರ ಪ್ರಕಾಶನ, ಮಸ್ಕಿ

೨೪ ಬಸವಲಿಂಗ ಸೊಪ್ಪಿಮಠ(ಸಂ), ೧೯೯೮ **'ಕೊಡೇಕಲ್ ವಚನವಾಕ್ಯ'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫ ಬಸವಲಿಂಗ ಸೊಪ್ಪಿಮಠ, ೧೯೯೫, **'ಕೊಡೇಕಲ್ ಬಸವಣ್ಣ : ಒಂದು ಅಧ್ಯಯನ'**, ಶ್ರೀ ಕೊಡೇಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಕೊಡೇಕಲ್ಲ

೨೬ ಮೋಟ್ನಳ್ಳಿ ಹಸನಸಾಬ ಹಾಗೂ ಸಂ.ಎಂ.ಜಿ ಬಾರಾದಾರ, ೧೯೯೭, **'ಮೋಟ್ನಳ್ಳಿ ಸಹನ ಸಾಹೇಬರ ತತ್ವಪದಗಳು'**, ವೀರಶೈವ ಅಧ್ಯಯನ ಸಂಸ್ಥೆ, ಗವಗ

೨೭ ಮೋಹನಕೃಷ್ಣ ರೈ.ಕೆ, ೨೦೦೯, **'ಚರಿತೆ ಕಥನ'**, ಪಲ್ಲವಿ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ

೨೮ ರವೀಂದ್ರನಾಥ.ಕೆ(ಸಂ), ೨೦೦೦, **'ಬಸವಯುಗದ ವಚನೇತರ ಸಾಹಿತ್ಯ'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯ ರಹಮತ್ ತರೀಕೆರೆ, ೨೦೦೮, **'ಕರ್ನಾಟಕ ಸೂಫಿಗಳು'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦ ರಾಂಧಾರಿಸಿಂಹ ದಿನಕರ, **'ಸಂಸ್ಕೃತಿ ಕೆ ಚಾರ ಅಧ್ಯಾಯ್'**

೩೧ ರಾಂಪೂಜ(ನ್) ತೀವಾರಿ, **'ಸೂಫೀಮತ ಸಾಧನಾ ಔರ ಸಾಹಿತ್ಯ'**

೩೨ ವಾಲಿ ಎಂ. ಎಸ್(ಸಂ), ೧೯೮೨, **'ಸಾಲೋಟಗಿ ಶಿವಯೋಗಿಶ್ವರರ ಡಂಗುರ'**,

ವೀರಶೈವ ಅಧ್ಯಯನ ಸಂಸ್ಥೆ, ಗದಗ.

೩೩ ವೆಂಕಟೇಶ ಇರ್ವಾಡಿ(ಸಂ), ೨೦೦೪, **'ಮಂಟೇಸ್ವಾಮಿ ಕಾವ್ಯ'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪ ಶಿವಪ್ರಕಾಶ ಎಚ್.ಎಸ್, ೧೯೯೬, **'ಮೊದಲ ಕಟ್ಟಿನ ಪದ್ಯ'**, ಅಭಿನವ ಪ್ರಕಾಶನ, ಬೆಂಗಳೂರು

೩೫ ಶಿವಸಹಾಯ ಪಾಠಕ್, **'ಹಿಂದಿ ಸೂಫೀ, ಕಾವ್ಯದ ಸಮಗ್ರ ಅನುಶೀಲನ'**

೩೬ ಶಿವಾನಂದ ಎಸ್.ವಿರಕ್ತಮಠ, ೨೦೦೫, **'ಅಮರಕಲ್ಯಾಣ'**, ನುಡಿ ಪ್ರಕಾಶನ,ಹೊಸಪೇಟೆ

೩೭ ಶಿವಾನಂದ ಎಸ್. ವಿರಕ್ತಮಠ(ಸಂ), ೨೦೦೦, **'ರಾಚಪ್ಪಯ್ಯನ ಕೃತಿಗಳು'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮ ಶಿವಾನಂದ ಎಸ್. ವಿರಕ್ತಮಠ(ಸಂ), ೨೦೦೦, **'ವಚನ-ಸ್ವರವಚನ'**, ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯ ಶಿಶು ಸಂಗಮೇಶ ದೇಸಾಯಿ, ೨೦೧೦, **'ಶ್ರೀ ದಿಗ್ಗಿ ಸಂಗಮೇಶ್ವರ ಚರಿತ್ರೆ'**, ಶ್ರೀ ಸಂಗಮೇಶ್ವರ ಪ್ರಕಾಶನ, ದಿಗ್ಗಿ

೪೦ ಶ್ರೀಕಂಠಶಾಸ್ತ್ರಿ ಎಸ್, ೧೯೫೪, **'ಭಾರತೀಯ ಸಂಸ್ಕೃತಿ'**, ಪ್ರಸಾರಾಂಗ; ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೧ ಷಣ್ಮುಖಯ್ಯ ಅಕ್ಕೂರಮಠ, **'ಸೂಫೀ ಮತ್ತು ಶರಣರ ಅನುಭಾವ ಪಥ'**

೪೨ ಸಿದ್ದಣ್ಣ ಎಸ್.ಕುಂಬಾರ, ೨೦೧೨, **'ಶಹಾಪುರ ಪರಿಸರದ ಶಾಸನಗಳು ಮತ್ತು ದೇವಾಲಯಗಳು'**, ಸರ್ವಜ್ಞ ಪ್ರಕಾಶನ, ಶಹಾಪುರ

೪೩ ಸುಭಾಷ್ಚಂದ್ರ ಕೌಲಗಿ(ಸಂ), ೨೦೧೫, **'ಗಿರಿಸಂಪದ-೨'**, ಜಿಲ್ಲಾ ಕನ್ನಡ ಸಾಹಿತ್ಯ

ಪರಿಷತ್ತು, ಯಾದಗಿರಿ

೪೪ ಸೂಗಯ್ಯ ಹಿರೇಮಠ(ಸಂ). ೧೯೯೪. **'ಶಹಾಪುರ ದರ್ಶನ'**, ದರ್ಶನ ಪ್ರಕಾಶನ, ಶಹಾಪುರ

೪೫ ಹಜ್ರತ್ ಶೇಖ್ ಅಲಿಹುಜ್ವೇರಿ, **'ಕಶ್ಫುಲ್ ಮಹಜೂಬ್'**, ಶಾಂತಿ ಪ್ರಕಾಶನ, ಮಂಗಳೂರು.

೪೬ ಹೆಗಡೆ ಆರ್.ಪಿ, ೧೯೯೫. **'ಶಿಶುನಾಳ ಶರೀಫ್ ಮತ್ತು ಸಂತ ಕಬೀರ–ಒಂದು ತೌಲನಿಕ ಅಧ್ಯಯನ'**, ಸಮಾಜ ಶಿಕ್ಷಣ ವಿಶ್ವಸ್ತ ಸಮಿತಿ, ಸಿದ್ದಾಪುರ

೪೭ ಪ್ರಸನ್ನ, ೨೯ನೇ ಏಪ್ರಿಲ್ ೨೦೧೮, **'ಸಂತರು, ಸೂಫಿಗಳು ಹಾಗೂ ಅಳವೆ ಕಾಡುಗಳು'**, ಪ್ರಜಾವಾಣಿ ಅಭಿಮತ ಪುರವಾಣಿ.

ವಕ್ತೃಗಳ ವಿವರ

ಕ್ರ.ಸಂ	ಹೆಸರು	ವಯಸ್ಸು	ಹುದ್ದೆ	ಊರು
೧	ದೇವಯ್ಯಸ್ವಾಮಿ	೫೦	ಅರ್ಚಕರು	ದಿಗ್ಗಿ
೨	ಜಿ.ಎಸ್.ದೇಸಾಯಿ	೪೮	ನಿ.ಶಿಕ್ಷಕರು	ಶಹಾಪುರ
೩	ಬಸಣ್ಣ ನರಬೋಳಿ	೩೫	ಕೃಷಿ	ದಿಗ್ಗಿ
೪	ಸೈಯದ್ ಖಲೀಲುಲ್ಲಾ ಹುಸೇನಿ ಪರ್ಜಲ್ ದುವಂ ಸಜ್ಜಾದ ನಸಿಂ ಬೂರ್ಜ ಗೋಗಿ ಷರೀಫ್	೬೦	ಅರ್ಚಕರು	ಗೋಗಿ
೫	ಹುಸೇನಿ ಭಾಷಾ	೬೦	ಹಾಡುಗಾರ	ಗೋಗಿ
೬	ಸೂಫಿ ತಬ್ರಾಜ ಷರೀಫ್ ಸರ್ಮಸ್ಥ	೪೫	ಅರ್ಚಕರು	ಸಗರ
೭	ಅಂಬ್ರಪ್ಪ	೩೦	ಕೃಷಿ	ಸಗರ
೮	ಲಕ್ಷ್ಮಣ ಪೂಜಾರಿ	೫೫	ಕೃಷಿ	ನಾಗನಟಗಿ
೯	ಮಲ್ಲಪ್ಪ	೬೦	ಹಾಡುಗಾರ	ಶಹಾಪುರ
೧೦	ಸಂಗಣ್ಣ ಪ್ಯಾಟಿ	೪೮	ಕೃಷಿ	ದಿಗ್ಗಿ
೧೧	ಗುಲಾಮಹುಸೇನಿ ಹುಜರತಿ	೫೫	ಕೃಷಿ	ನಾಗನಟಗಿ
೧೨	ಸಿದ್ಧಯ್ಯಸ್ವಾಮಿ ಹಿರೇಮಠ	೫೫	ಕೃಷಿ	ಕರಕಳ್ಳಿ

III. ಛಾಯಚಿತ್ರಗಳು



೧. ಶಹಾಪುರ ಅಮರಕಲ್ಯಾಣ ಮೂಲಸ್ಥಳ ಭಾವಚಿತ್ರ



೨. ಡಿಗ್ಗಿ (ದಿಗ್ಗಿ) ಸಂಗಮನಾಥ ದೇವಾಲಯದ ದ್ವಾರಬಾಗಿಲು




೩. ಡಿಗ್ಗಿ ಸಂಗಮನಾಥನ ಗವಿ



೪. ಸಗರ ಸೂಫಿ ಸರ್ಮಸ್ಥ ದರ್ಗಾ



೫. ಸಗರ ಸೂಫಿ ಸರ್ಮಸ್ಥ ಸಮಾಧಿ



೬. ಗೋಗಿ ಸೂಫಿ ಸಂತ ಚಂದಾಹುಸೇನಿ ದ್ವಾರ ಬಾಗಿಲು



೭. ಗೋಗಿ ಸೂಫಿ ಸಂತ ಚಂದಾಹುಸೇನಿ ಅವರ ಸಮಾಧಿ



೮. ನಾಗನಟಗಿಯ ಪರಮಾನಂದ ಪ್ರಭು ಅವರ ಗುಡಿ